## ಅಧ್ಯಾಯ 15

# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

ಧಾರವಾಡ ಜಿಲ್ಲೆಯು ಸರ್ವೇಸಾಮಾನ್ಯವಾಗಿ ಆರೋಗ್ಯಕರ ಹವಾಮಾನ ಹೊಂದಿದೆ. 1818ರಲ್ಲಿ ಹಾಗೂ 1858 ಉತ್ತರಾರ್ಧದಲ್ಲಿ ಬಂದ ಕಾಲರಾ ಹಾಗೂ 1862ರಿಂದ ಮೇಲಿಂದ ಮೇಲೆ ಬರುವ ಚಳಿಜ್ವರ (ಮಲೇರಿಯಾ) ಹೆಚ್ಚು ಅಪಾಯಕಾರಿ ಪಿಡುಗುಗಳಾಗಿ ಪರಿಣಮಿಸಿದವು. 1898ರ ನಂತರ ಪ್ಲೇಗು ರೋಗವು ಧಾರವಾಡ ಹುಬ್ಬಳ್ಳಿಗಳಲ್ಲಿ ಸಾಕಷ್ಟು ಸಾವು ನೋವುಗಳನ್ನು ತಂದಿತು. ಇಡೀ ಮುಂಬೈ ರಾಜ್ಯದಲ್ಲಿ ಧಾರವಾಡ ಜಿಲ್ಲೆಯಲ್ಲೇ ಹೆಚ್ಚು ಸಾವುಗಳಾಗಿ ಮುಂದೆ ಅನೇಕ ವರ್ಷ ಪ್ಲೇಗು ಜನರನ್ನು ಕಂಗೆಡಿಸಿತು. 1876-77ರ ಭೀಕರ ಕ್ಷಾಮದಲ್ಲಿ ಜನಗಳ ಕಲುಷಿತ ನೀರಿನ ಸೇವನೆ, ಆಹಾರ ಕೊರತೆ, ಅಪೌಷ್ಠಿಕತೆ ಕಾರಣ ಕಾಲರಾದಂಥ ವ್ಯಾಪಕ 'ಹರಡುವಿಕೆಯಿಂದ ಜಿಲ್ಲೆಯು ಅಪಾರ ಸಾವು ನೋವುಗಳನ್ನು ಅನುಭವಿಸಿತು. ಕೆರೆ, ಭಾವಿಗಳಲ್ಲಿನ ಮಲೀನ ನೀರಿನ ಸೇವನೆಯಿಂದ ಹೆಚ್ಚು ಕಡಿಮೆ ಸಾಮಾನ್ಯವೆನಿಸುವ ನಾರುಹುಣ್ಣು ವ್ಯಾಧಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಆಗಾಗ ಕಂಡು ಬರುತ್ತಿತ್ತು. 1918ರಲ್ಲಿ 'ಗುದ್ದವ್ವನ ಬೇನೆ' ಎನಿಸಿದ ಇನ್‌ಫ್ಲುಯೆಂಜಾ ಜನರನ್ನು ಕಾಡಿತು.

ಆರೋಗ್ಯ ಸೇವಾ ವ್ಯವಸ್ಥೆ ಕಾಲಕಾಲಕ್ಕೆ ಉದ್ಭವಿಸುವ ಆರೋಗ್ಯ ಸಮಸ್ಯೆಗಳಿಗನುಗುಣವಾಗಿ ಬದಲಾಗುತ್ತ ಹೋಗಬೇಕಾಗುತ್ತದೆ. ಏಕೆಂದರೆ ನಾಲ್ಕೈದು ದಶಕಗಳ ಹಿಂದೆ ಇದ್ದ ಪ್ರಮುಖ ಆರೋಗ್ಯ ಸಮಸ್ಯೆಗಳಾದ ಸಿಡುಬು, ಪ್ಲೇಗು, ಕಾಲರಾ ಮಲೇರಿಯಾದಂತಹ ಮಾರಕ ಸಾಂಕ್ರಾಮಿಕ ರೋಗಗಳು ಈಗ ನಿರ್ಮೂಲನೆ ಆಗಿವೆ; ಇಲ್ಲವೆ ನಿಯಂತ್ರಣದಲ್ಲಿವೆ. ಆಧುನಿಕತೆ, ಔದ್ಯಮೀಕರಣ, ನಗರೀಕರಣ ಮುಂತಾದ ಹೊಸ ತಿರುವುಗಳು ಉಂಟುಮಾಡಿದ ಹೊಸ ಪಿಡುಗುಗಳು ಜನತೆಯ ಆರೋಗ್ಯಕ್ಕೆ ಅಪಾಯ ತಂದೊಡುತ್ತಿವೆ. ಹೃದಯ ರೋಗಗಳು, ರಕ್ತ ಒತ್ತಡಕ್ಕೆ ಸಂಬಂಧಿಸಿದ ಕಾಯಿಲೆಗಳು, ಕ್ಯಾನ್ಸರ್, ಅಪಘಾತಗಳು, ಶ್ವಾಸಕೋಶದ ರೋಗಗಳು, ಮಕ್ಕಳಲ್ಲಿ ಕಂಡುಬರುವ ಅಪೌಷ್ಠಿಕತೆ, ಅಂಧತ್ವ, ಅತಿಸಾರ ಮತ್ತು ದೊಡ್ಡವರಿಗೂ ಬರುವ ಕ್ಷಯ, ಕುಷ್ಠ ಇತ್ಯಾದಿಗಳು ಇನ್ನೂ ಪಿಡುಗುಗಳಾಗಿ ಉಳಿದಿವೆ. ಕ್ರಿ.ಶ. 2000ಕ್ಕೆ ದೇಶದ ಎಲ್ಲರಿಗೂ ಆರೋಗ್ಯ ಎಂಬ ಕಾರ್ಯಕ್ರಮದಡಿ ಸರ್ಕಾರ ತನ್ನೆಲ್ಲ ಪ್ರಯತ್ನಗಳನ್ನು ಮುಂದುವರಿಸಿದೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಮೂಲಕ ಸಾವಿನ ಪ್ರಮಾಣವನ್ನು ಸಾಕಷ್ಟು ತಗ್ಗಿಸಿದೆ. ಹಾಗೂ ಕುಟುಂಬ ಯೋಜನೆ ಜನನಪ್ರಮಾಣ ಇಳಿಸುವ ದಿಶೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಆರೋಗ್ಯವಂತ ಸಮಾಜದ ಗುರಿಯತ್ತ ನಾವು ಸಾಗುತ್ತಿದ್ದೇವೆ.

ಧಾರವಾಡ ಜಿಲ್ಲೆ ಬ್ರಿಟೀಶ ಆಡಳಿತಕ್ಕೆ ಒಳಪಡುವ ಪೂರ್ವದಲ್ಲಿ ಆಯುರ್ವೇದ ಯುನಾನಿ, ವೈದ್ಯ ಪದ್ಧತಿಗಳು ಹೆಚ್ಚು ರೂಢಿಯಲ್ಲಿ ಇದ್ದವು. ಈ ಪದ್ಧತಿಗಳ ಜೊತೆ ಜೊತೆಗೆ ಜಾನಪದ ವೈದ್ಯ ಅಥವಾ ನಾಟಿವೈದ್ಯ ನಾಗರೀಕತೆಯೊಂದಿಗೆ ಬೆಳೆದು ಬಂದಿದ್ದು, ವೈದ್ಯಕೀಯ ಪದ್ಧತಿಗಳ ತಾಯಿಬೇರು ಎಂದು ಭಾವಿಸಲ್ಪಡುತ್ತದೆ. ಗ್ರಾಮೀಣ ವೈದ್ಯರು, ಹಕೀಮರು ನಿರಕ್ಷರಿಗಳಾಗಿದ್ದರೂ ಕೂಡಾ ಸೂಕ್ಷ್ಮಮತಿಗಳು, ಅಪಾರ ಅನುಭವಶಾಲಿಗಳು ಆಗಿದ್ದು ಸಾಮಾನ್ಯ ಕಾಯಿಲೆಗಳಿಗೆ ಪ್ರಕೃತಿದತ್ತವಾಗಿ ದೊರೆಯುವ ಗಿಡಮೂಲಿಕೆ,

ಬೇರು, ತೊಗಟೆ ಮುಂತಾದವುಗಳನ್ನು ರೋಗ ನಿರೋಧಕಗಳಾಗಿ ಉಪಯೋಗಿಸುತ್ತಿರುವುದು ಕಂಡು ಬರುತ್ತದೆ. ಅರ್ಧ ತಲೆಶೂಲೆ, ಅಂಗಾಂಗಳ ಉಳುಕು, ಚೇಳು, ಹಾವು ಇನ್ನಿತರ ವಿಷ ಜಂತುಗಳ ಕಡಿತ, ಇವುಗಳಿಗೆ ಔಷಧಿಗಳನ್ನು ಕೊಡುವುದಲ್ಲದೆ, ಮಂತ್ರ ಹಾಕುವುದು, ತಾಯತ ಕಟ್ಟುವುದು ಕೂಡಾ ಇದ್ದದ್ದು ಕಂಡುಬರುವುದು. ಇದೆ ವಿಧಾನವನ್ನು ಇನ್ನುವರೆಗೂ ಕೆಲ ಹಳ್ಳಿಯ ಜನ ನಂಬಿಕೆ ಇಟ್ಟು ಮುಂದುವರಿಸಿಕೊಂಡು ಬಂದಿರುವುದು ಕಾಣ ಬರುತ್ತದೆ. ಹಾವು ಕಡಿತ ನಂಜು ಆದಾಗ ಹಿರೇಕೆರೂರು ತಾಲೂಕಿನ ಕಲ್ಯಾಣ ಚಾಳುಕ್ಯರ ಕಾಲದ ಬಾಳುಂಬೀಡಿನ ವಿಷಪರಿಹಾರೇಶ್ವರ ದೇವಾಲಯದ ಲಿಂಗಾಭಿಷೇಕದ ನೀರು ಕುಡಿದಲ್ಲಿ ವಾಸಿಯಾಗುವುದೆಂದು ಈಗಲೂ ಜನ ನಂಬಿದ್ದಾರೆ. ಆಯುರ್ವೇದ ವೈದ್ಯ ಪದ್ಧತಿ ಅಲೋಪತಿ ಬರುವ ಮುನ್ನ ಜನಪ್ರಿಯತೆ ಪಡೆದಿತ್ತು. ಸಣ್ಣ ಪುಟ್ಟ ಸಂಸ್ಥಾನಿಕರು ರಾಜವೈದ್ಯರನ್ನು ನೇಮಿಸುತ್ತಿದ್ದರು. ಎಲ್ಲ ರೀತಿಯ ರೋಗಿಗಳಿಗೆ ಔಷಧಿ ನೀಡುವುದರಲ್ಲಿ ಅವರು ಪರಿಣಿತರಾಗಿದ್ದರು. ಗುಡ್ಡಗಾಡು ಜನ ಹಾಗೂ ಲಂಬಾಣಿಗಳು ಆಯುರ್ವೇದ ಪಂಡಿತರಿಗೆ ಮೂಲಿಕೆಗಳನ್ನು ಒದಗಿಸುತ್ತಿದ್ದರು. ಈಗಲೂ ಸಹ ಜನರು ಮೇಲಿನ ಔಷಧಿಗಳಲ್ಲಿ ತಮ್ಮ ವಿಶ್ವಾಸ ಕಳೆದುಕೊಂಡಿಲ್ಲ.

ಮೊದ ಮೊದಲು ಅಲೋಪತಿ ಔಷಧಿಗಳು ಬ್ರಿಟೀಶ ಸೈನಿಕ ನೆಲೆ ಪ್ರದೇಶಗಳಲ್ಲಿ ಬಳಕೆಗೆ ಬಂದವು. ನಂತರದಲ್ಲಿ ಕ್ರಮೇಣ ಅವು ಜಿಲ್ಲಾ ವ್ಯಾಪಿಯಾದವು. ಸರ್ಕಾರಿ ಆಸ್ಪತ್ರೆಗಳ ಪ್ರಾರಂಭವಾದ ಮೇಲೆ ಅಲೋಪತಿ ವೈದ್ಯ ಪದ್ಧತಿ ಪ್ರಾರಂಭಗೊಂಡಿತು. ಧಾರವಾಡ, ಹುಬ್ಬಳ್ಳಿ, ಗದಗ ಹಾಗೂ ಹಾವೇರಿಗಳಲ್ಲಿ ಸರ್ಕಾರಿ ಆಸ್ಪತ್ರೆಗಳು ಕ್ರಮವಾಗಿ 1830, 1859, 1864 ಹಾಗೂ 1878ನೇ ಇಸ್ವಿಯಲ್ಲಿ ಪ್ರಾರಂಭಗೊಂಡವು.

ಸ್ವಾತಂತ್ರ್ಯನಂತರ ದೇಶದಲ್ಲಿ ಆರೋಗ್ಯ ರಕ್ಷಣೆಗಾಗಿ ಸರ್ಕಾರ ಕನಿಷ್ಟ ಅವಶ್ಯಕತೆಯ ಕಾರ್ಯಕ್ರಮದನ್ವಯ ಪ್ರಾಥಮಿಕ ಆರೋಗ್ಯ ರಕ್ಷಣೆ ನೀಡಲು ವಿವಿಧ ರೀತಿಯ ಆರೋಗ್ಯ ಸಂಸ್ಥೆಗಳು ಹಾಗೂ ಘಟಕಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಉಪಕೇಂದ್ರಗಳು, ಆರೋಗ್ಯ ಘಟಕಗಳು, ಪ್ರಸೂತಿ ಗೃಹಗಳು, ಪರಿಶಿಷ್ಟವರ್ಗದ ಜನರಿರುವ ಪ್ರದೇಶಗಳಲ್ಲಿ ಕನಿಷ್ಟ ಪ್ರಸೂತಿ ಸೌಲಭ್ಯ ಒದಗಿಸುವುದು, ಇಂಥ ಕಾರ್ಯಕ್ರಮಗಳು ಸಾಗಿಬಂದಿವೆ. ಉಪವಿಭಾಗ ಮಟ್ಟದಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳನ್ನು ತೆರೆಯುವ ಮೂಲಕ ಆರೋಗ್ಯ ಸೇವೆಯನ್ನು ಹೆಚ್ಚು ಹೆಚ್ಚು ಸಮರ್ಪಕ ಹಾಗೂ ವ್ಯಾಪಕಗೊಳಿಸಿ ಪ್ರತಿಯೊಬ್ಬರಿಗೂ ಆರೋಗ್ಯ ಸೇವೆ ಲಭ್ಯವಾಗುವಂತೆ ಮಾಡುತ್ತಿದೆ. ರಾಜ್ಯ ಪುನರ್ಘಟನೆಯಾಗುವ ಕಾಲಕ್ಕೆ ಧಾರವಾಡ ಜಿಲ್ಲೆಯಲ್ಲಿ ಸರಕಾರೀ ಆಸ್ಪತ್ರೆಗಳೇ ಅಲ್ಲದೆ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಬೋರ್ಡು ಮತ್ತು ಪುರಸಭೆಗಳು ಆಸ್ಪತ್ರೆಗಳನ್ನು ನಡೆಸುತ್ತಿದ್ದವು. ಧಾರವಾಡದ ಸಿವಿಲ್ ಆಸ್ಪತ್ರೆಯ ವಿನಾ ಹಿಂದಿನ ಸಂಸ್ಥಾನೀ ಪ್ರದೇಶಗಳಿಗೆ ಸೇರಿದ್ದ ಸವಣೂರು, ಕುಂದಗೋಳ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ದಲ್ಲಿದ್ದ ಸರಕಾರೀ ಆಸ್ಪತ್ರೆಗಳಲ್ಲದೆ ಆರು ಜಿಲ್ಲಾ ಬೋರ್ಡ್ ಆಸ್ಪತ್ರೆಗಳಿದ್ದವು. ಅವು ಹಾನಗಲ್, ಹಿರೇಕೆರೂರು, ಕಲಘಟಗಿ, ಮುಂಡರಗಿ, ರೋಣ ಹಾಗೂ ಶಿಗ್ಗಾಂವಿಗಳಲ್ಲಿ ಇದ್ದವು. ಗದಗ, ಹಾವೇರಿ, ಹುಬ್ಬಳ್ಳಿ, ನವಲಗುಂದ, ನರಗುಂದ ಮತ್ತು ರಾಣೆಬೆನ್ನೂರುಗಳಲ್ಲಿ ಪುರಸಭಾ ದವಾಖಾನೆಗಳಿದ್ದವು. ಐದು ಖಾಸಗಿ ಅನುದಾನಿಕ ಆಸ್ಪತ್ರೆಗಳು ಬ್ಯಾಡಗಿ (1), ಗದಗ (1), ಹೊಸರಿತ್ತಿ (1), ಮತ್ತು ಹುಬ್ಬಳ್ಳಿ (2)ಯಲ್ಲಿ ಇದ್ದವು. ಗದಗಿನಲ್ಲಿ ಒಂದು ಆಯುರ್ವೇದ ಔಷಧಾಲಯವೂ ಇತ್ತು. ಇದಲ್ಲದೆ ಜಿಲ್ಲೆಯಲ್ಲಿ ಸರಕಾರದಿಂದ ಧನ ಸಹಾಯ ಪಡೆದ ವೈದ್ಯರು 36 ಸ್ಥಳಗಳಲ್ಲಿ ಜನರಿಗೆ ಔಷಧೋಪಚಾರ ಮಾಡುತ್ತಿದ್ದರು. ಈ ಧನ ಸಹಾಯದ ಯೋಜನೆ 1936 ರಿಂದ ಜಾರಿಗೆ ಬಂದು, ಬೇರೆ ಬೇರೆ ಹಂತದ ಶಿಕ್ಷಣ ಪಡೆದ ವೈದ್ಯರಿಗೆ ಧನ ಸಹಾಯದ ದರ ಮಾಸಿಕ 80 ರಿಂದ 500 ರೂ. ವರೆಗೆ ಇದ್ದು ಇದಕ್ಕೆ 1951-52ರಲ್ಲಿ ರೂ. 56,000 ವೆಚ್ಚವಾಗಿತ್ತು.

1992-93ರಲ್ಲಿ 17 ಸರ್ಕಾರಿ ಆಸ್ಪತ್ರೆಗಳು, 85 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 32 ಪ್ರಾಥಮಿಕ ಆರೋಗ್ಯ ಘಟಕಗಳು, 600 ಪ್ರಾಥಮಿಕ ಆರೋಗ್ಯ ಉಪ ಕೇಂದ್ರಗಳು, 9 ಡಿಸ್‌ಪೆನ್ಸರಿಗಳು, 16 ಕುಟುಂಬ ಕಲ್ಯಾಣ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದವು. 1993-94ರಲ್ಲಿ ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ, ಆರೋಗ್ಯ ಸಂಸ್ಥೆಗಳಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ 7,94,278 ಹಾಗೂ ಒಳರೋಗಿಗಳಾಗಿ ಚಿಕಿತ್ಸೆ ಪಡೆದವರ ಸಂಖ್ಯೆ 16,588 ಆಗಿರುತ್ತದೆ.

**ಕೋಷ್ಟಕ 15.1 : ಧಾರವಾಡ ಜಿಲ್ಲೆಯ ಆರೋಗ್ಯ ಸಂಸ್ಥೆಗಳು ಸಿಬ್ಬಂದಿ ಹಾಗ ಇತರ ಮಾಹಿತಿ.**

| | 1983-84 | 84-85 | 85-86 | 86-87 | 87-88 | 1988-89 | 1989-90 (30.9.89 ರವರೆಗೆ) |
|---|---|---|---|---|---|---|---|
| 1) ಆರೋಗ್ಯ ಸಂಸ್ಥೆಗಳು | | | | | | | |
| 1. ಆಸ್ಪತ್ರೆಗಳು | 9 | 9 | 9 | 9 | 9 | 9 | 9 |
| 2. ಪ್ರಾಥಮಿಕ ಆರೋಗ್ಯ ಕೇಂದ್ರ | 39 | 44 | 44 | 57 | 60 | 60 | 60 |
| 3. ಪ್ರಾಥಮಿಕ ಆ. ಘಟಕಗಳು | 26 | 26 | 26 | 41 | 41 | 58 | 58 |
| 4. ಇತರ ಆಸ್ಪತ್ರೆಗಳು | 20 | 20 | 20 | 20 | 20 | 20 | 20 |
| 5. ಆರೋಗ್ಯ ಉಪ ಕೇಂದ್ರಗಳು | 541 | 586 | 586 | 600 | 600 | 600 | 600 |
| 6. ಹಾಸಿಗೆಗಳು | 2,155 | 2,155 | 2,155 | 2,151 | 2,211 | 2,211 | 2,211 |
| 2) ಆರೋಗ್ಯ ಸಿಬ್ಬಂದಿ | | | | | | | |
| 1. ಡಾಕ್ಟರರು | 111 | 115 | 120 | 120 | 126 | 126 | 138 |
| 2. ದಾದಿಯರು | 40 | 40 | 40 | 40 | 40 | 57 | 57 |
| 3. ಮಹಿಳಾ ಆರೋಗ್ಯ ಕಾರ್ಯಕರ್ತರು | 681 | 681 | 681 | 681 | 681 | 681 | 681 |
| 3) ಕುಟುಂಬ ಕಲ್ಯಾಣ | | | | | | | |
| 1. ಆಪರೇಶನ್‌ಗಳು | 21,858 | 18,797 | 28,181 | 25,764 | 21,159 | 21,522 | 10,709 |
| 2. ಆಯ್ ಯು ಡಿ | 4,490 | 7,312 | 13,327 | 13,108 | 11,726 | 11,890 | 4,890 |
| 3. ಓ.ಪಿ. ಉಪಯೋಗಿಸುವರು | 2,524 | 7,942 | 5,744 | 5,579 | 5,520 | 5,939 | 3,344 |
| 4. ಸಿ.ಸಿ. ಉಪಯೋಗಿಸವರು | 6,671 | 9,708 | 29,536 | 11,923 | 21,158 | 22,319 | 11,688 |

ಆಧಾರ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ

**ಎಸ್.ಎಂ.ಪಿ. ಕೇಂದ್ರಗಳು**

ಗ್ರಾಮಾಂತರ ಪ್ರದೇಶಗಳಿಗೆ ವೈದ್ಯಕೀಯ ಸೇವೆ ಒದಗಿಸಲು ಸರ್ಕಾರವು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಎಸ್.ಎಂ.ಪಿ (ಸಬ್ಸಿಡಿಯರಿ ಮೆಡಿಕಲ್ ಪ್ರಾಕ್ಟಿಶನರ್ಸ್ ಸೆಂಟರ್ಸ್)ಗಳನ್ನು ಆರಂಭ ಮಾಡಿತು. ಇವು ಮೇಲೆ ಹೇಳಿದಂತೆ 1934ರಿಂದಲೇ ಕಾರ್ಯಾರಂಭ ಮಾಡಿದ್ದವು.ಇವು ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್ ಧಾರವಾಡ ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳು ಹೀಗಿದ್ದವು : 1.ಧಾರವಾಡ ತಾ|| - ಮುಗದ; 2. ಹುಬ್ಬಳ್ಳಿ ತಾ|| - ಯರಗುಪ್ಪಿ, ಛಬ್ಬಿ, ಹೆಬಸೂರು; 3. ನವಲಗುಂದ ತಾ|| - ಅಣ್ಣಿಗೇರಿ ; 4. ಗದಗ ತಾ|| - ಮುಳಗುಂದ, ಲಕ್ಕುಂಡಿ, ಹೊಂಬಳ; 5. ಮುಂಡರಗಿ ತಾ|| - ಡಂಬಳ; 6. ಶಿಗ್ಗಾಂವಿ ತಾ|| - ತಡಸ, ಹುಲಗೂರು, ಅಂದಲಗಿ, ಧುಂಡಶಿ; 7. ರಾಣೆಬೆನ್ನೂರ ತಾ|| - ಮೆಡ್ಲೇರಿ, ಕುಪ್ಪೇಲೂರು, ತುಮ್ಮಿನಕಟ್ಟಿ; 8. ಹಾನಗಲ್ ತಾ|| - ತಸವಳ್ಳ, ಬೊಮ್ಮನಹಳ್ಳಿ, ಆಡೂರು, ಕುಸುನೂರು; 9. ಹಾವೇರಿ ತಾ|| - ಗುತ್ತಲ, ಸೂರಣಗಿ ; 10. ಹಿರೇಕೆರೂರು ತಾ|| - ಹಂಸಭಾವಿ, ಕುನ್ನೂರು, ಸೂಡಂಬಿ, ಮಾಸೂರು; ತಡಕೇನ ಹಳ್ಳಿ; 11. ನರಗುಂದ ತಾ|| - ಕೊಣ್ಣೂರು, ಮೆಣಸಿಗಿ; 12. ರೋಣ ತಾ|| - ಸೂಡಿ; 13. ಕುಂದಗೋಳ ತಾ|| - ಎರೆಬೂದಿಹಾಳ, ಎಲೆವಾಳ; 14. ಕಲಘಟಗಿ ತಾ|| - ಮಿಶ್ರಿಕೋಟಿ, ಹುಲಕೊಪ್ಪ, ತಬಕದಾನಿಹಳ್ಳಿ ಹಾಗೂ ಬೊಮ್ಮಿಗಟ್ಟಿ

(ಆಧಾರ - ಪ್ರಥಮ ಪಂಚವಾರ್ಷಿಕ ಯೋಜನೆ ಮುಂಬೈ ರಾಜ್ಯ, ಧಾರವಾಡ ಜಿಲ್ಲೆ, 1954)

## ಜನನ ಮರಣ ಅಂಕಿ ಅಂಶಗಳು

ಜನನ ಮರಣ ಅಂಕಿ ಅಂಶಗಳ ಪ್ರಾಮುಖ್ಯತೆ ಹಾಗೂ ಪ್ರಯೋಜನ (ಉಪಯುಕ್ತತೆ) ಅರಿಯದ ಜನ ಸಾಮಾನ್ಯರು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿಯೂ ಕೂಡಾ ಈಗಲೂ ಇದ್ದು ಜನನ ಮರಣ ಘಟನೆಗಳ ನೋಂದಣಿ ಮಾಡಿಸುವಲ್ಲಿ ಅವರ ಪ್ರಗತಿ ಅಷ್ಟೇನೂ ಸಮಾಧಾನಕರವಾಗಿಲ್ಲ, ಜನನ ಮರಣ ಅಂಕಿ ಅಂಶಗಳ ಸಂಗ್ರಹಣೆ ಶತಮಾನದಷ್ಟು ಹಳೆಯದಾದರೂ ಕೂಡಾ ಪ್ರಾರಂಭದಲ್ಲಿ ಇದು ಹೆಚ್ಚು ವೈಜ್ಞಾನಿಕವಾಗಿರಲಿಲ್ಲ, ಹಳ್ಳಿಗಳಲ್ಲಿ ಪೋಲಿಸ ಪಾಟೀಲ ಅಥವಾ ಪಟೇಲರು ಮತ್ತು ಪಟ್ಟಣಗಳಲ್ಲಿ ಪುರಸಭೆಯ ಸಿಬ್ಬಂದಿ ಈ ಕಾರ್ಯವನ್ನು ಮಾಡುತ್ತಿದ್ದರು. ಹೀಗೆ ದಾಖಲು ಮಾಡಿದ ಅಂಕಿ ಅಂಶಗಳನ್ನು ಪ್ರತೀ ತಿಂಗಳು ಸಂಬಂಧಪಟ್ಟ ತಾಲೂಕು ತಹಶೀಲದಾರರಿಗೆ ಕಳುಹಿಸಿಕೊಡುತ್ತಿದ್ದರು. ಸ್ವಾತಂತ್ರ್ಯಾನಂತರ, ಅಂದರೆ ಇತ್ತೀಚೆಗೆ 1969ರಲ್ಲಿ ಜನನ ಮರಣ ಮತ್ತು ವಿವಾಹ ನೋಂದಣಿ ಕಾನೂನನ್ನು ಜಾರಿಗೆ ತರಲಾಯಿತು. ಈ ಕಾನೂನು ರೀತ್ಯಾ ಪ್ರತಿಯೊಬ್ಬರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಜನನ ಮರಣ ಹಾಗೂ ವಿವಾಹ ಘಟನೆಗಳನ್ನು ಆಯಾ ಕ್ಷೇತ್ರಗಳ ಸಹಾಯಕ ನೋಂದಣಿ ಅಧಿಕಾರಿಗಳಲ್ಲಿ ನೊಂದಾಯಿಸಬೇಕಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಯ ಗ್ರಾಮಲೆಕ್ಕಿಗರಿಂದ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಪುರಸಭೆ ಅಥವಾ ನಗರ ಸಭೆಗಳಿಂದ ಈ ನೋಂದಣಿ ಕಾರ್ಯ ನಡೆಯುತ್ತಿದೆ. 1969ರ ಈ ಕಾನೂನು 1971ರ ಜನವರಿಯಿಂದ ಜಾರಿಗೆ ಬಂದಿದೆ. ಈ ಕಾನೂನಿನ ಪ್ರಕಾರ ಜಿಲ್ಲಾಧಿಕಾರಿಗಳು ಜಿಲ್ಲೆಯ ನೋಂದಣಿ ಅಧಿಕಾರಿಗಳು ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಜಿಲ್ಲಾಧಿಕಾರಿಗಳು ಅಪರ ಜಿಲ್ಲಾ ನೋಂದಣಿ ಅಧಿಕಾರಿಗಳಾಗಿರುತ್ತಾರೆ.

**ಮಾದರಿ ನೊಂದಣಿ ವ್ಯವಸ್ಥೆ :** ಜನನ ಮರಣ ಅಂಕಿ ಅಂಶಗಳ ಸಂಗ್ರಹಣೆಗಾಗಿ, ಭಾರತದ ಜನನ ಮರಣ ವಿವಾಹಗಳ ಮಹಾಪಂಜಕಾರರು (ರಿಜಿಸ್ಟ್ರಾರ್ ಜನರಲ್) ಮಾದರಿ ನೋಂದಣಿ ವ್ಯವಸ್ಥೆಯನ್ನು (ಸ್ಯಾಂಪಲ್ ರಿಜಿಸ್ಟ್ರೇಶನ್ ಸಿಸ್ಟಮ್) ಅನುಷ್ಠಾನಕ್ಕೆ ತಂದಿದ್ದಾರೆ. ಈ ವ್ಯವಸ್ಥೆಯ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಜನನ ಮರಣ ಅಂಕಿ ಅಂಶಗಳನ್ನು ಸತತವಾಗಿ ದಾಖಲಾತಿ ಮಾಡುವುದು, ಪಡೆದ ಅಂಕಿ ಅಂಶಗಳನ್ನು ಹೆಚ್ಚು ಹೆಚ್ಚು ನಿಖರಗೊಳಿಸಿ ಅವುಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿ ಸುಧಾರಿಸುವುದರ ಜೊತೆಗೆ ಮರಣದ ಕಾರಣಗಳನ್ನು ತಿಳಿಸುವುದರ ಮೂಲಕ ಸಾರ್ವಜನಿಕರ ಆರೋಗ್ಯ ಸುಧಾರಣಾ ಕಾರ್ಯಕ್ರಮಗಳನ್ನು ರೂಪಿಸಲು ಸಹಕರಿಸುವುದು. ಸಂಗ್ರಹಿಸಿದ ಅಂಕಿ ಅಂಶಗಳನ್ನು ಅಂಕಿ ಸಂಖ್ಯೆ ಶಾಸ್ತ್ರದ ಅನೇಕ ಪ್ರಕ್ರಿಯೆಗಳಿಗೆ ಒಳಪಡಿಸಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿ, ಹುಟ್ಟು ಸಾವು ಮೊದಲಾದ ಪ್ರಮಾಣಗಳನ್ನು ಕಂಡು ಹಿಡಿಯಲಾಗುವುದು.

ಮಾದರಿ ನೋಂದಣಿಗಾಗಿ ಧಾರವಾಡ ಜಿಲ್ಲೆಯಲ್ಲಿ ಧಾರವಾಡ - ಹುಬ್ಬಳ್ಳಿ ನಗರ ಹಾಗೂ ಗದಗ - ಬೆಟಗೇರಿ, ಗದಗ ತಾಲೂಕಿನ ಮುಳಗುಂದ, ಹಾಗೂ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ ಪಟ್ಟಣ ಪ್ರದೇಶ, ಧಾರವಾಡ ತಾಲೂಕಿನ ಮುಗದ (ಒಂದು ಭಾಗ) ಹಾನಗಲ್ ತಾಲೂಕಿನ ಹಂದಿನಾಳ ಹಾಗೂ ಸೋಮಸಾಗರ, ಹಾವೇರಿ ತಾಲೂಕಿನ ದೇವಗಿರಿ (ಭಾಗ), ಹಿರೇಕೆರೂರ ತಾಲೂಕಿನ ಚೆನ್ನಳ್ಳಿ ಹಾಗೂ ರಟ್ಟೀಹಳ್ಳಿ (ಭಾಗ), ರಾಣೆಬೆನ್ನೂರ ತಾಲೂಕಿನ ಹೊನ್ನತ್ತಿ (ಭಾಗ) ಮತ್ತು ಯಕಲಾಸಪುರ, ರೋಣ ತಾಲೂಕಿನ ಬಸರಕೋಡ, ಲಕ್ಕಲಕಟ್ಟಿ ಮೆಣಸಿಗಿ (ಭಾಗ), ಸವಣೂರ ತಾಲೂಕಿನ ಹತ್ತಿಮತ್ತೂರ (ಭಾಗ) ಮತ್ತು ಕಾರಡಗಿ (ಭಾಗ), ಶಿಗ್ಗಾಂವಿ ತಾಲೂಕಿನ ಹೋತನಹಳ್ಳಿ (ಭಾಗ), ಹಾಗೂ ಶಿರಹಟ್ಟಿ ತಾಲೂಕಿನ ಉಂಡೇನಹಳ್ಳಿ. ಈ ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳನ್ನು ಘಟಕಗಳನ್ನಾಗಿ ಆರಿಸಿಕೊಳ್ಳಲಾಗಿದೆ.

ಒಂದು ನಿರ್ದಿಷ್ಟ ಪ್ರದೇಶದಲ್ಲಿ 1000 ಜನ ಸಂಖ್ಯೆಗೆ ಒಂದು ವರ್ಷದಲ್ಲಿ ಆಗುವ ಜನನಗಳಿಗೆ ಜನನ ಪ್ರಮಾಣವೆಂದೂ, ಮರಣಗಳಿಗೆ ಮರಣ ಪ್ರಮಾಣವೆಂದೂ ಕರೆಯುವರು. ಅದೇ ರೀತಿ ಜನಸಂಖ್ಯಾ ಅಧ್ಯಾಯನದಲ್ಲಿ ಶಿಶುಗಳ ಮರಣ ಪ್ರಮಾಣಗಳು ಇವೆ. ಸತ್ತು ಹುಟ್ಟುವ ಮಕ್ಕಳು, ಹೆರಿಗೆ ಕಾಲದಲ್ಲಿ ತಾಯಂದಿರ ಸಾವು ಇವೇ ಮೊದಲಾದವು ಸಾಮಾಜಿಕ ಆರೋಗ್ಯ ಸಮಸ್ಯೆಗಳಾಗಿದ್ದು, ಇವುಗಳಿಗೆ ಹಲವಾರು ಕಾರಣಗಳಿವೆ. ಆದ ಕಾರಣ ಈ ಪ್ರಮಾಣಗಳನ್ನು ಸಮಾಜದ ಆರೋಗ್ಯ ಸ್ವಾಸ್ಥ್ಯಗಳ ಸೂಚಿ ಎಂದು ಪರಿಗಣಿಸಲಾಗುವುದು. ಜನನ ಮರಣ ಪ್ರಮಾಣಗಳನ್ನು ವಲಯಗಳ ಆಧಾರದ ಮೇಲೆ ತಿಳಿಸುವುದರಿಂದ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ವಿವರಗಳು ಲಭ್ಯವಿರುವುದಿಲ್ಲ. ಆದ್ದರಿಂದ ಕರ್ನಾಟಕ ರಾಜ್ಯದ ಜನನ ಮರಣ ಪ್ರಮಾಣಗಳನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗೆ ಬೇರೆ ಬೇರೆಯಾಗಿಯೂ ಮತ್ತು ಒಟ್ಟಾಗಿಯೂ 1976ರಿಂದ 1990ರವರೆಗೆ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

**ಕೋಷ್ಟಕ 15.2 : ಧಾರವಾಡ ಜಿಲ್ಲೆಯ 1980ರಿಂದ 1991ರವರೆಗಿನ ಜನನ ಮರಣ ನೋಂದಣಿ ವಿವರಗಳು**

| ಕ್ರ.ಸಂ. ಜಿಲ್ಲೆಯಲ್ಲಿ ವರದಿಯಾದ | | 1980 | 1981 | 1982 | 1983 | 1984 | 1985 | 1986 | 1987 | 1988 | 1989 | 1990 | 1991 |
|---|---|---|---|---|---|---|---|---|---|---|---|---|---|
| 1. ಜನನಗಳ ಸಂಖ್ಯೆ | | 59,197 | 49,836 | 59,079 | 62,580 | 57,393 | 53,363 | 80,545 | 63,304 | 67,212 | 73,384 | 78,402 | 78,832 |
| 2. ಮರಣಗಳ ಸಂಖ್ಯೆ | | 11,301 | 18,391 | 17,483 | 17,697 | 17,526 | 15,379 | 22,997 | 17,174 | 20,117 | 19,985 | 20,056 | 24,615 |
| 3. ಸತ್ತುಹುಟ್ಟಿದ ಮಕ್ಕಳ ಸಂಖ್ಯೆ | | 682 | 562 | 221 | 750 | 499 | 439 | 610 | 567 | 608 | 401 | 498 | 570 |
| 4. ಶಿಶು ಮರಣ ಸಂಖ್ಯೆ | | 1,242 | 1,609 | 1,691 | 1,406 | 1,199 | 820 | 1,060 | 1,044 | 1,258 | 1,373 | 1,026 | 1,951 |
| 5. ಹೆರಿಗೆ ಕಾಲದ ತಾಯಂದಿರ ಮರಣದ ಸಂಖ್ಯೆ | | 78 | 95 | 75 | 56 | 40 | 47 | 41 | 36 | 60 | 66 | 28 | 48 |
| 6. ಜನನ ಪ್ರಮಾಣ * | ಗ್ರಾ. | 28.9 | 29.2 | 28.8 | 30.2 | 20.9 | 30.9 | 29.9 | 29.9 | 30.1 | 29.1 | 29.0 | 27.9 |
| | ನ. | 24.4 | 25.7 | 25.7 | 26.0 | 28.5 | 26.2 | 26.8 | 26.3 | 24.9 | 25.1 | 25.0 | 24.0 |
| | ಒಟ್ಟು | 27.6 | 28.3 | 27.9 | 29.1 | 30.3 | 29.6 | 29.0 | 28.9 | 28.7 | 28.0 | 28.0 | 26.9 |
| 7. ಮರಣ ಪ್ರಮಾಣ * | ಗ್ರಾ. | 10.7 | 10.2 | 10.2 | 10.6 | 10.7 | 9.8 | 9.4 | 9.7 | 9.5 | 9.6 | 8.8 | 9.8 |
| | ನ. | 6.6 | 6.3 | 6.4 | 6.0 | 6.6 | 6.1 | 6.8 | 6.1 | 7.0 | 6.5 | 6.1 | 6.9 |
| | ಒಟ್ಟು | 9.6 | 9.1 | 9.2 | 9.3 | 9.6 | 8.8 | 8.7 | 8.7 | 8.8 | 8.8 | 8.1 | 9.0 |
| 8. ಶಿಶುಗಳ ಮರಣ ಪ್ರಮಾಣ * | ಗ್ರಾ. | 79 | 77 | 71 | 80 | 84 | 80 | 82 | 86 | 83 | 89 | 80 | 87 |
| | ನ. | 45 | 45 | 47 | 41 | 43 | 41 | 47 | 41 | 46 | 53 | 39 | 47 |
| | ಒಟ್ಟು | 71 | 69 | 65 | 71 | 74 | 69 | 73 | 75 | 74 | 80 | 70 | 77 |

* ಇಡೀ ಕರ್ನಾಟಕಕ್ಕೆ ಸಂಬಂಧಿಸಿದೆ.

ಆಧಾರ :- ಭಾರತದ ಮಹಾನೋಂದಣಾಧಿಕಾರಿಗಳು ಒದಗಿಸುವ ಮಾದರಿ ದಾಖಲಾತಿ ಅಂಕಿ ಅಂಶಗಳು ಕ್ರಮ ಸಂಖ್ಯೆ 6-8

ಆಧಾರ :- ಜನನ ಮರಣ ನೋಂದಣಿ ಅಧಿನಿಯಮ, 1969 ವಾರ್ಷಿಕ ವರದಿ ಕ್ರಮ ಸಂಖ್ಯೆ 1-5

## ಕೋಷ್ಟಕ 15.3 : ಧಾರವಾಡ ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ಕಳೆದ ದಶಕದಲ್ಲಿ ಸತ್ತವರ ಸಂಖ್ಯೆ

| ಕ್ರ.ಸಂ. | ಮರಣದ ಕಾರಣ | 1980 | 1981 | 1982 | 1983 | 1984 | 1985 | 1986 | 1987 | 1988 | 1989 | 1990 | 1991 |
|---|---|---|---|---|---|---|---|---|---|---|---|---|---|
| 1. | ಪ್ಲೇಗು | | - | - | - | - | - | - | - | - | - | - | - |
| 2. | ಕಾಲರಾ | - | 30 | 24 | 10 | 8 | 22 | 56 | 48 | 35 | 16 | 29 | 17 |
| 3. | ಮಲೇರಿಯಾ | 149 | 49 | 12 | 48 | 22 | 33 | 19 | 32 | 31 | 22 | 14 | |
| 4. | ಟಾಯಿಫಾಯಿಡ್ | 57 | 35 | 49 | 30 | 28 | 14 | 24 | 16 | 21 | 46 | 44 | 27 |
| 5. | ಇತರ ಜ್ವರ | 2,902 | 2,494 | 2,583 | 1,818 | 1,644 | 1,227 | 2,210 | 1,282 | 1,540 | 1,276 | 1,969 | 1,170 |
| 6. | ಬೇಧಿ | 298 | 219 | 190 | 143 | 100 | 66 | 68 | 50 | 159 | 77 | 155 | 191 |
| 7. | ಉಸಿರಾಟ ರೋಗ | 3,250 | 1,973 | 272 | 2,390 | 302 | 73 | 300 | 103 | 29 | 101 | 33 | 53 |
| 8. | ಕ್ಷಯ | 620 | 6 | 570 | 646 | 564 | 481 | 917 | 434 | 890 | 844 | 648 | 766 |
| 9. | ಕುಷ್ಠರೋಗ | 10 | 9 | 15 | 9 | 14 | 3 | 13 | 7 | 54 | 9 | 8 | 10 |
| 10. | ಹೆರಿಗೆ ಕಾಲದ ಮರಣ | 78 | 95 | 75 | 56 | 40 | 47 | 41 | 36 | 60 | 66 | 28 | 48 |
| 11. | ಆತ್ಮಹತ್ಯೆ | 40 | 28 | 30 | 62 | 27 | 14 | 29 | 15 | 34 | 49 | 30 | 34 |
| 12. | ನೀರಿನಲ್ಲಿ ಮುಳುಗಿದ್ದು | 102 | 69 | 63 | 31 | 49 | 30 | 9 | 52 | 59 | 30 | 14 | 46 |
| 13. | ಗಾಯ ಮತ್ತು ಅಪಘಾತಗಳು | 65 | 106 | 169 | 119 | 125 | 134 | 373 | 83 | 108 | 226 | 206 | 175 |
| 14. | ಕ್ರೂರ ಪ್ರಾಣಿಗಳಿಂದ ಸಾವು | 1 | _ | 3 | 2 | 1 | 3 | 4 | 1 | 4 | 6 | 2 | 8 |
| 15. | ಹಾವು ಕಡಿತ | 32 | 44 | 34 | 33 | 37 | 35 | 47 | 40 | 81 | 122 | 83 | 46 |
| 16. | ಹುಚ್ಚು ನಾಯಿ ಕಡಿತ | 11 | 10 | 14 | 10 | 12 | 8 | 10 | 8 | 15 | 9 | 7 | 5 |
| 17. | ಧನುರ್ವಾಯು | 39 | 22 | 61 | 16 | 41 | 26 | 81 | 31 | 248 | 236 | 284 | 233 |
| 18. | ಶೀತಕಾಯಿಲೆ | 39 | 29 | 95 | 188 | 174 | 28 | 163 | 108 | 85 | 106 | 127 | 99 |
| 19. | ನಾಯಿಕೆಮ್ಮು | 7 | _ | 3 | 1 | 9 | 1 | 1 | 1 | 19 | 9 | 1 | 1 |
| 20. | ಪೋಲಿಯೋ | 8 | 6 | 6 | 5 | 5 | 15 | 7 | 14 | 20 | 7 | 16 | 12 |
| 21. | ಪೋಲಿಯೋ | _ | _ | _ | _ | 4 | 15 | 15 | 4 | 9 | 7 | 4 | 5 |

| ಕ್ರ.ಸಂ. | ಮರಣದ ಕಾರಣ | 1980 | 1981 | 1982 | 1983 | 1984 | 1985 | 1986 | 1987 | 1988 | 1989 | 1990 | 1991 |
|---|---|---|---|---|---|---|---|---|---|---|---|---|---|
| 22. | ಶ್ವಾಸಕೋಶದ ಕಾಯಿಲೆ | _ | 634 | 29 | 7 | 17 | 1 | 22 | 15 | 20 | 48 | 63 | 28 |
| 23. | ವಿಷ ಸೇವನೆ : ವಿಷಾಹಾರ | _ | | | | 149 | 37 | 53 | 36 | 92 | 139 | 107 | 71 |
| 24. | ದಡಾರ ಅಮ್ಮ : ಗೊಬ್ಬರ | _ | 52 | 132 | 36 | 51 | 35 | 27 | 7 | 34 | 23 | 12 | 20 |
| 25. | ಕ್ಯಾನ್ಸರ್ (ಅರ್ಬುದ) | _ | 348 | 382 | 361 | 448 | 377 | 1555 | 468 | 628 | 628 | 516 | 545 |
| 26. | ಸಿಹಿಮೂತ್ರ (ಮಧುಮೇಹ) | _ | 70 | 31 | 55 | 20 | 15 | 38 | 16 | 56 | 88 | 55 | 35 |
| 27. | ರಕ್ತಹೀನತೆ | _ | 26 | 478 | 28 | 44 | 61 | 62 | 30 | 94 | 85 | 108 | 55 |
| 28. | ಮಿದುಳುರೋಗ | | 6 | 9 | 10 | 116 | 27 | 45 | 25 | 36 | 42 | 32 | 45 |
| 29. | ಹೃದಯ ಕಾಯಿಲೆ | _ | 26 | 60 | 44 | 79 | 114 | 35 | 39 | 140 | 152 | 158 | 91 |
| 30. | ಹೃದಯಾಘಾತ | _ | 341 | 324 | 390 | 495 | 455 | 969 | 659 | 891 | 1,205 | 602 | 1,092 |
| 31. | ನ್ಯೂಮೋನಿಯ | _ | 8 | 16 | _ | 7 | | 6 | 34 | 145 | 45 | 10 | 21 |
| 32. | ಇನ್‌ಫ್ಲುಯೆಂಜಾ | _ | 7 | 14 | _ | 6 | 2 | 2 | 2 | 7 | 15 | 4 | 8 |
| 33. | (ದಮ್ಮುರೋಗ) ಅಸ್ತಮ | _ | 2,360 | 2,504 | 1,540 | 2,618 | 2,729 | 3,220 | 3,017 | 3,433 | 3,565 | 3,985 | 4,320 |
| 34. | ಕಾಮಾಲೆ | _ | 43 | 73 | 16 | 80 | 84 | 48 | 13 | 96 | 82 | 51 | 81 |
| 35. | ಇತರ ಕಾಯಿಲೆ | 3,290 | 7,271 | 6,725 | 8,925 | 9,714 | 7,703 | 11,249 | 9,969 | 7,633 | 7,700 | 8,198 | 11,481 |
| 36. | ಕಾಯಿಲೆ ಸೂಚಿಸದೇ ಇದ್ದದ್ದು | 303 | 1,975 | 2,438 | 668 | 476 | 1,459 | 1,279 | 479 | 3,311 | 2,895 | 2,445 | 3,462 |
| | ಒಟ್ಟು | 11,301 | 18,391 | 17,483 | 17,697 | 17,526 | 15,379 | 22,997 | 17,174 | 20,117 | 19,985 | 20,056 | 24,615 |

ಆಧಾರ : ಜನನ ಮರಣ ನೋಂದಣಿ ಅಧಿನಿಯಮ, 1969ರ ವಾರ್ಷಿಕ ವರದಿ, ಘಟನೆಗಳ

1976 ರಿಂದ 1990ರವರೆಗೆ ಧಾರವಾಡ ಜಿಲ್ಲೆಯಲ್ಲಿ ಸತ್ತು ಹುಟ್ಟಿದ ಮಕ್ಕಳ ಸಂಖ್ಯೆ, ಹೆರಿಗೆ ಕಾಲದಲ್ಲಿ ಸತ್ತ ತಾಯಂದಿರ ಸಂಖ್ಯೆ, ಶಿಶುಗಳ ಸಾವಿನ ಸಂಖ್ಯೆಗಳನ್ನು ಜೊತೆ ಜೊತೆಗೆ ಕರ್ನಾಟಕ ರಾಜ್ಯದ ಶಿಶುಗಳ ಮರಣ ಪ್ರಮಾಣವನ್ನು ಕೊಡಲಾಗಿದೆ.

**ಭಾರತೀಯ ವೈದ್ಯಪದ್ಧತಿ**

ಭಾರತೀಯ ವೈದ್ಯಪದ್ಧತಿ ಹಾಗೂ ಹೋಮಿಯೋಪತಿ 1972ರಲ್ಲಿ ಆರೋಗ್ಯ ಇಲಾಖೆಯಿಂದ ಬೇರ್ಪಟ್ಟು ಸ್ವತಂತ್ರ ನಿರ್ದೇಶನಾಲಯವಾಗಿ ರೂಪುಗೊಂಡಿತು. ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ, ಪ್ರಕೃತಿ ಚಿಕಿತ್ಸೆ ಹಾಗೂ ಸಿದ್ಧ ಇವು ನಿರ್ದೇಶನಾಲಯದ ವ್ಯಾಪ್ತಿಗೆ ಬರುತ್ತವೆ. ಈ ನಿರ್ದೇಶನಾಲಯವು 3 1/2 ವರ್ಷಗಳ ದಾದಿಯರ ತರಬೇತಿ, 10 ತಿಂಗಳ ಆಯುರ್ವೇದ ಹಾಗೂ ಯುನಾನಿ ಔಷಧಿಗಳಲ್ಲಿ ಫಾರ್ಮಸಿಸ್ಟ ತರಬೇತಿ, ಪಂಚಕರ್ಮ ಹಾಗೂ ನೇತ್ರ ಚಿಕಿತ್ಸೆಯಲ್ಲಿ ಅಲ್ಪಾವಧಿ ತರಬೇತಿ ನೀಡುತ್ತಿದೆ. ಪ್ರಸ್ತುತ ಈ ಇಲಾಖೆ ಜಿಲ್ಲೆಯಲ್ಲಿ ಹಲವು ಆಯುರ್ವೇದ, ನಾಲ್ಕು ಹೋಮಿಯೋಪತಿ ಮತ್ತು ಒಂದು ಪ್ರಕೃತಿ ಚಿಕಿತ್ಸೆ ಸಂಸ್ಥೆಗಳನ್ನು ನಡೆಸುತ್ತಿದೆ. ಜಿಲ್ಲೆಯ ಹುಬ್ಬಳ್ಳಿ, ಮಂಟೂರು, ರಾಯನಾಳ, ಗದಗ, ಬೆಟಗೇರಿ (ಆಸ್ಪತ್ರೆ) ಯಾವಗಲ್, ಇಟಗಿ, ಪೇಠಾ ಆಲೂರ, ಕಲ್ಕೇರಿ, ಅಣ್ಣೂರು, ಜೋಯಿಸರ ಹಳ್ಳಿ, ಹಣಸಿ, ಅಮರಗೋಳ ಹಾಗೂ ಹೆಬ್ಬಾಳಗಳಲ್ಲಿ ಆಯುರ್ವೇದ ಔಷಧಾಲಯಗಳು ಇವೆ. ಹಾಗೂ ನಿಗದಿ, ಸಮಸ್ಗಿ, ಗೊಂದಿ, ಕರ್ಜಗಿಗಳಲ್ಲಿ ಹೋಮಿಯೋಪತಿ ಔಷಧಾಲಯವು ಮತ್ತು ಕೊಪ್ಪರಸಿಯಲ್ಲಿ ಯುನಾನಿ ದವಾಖಾನೆ ಇದೆ.

ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಜಿಲ್ಲೆಯಲ್ಲಿ ಮಾಶಾಸನ ಪಡೆದ ವೈದ್ಯರುಗಳೆಂದರೆ ವೈದ್ಯ ಪಾಂಡುರಂಗ ವಿಷ್ಣು ಜಾಯದೆ, ಹುಬ್ಬಳ್ಳಿ, ವೈದ್ಯ ಬಸವಯ್ಯ ಚುರ್ಚಿಹಾಳಮಠ, ಮುಂಡರಗಿ, ವೈದ್ಯ ಕೆ.ಆರ್. ಕಟಗೇರಿ, ಹುಬ್ಬಳ್ಳಿ, ಡಾ॥ ಕೆ.ಜಿ.ದೇಸಾಯಿ, ಹುಬ್ಬಳ್ಳಿ, ಧನ್ವಂತರಿ ಸುವರ್ಣ ಪದಕವನ್ನು ಸಹ ಇವರು ಪಡೆದಿರುವರು). ಹೋಮಿಯೋಪತಿ ವೈದ್ಯ ಪದ್ಧತಿಯಲ್ಲಿ ಜಿಲ್ಲೆಯಲ್ಲಿ ಮಾಶಾಸನ ಪಡೆದ ವೈದ್ಯರುಗಳು - ಮುತಾಲಿಕ ದೇಸಾಯಿ ಧಾರವಾಡ ; ಗೋವಿಂದರಾಯ ನಾಗಪ್ಪ ಹಾವೇರಿ; ಎಚ್.ಎಚ್. ಸಿನ್ನೂರ ಧಾರವಾಡ; ಕೆ.ಜಿ. ಮಣ್ಣೂರ (ಹಾನಿಮನ್ ಸುವರ್ಣ ಪದಕ). ಯುನಾನಿ ವೈದ್ಯ ಪದ್ಧತಿಯಲ್ಲಿ ಮಾಶಾಸನ ಪಡೆದ ವೈದ್ಯರುಗಳು : ಅಬ್ದುಲ್ ರೆಹಮಾನ ಖಾನ್, ಧಾರವಾಡ, ಎಚ್.ಎ. ಹಫೀಜ ಇಸ್ಲಾಂಪುರ, ರಾಣೆಬೆನ್ನೂರ; ಹದಡಿ ಆರ್.ಜಿ.ಕಲಾಲ್, ಗದಗ-ಬೆಟಗೇರಿ; ಹಾಗೂ ಪ್ರಕೃತಿ ಚಿಕಿತ್ಸೆ ಯೋಗದಲ್ಲಿ ಮಾಶಾಸನ ಪಡೆದವರು : ಶಾಮರಾವ್ ಹನುಮಂತರಾವ್ ಚಿತ್ರಗಾರ, ಧಾರವಾಡ, ಬಸವಕುಮಾರ ಮುಳಗುಂದಮಠ, ಶಿಗ್ಗಿ; ವೈ.ಎಸ್. ಜಕ್ಕರೆಡ್ಡಿ, ಬೆಂಗೇರಿ, ಹುಬ್ಬಳ್ಳಿ ಹಾಗೂ ಶೀವರಿವಾರದ, ಗದಗ.

**ಸಾಂಕ್ರಾಮಿಕ ರೋಗಗಳು**

ಅಶುದ್ಧ ನೀರು ಆಹಾರಗಳ ಸೇವನೆ, ನೈರ್ಮಲ್ಯದ ಕೊರತೆ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಮಾಡುವುದಲ್ಲದೇ ರೋಗಗಳಿಗೆ ತುತ್ತಾಗುವಂತೆ ಮಾಡುತ್ತದೆ. ಮಲಿನ ಪರಿಸರವು ಸೊಳ್ಳೆ, ನೊಣಗಳ ಆಗರವಾಗುತ್ತದೆ ಹಾಗೂ ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಬೇಸಿಗೆಯ ಕಾಲ ಸಾಂಕ್ರಾಮಿಕ ರೋಗಗಳ ವ್ಯಾಪಕ ಹರಡುವಿಕೆಗೆ ಅನುಕೂಲಕರವಾಗಿ ಪರಿಣಮಿಸುತ್ತಿದೆ. ಹಾಗೂ ಜನಜೀವನವನ್ನು ಕಳವಳಕಾರಿಯಾಗಿ ಮಾರ್ಪಡಿಸುತ್ತದೆ. ಪ್ಲೇಗು, ಕಾಲರಾ, ಮಲೇರಿಯಾ, ಸಿಡುಬು, ಕ್ಷಯ, ಮುಂತಾದ ಸಾಂಕ್ರಾಮಿಕ ರೋಗಗಳು ಜನ ಸಮುದಾಯದ ಸ್ವಾಸ್ಥ್ಯಕ್ಕೆ ಮಾರಕವಾಗಿ ಹಲವಾರು ಜನರ ಮರಣಕ್ಕೆ ಕಾರಣವಾಗುತ್ತಿದೆ. ಕಾಲಕಾಲಕ್ಕೆ ಸರ್ಕಾರ ಈ ರೋಗಗಳ ನಿಯಂತ್ರಣಕ್ಕೆ ಗ್ರಾಮ ನಿರ್ಮಲೀಕರಣ, ಕ್ರಿಮಿನಾಶಕ ಸಿಂಪರಣೆ, ದೇವಿ ಹಾಕುವುದು, ರೋಗ ನಿರೋಧಕ ಚುಚ್ಚುಮದ್ದು ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಸಮರ್ಪಕವಾಗಿ ಜಾರಿಗೊಳಿಸುತ್ತ ಬಂದಿದೆ. ಈ ಸರ್ಕಾರದ ಕ್ರಮಗಳಿಂದ ಈಗಾಗಲೇ ಕೆಲವು ಸಾಂಕ್ರಾಮಿಕ ರೋಗಗಳ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಲಾಗಿದೆ. ಜಿಲ್ಲೆಯಲ್ಲಿ ವ್ಯಾಪಕವಾಗಿದ್ದ ಕೆಲವು ರೋಗಗಳನ್ನು ಈ ಕೆಳಗೆ ಪರಿಶೀಲಿಸಿದೆ.

**ಮಲೇರಿಯಾ :** ಅನಾಫಿಲಿಸ್ ಎಂಬ ಜಾತಿಯ ಹೆಣ್ಣು ಸೊಳ್ಳೆ ಈ ರೋಗವನ್ನು ಹರಡುತ್ತದೆ. ರೋಗವಾಹಕ ಸೊಳ್ಳೆಗಳ ನಿರ್ಮೂಲನ ಮತ್ತು ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಮಾಡುವುದರಿಂದ ರೋಗವನ್ನು ಹರಡದಂತೆ ನಿಯಂತ್ರಣದಲ್ಲಿ ಇಡಲು ಸಾಧ್ಯ; 1933ರಲ್ಲಿ 3,484. ಜನ ಈ ರೋಗದಿಂದ ಸಾವಿಗೀಡಾಗಿದ್ದು, ಇದಕ್ಕೂ ಪೂರ್ವದಲ್ಲಿ ಮಲೇರಿಯಾದಿಂದ ಉಂಟಾದ ಸಾವುಗಳ ಅಂಕಿ ಅಂಶಗಳು, ಜ್ವರ ಪ್ರಕರಣ ಸಾವು ಎಂದು ತಿಳಿಯಲಾಗುತ್ತಿತ್ತು. 1949ರಲ್ಲಿ ಮಲೇರಿಯಾದಿಂದ ಉಂಟಾದ ಸಾವಿನ

ಸಂಖ್ಯೆ 129ಕ್ಕೆ ಇಳಿಯಿತು. ಇದಕ್ಕೆ ಕಾರಣ 1946ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಡಿಡಿಟಿ ಸಿಂಪರಣೆ ಜಾರಿಗೊಳಿಸಿದ್ದು. ಆ ವರ್ಷ 40,000 ಜನಸಂಖ್ಯೆಗಿಂತ ಕಡಿಮೆ ಇರುವ ಪ್ರದೇಶಗಳನ್ನು ಡಿಡಿಟಿ ಸಿಂಪರಣಾ ವ್ಯಾಪ್ತಿಗೆ ಒಳಪಡಿಸಲಾಯಿತು. ಧಾರವಾಡ, ಹುಬ್ಬಳ್ಳಿ, ಗದಗ ಮುನಿಸಿಪಾಲಿಟಿಗಳು ಉಚಿತವಾಗಿ ಡಿಡಿಟಿ ನೀಡುವ ವ್ಯವಸ್ಥೆ ಹೊಂದಿದ್ದವು.

ದೇಶದಲ್ಲಿ 1953ರಲ್ಲಿ ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವು ಪ್ರಾರಂಭವಾಯಿತು. ಈ ಕಾರ್ಯಕ್ರಮ ಅಂಗವಾಗಿ ಡಿಡಿಟಿ ಮತ್ತು ಮೆಲಾಥಿಯಾನ್ ಕ್ರಿಮಿನಾಶಕಗಳನ್ನು 3 ರಿಂದ 4 ವರ್ಷಗಳವರೆಗೆ ಸಿಂಪಡಿಸಿವುದು. ಹಾಗೂ ಜ್ವರ ಪ್ರಕರಣಗಳಲ್ಲಿ ರಕ್ತಲೇಪನ ತೆಗೆದು, ಪರೀಕ್ಷಿಸಿ ಮಲೇರಿಯಾ ರೋಗ ಪತ್ತೆಯಾದಲ್ಲಿ ತೀವ್ರ ಚಿಕಿತ್ಸೆ ನೀಡುವುದು, ಸೋಂಕಿನ ಮೂಲಗಳನ್ನು ನಾಶಪಡಿಸುವುದು, ಸಂಪೂರ್ಣವಾಗಿ ಮಲೇರಿಯಾ ನಿರ್ಮೂಲನ ಆಗುವವರೆಗೆ ಈ ಕ್ರಮವನ್ನು ಮುಂದುವರಿಸುವುದಾಗಿದೆ.

1945-46ರಲ್ಲಿ ಜಿಲ್ಲೆಯಲ್ಲಿ ರಾಜ್ಯ ಮಲೇರಿಯಾ ಸಂಘಟನೆಯು ಮಲೇರಿಯಾ ಸಮೀಕ್ಷೆ ನಡೆಸಿತು. ಜಿಲ್ಲೆಯ ಪಶ್ಚಿಮ ವಿಭಾಗಕ್ಕೆ ಒಳಪಡುವ ಧಾರವಾಡ, ಹುಬ್ಬಳ್ಳಿ, ಹಾನಗಲ್ ಕಲಘಟಗಿ, ರಾಣೆಬೆನ್ನೂರ, ಶಿಗ್ಗಾಂವಿ, ಹಿರೇಕೆರೂರು, ಹಾವೇರಿ ತಾಲೂಕುಗಳು ಮಲೇರಿಯಾ ಸೋಂಕಿಗೆ ತೀವ್ರ ಸ್ಥಾನಿಕವೆಂದು ಖಚಿತಪಡಿಸಿತಲ್ಲದೆ, ಉಳಿದ ಜಿಲ್ಲೆಯ ಪೂರ್ವಭಾಗವು ಸೋಂಕು ರಹಿತವೆಂದು ತಿಳಿದು ಬಂದಿತು. ಸೋಂಕು ಸ್ಥಾನಿಕವೆಂದು ತಿಳಿದುಬಂದ ಪ್ರದೇಶಗಳಲ್ಲಿ ಸರ್ಕಾರ ಆರೋಗ್ಯ ಕಾರ್ಯಕರ್ತರನ್ನು ನೇಮಕಮಾಡಿ, ಅವರು ಎರಡು ವಾರಕ್ಕೊಮ್ಮೆ ಮನೆಮನೆಗೆ ಹೋಗಿ, ಜ್ವರ ಪ್ರಕರಣಗಳನ್ನು ಪತ್ತೆಹಚ್ಚುವುದು, ಅಂಥವರ ರಕ್ತ ಲೇಪನ ಪಡೆಯುವುದು, ಅವರಿಗೆ ಒಂದು ಪ್ರಮಾಣದ ಕ್ಲೊರೊಕ್ವೀನ್ ಮಾತ್ರೆ ನೀಡುವುದು, ರಕ್ತ ಲೇಪನ ಪರೀಕ್ಷೆಗೆ ಒಳಪಡಿಸಿದ ನಂತರ ಮಲೇರಿಯಾ ಎಂದು ಖಚಿತಪಟ್ಟಲ್ಲಿ ತೀವ್ರ ಚಿಕಿತ್ಸೆ ನೀಡುವುದು, ಮತ್ತು ಆ ಪ್ರದೇಶಗಳಲ್ಲಿ ರೋಗ ಹರಡುವಿಕೆಯನ್ನು ತಡೆಗಟ್ಟಲು ಸಮೀಕ್ಷೆ ನಡೆಸುವುದು, ಎರಡು ಸಲ ಡಿಡಿಟಿ, ಮೂರು ಸಲ ಮೆಲಾಥಿಯಾನ್ ಸಿಂಪರಣೆ ಮುಂತಾದ ಸಕಾಲಿಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1970 ರಿಂದ 1980ರವರೆಗಿನ 10 ವರ್ಷಗಳ ಅವಧಿಯಲ್ಲಿ 26,26,857 ಜನರನ್ನು ಪರೀಕ್ಷಿಸಿ ರಕ್ತ ಲೇಪನಗಳನ್ನು ಪಡೆಯಲಾಯಿತು. 25,02,410 ರಕ್ತ ಲೇಪನಗಳನ್ನು ಪರೀಕ್ಷಿಸಲಾಯಿತು. 88,241 ಜನರಿಗೆ ರೋಗ ತಗುಲಿದ್ದು ಖಚಿತಗೊಂಡಿತು. 49,499 ಜನರಿಗೆ ತೀವ್ರ ಚಿಕಿತ್ಸೆ ನೀಡಲಾಯಿತು. ಜಿಲ್ಲೆಯ 85 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಲೇರಿಯಾ ಪ್ರಕರಣಗಳನ್ನು ವರದಿಮಾಡುವ ಕೇಂದ್ರಗಳಗಿವೆ.

**ಪ್ಲೇಗು** : ಹತ್ತೊಂಭತ್ತನೆ ಶತಮಾನದ ಅಂತ್ಯದಲ್ಲಿ ಕಾಣಿಸಿಕೊಂಡ ಈ ಸಾಂಕ್ರಾಮಿಕ ರೋಗವು ಈಗ ಸಂಪೂರ್ಣ ನಿಯಂತ್ರಣದಲ್ಲಿದೆ. 1897ಕಲ್ಲಿ ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಇದು ಪ್ರವೇಶಿಸಿ 1898ರ ಉತ್ತರಾರ್ಧದಲ್ಲಿ ಸಾಕಷ್ಟು ಸಾವು ನೋವುಗಳನ್ನುಂಟು ಮಾಡಿತು. ಹಾಗೂ ಅದೇ ವರ್ಷ ಜಿಲ್ಲೆಯಾದ್ಯಂತ 320 ಪಟ್ಟಣ ಹಾಗೂ ಹಳ್ಳಿಗಳಲ್ಲಿ ಈ ರೋಗ ಹರಡಿ 37,990 ಜನರಿಗೆ ಈ ರೋಗ ತಗುಲಿ 30,802 ಜನ ಸಾವಿಗೀಡಾದರು. ಮುಂದೆ ಈ ಪಿಡುಗು ಗದುಗಿಗೆ ಹರಡಿತು. 1901 ರಿಂದ 1905ರವರೆಗೆ ಈ ರೋಗದ ತೀವ್ರತೆ ಹೆಚ್ಚಾಗಿತ್ತು. ನಂತರದಲ್ಲಿ ಕಡಿಮೆಯಾಗುತ್ತ ಬಂತು. ಆದರೆ 1911-1912ರಲ್ಲಿ ಮತ್ತೆ ಇದು ಮಾರಕವಾಗಿ ಉಲ್ಬಣಿಸಿತು. ಅನೇಕ ಜನರ ಸಾವಿಗೆ ಕಾರಣವಾಯಿತು. ರೋಗ ಸಂಕರದ ಶೀಘ್ರತೆ ಹಾಗೂ ಸಾವುಗಳು ಜನರನ್ನು ಕಂಗೆಡಿಸಿದವು. ರೋಗದ ಹಾವಳಿ ಹೆಚ್ಚಾದಾಗ ಜನ ಹಳೆಯ ಊರು ತ್ಯಜಿಸಿ ಹೊಸ ಊರುಗಳನ್ನು ಕಟ್ಟಿಕೊಳ್ಳುವಂತಾಯಿತು. ರಾಷ್ಟ್ರವ್ಯಾಪಿಯಾಗಿ ಹರಡಿದ ಈ ಪಿಡುಗು ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯದಲ್ಲಿ ಕೈಗೊಂಡ ಕ್ರಿಮಿನಾಶಕಗಳ ಸಿಂಪರಣೆ ಹಾಗೂ ಇನ್ನಿತರ ನಿಯಂತ್ರಣಾ ಕ್ರಮಗಳಿಂದ ಈ ರೋಗದ ತೀವ್ರತೆ ಕಡಿಮೆಯಾಗುತ್ತಾ ಬಂತು. 1978ರ ನಂತರದ ವರ್ಷಗಳಲ್ಲಿ ರೋಗ ತಗುಲಿದ ಯಾವುದೇ ಪ್ರಕರಣಗಳು ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. 1976ರಲ್ಲಿ ರಾಷ್ಟ್ರಮಟ್ಟದಲ್ಲಿ ಪ್ಲೇಗು ಜಾಗ್ರತೆ ಘಟಕವು ಸ್ಥಾಪಿತವಾಗಿ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಪ್ರಧಾನ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯಾರಂಭ ಮಾಡಿತು. ಘಟಕದ ಉದ್ದೇಶವು ಪ್ಲೇಗ್ ರೋಗ ಪತ್ತೆ ಹಚ್ಚುವುದು, ಅದರ ಸ್ಥಳೀಯತೆ, ಸೋಂಕಿನ ಪ್ರದೇಶಗಳನ್ನು ಗುರುತಿಸುವುದು, ತರಬೇತಿ ನೀಡುವುದು ಹಾಗೂ ನಿಯಂತ್ರಣ ಕಾರ್ಯಗಳನ್ನು ಜಾರಿಗೊಳಿಸುವುದಾಗಿದೆ.

ಬಾಂಬೆ ಪ್ರೆಸಿಡೆನ್ಸಿ ಗೆಜೆಟಿಯರ್ ಒದಗಿಸುವ ಅಂಕಿ ಅಂಶಗಳ ಪ್ರಕಾರ 1896-97ರಿಂದ 1915-16ರವರೆಗಿನ ವರದಿಯಾದ ಪ್ಲೇಗ್ ರೋಗದ ಪ್ರಕರಣಗಳು (ಕಂಸದಲ್ಲಿ) ಹಾಗೂ ಸಾವಿಗೀಡಾದವರ ಸಂಖ್ಯೆಯನ್ನು (ಕೊನೆಗೆ) ಈ ಕೆಳಗೆ ಕೊಡಲಾಗಿದೆ.

1896-97 - (1) 1; 1897-98 - (96) 72 ; 1898-99 - (37,990) 30, 802; 1899-1900 - (9,426) 7,131; 1900-1901 - (2,639) 1,941; 1901-1902 - (50,078) 35,889; 1902-1903 - (49,131) 34,679; 1903-1904 - (54,212) 39,337; 1904-1905 - (ತಿಳಿದಿಲ್ಲ) 19,678; 1905-1906 - (ತಿಳಿದಿಲ್ಲ) 4,009; 1906-1907 - (ತಿಳಿದಿಲ್ಲ) 398; 1908-1909 - (3,018) 2,300; 1909-1910 - (1,361) 1,147; 1910-1911 - (6,057 4,365; 1911-1912 - (48,369) 33,245; 1912-13 - (2,168) 1,588; 1913-1914 - (10,230) 7,328; 1914-1915 - (2,945) 2,312; ಮತ್ತು 1915-1916 - (9,808) 6,855:

**ಸಿಡುಬು :** ಧಾರವಾಡ ಜಿಲ್ಲೆಯಲ್ಲಿ ಸಿಡುಬು ಬಹಳಷ್ಟು ಹಿಂದಿನಿಂದಲೇ ಅಸ್ತಿತ್ವದಲ್ಲಿರುವ ರೋಗವಾಗಿದ್ದು 1830ರಷ್ಟು ಪೂರ್ವದಲ್ಲಿಯೇ ಬ್ರಿಟೀಶ ಸರ್ಕಾರವು ಈ ರೋಗದ ವಿರುದ್ಧ ದಾಕು (ದೇವಿ ಅಥವಾ ಮೈಲಿ) ಹಾಕುವ ಪ್ರಾರಂಭಿಕ ಕ್ರಮ ಜಾರಿಗೆ ತಂದಿತ್ತು. (ಧಾರವಾಡ ಜಿಲ್ಲೆಯಲ್ಲಿ ಮೊದಲು (1883-84) ಮೈಲಿ ತೆಗೆಸಿಕೊಂಡವರ ಸಂಖ್ಯೆ 28,430 ಆಗಿತ್ತು ಹಾಗೂ ಎರಡನೆ ಸಲ ತೆಗೆಸಿಕೊಂಡವರ ಸಂಖ್ಯೆ 738 ಆಗಿತ್ತು.) ಅಶುದ್ಧ ವಾತಾವರಣ, ಕಲುಷಿತ ಪದಾರ್ಥಗಳ ಸೇವನೆ ಹಾಗೂ ಅಶುಚಿತ್ವದ ಕಾರಣಗಳಿಗಾಗಿ ಒಬ್ಬರಿಂದೊಬ್ಬರಿಗೆ ಹರಡುವ ಈ ರೋಗವು 'ವೇರಿಯೋಲ್' ಎಂಬ ವೈರಸ್‌ನಿಂದ ಉಂಟಾದ ನಂಜಾಗಿದೆ. 1872 ಹಾಗೂ 1877ರಲ್ಲಿ ಕ್ರಮವಾಗಿ 2,653 ಹಾಗೂ 2,612 ಜನ ಈ ರೋಗಕ್ಕೆ ತುತ್ತಾದರು. 1866 ರಿಂದ 1893ರವರೆಗೆ ಒಟ್ಟು 13,337 ಜನ ಅಂದರೆ ಸರಾಸರಿ 713 ಹಾಗೂ 1902 ರಿಂದ 1921 ರವರೆಗೆ ಒಟ್ಟು 2,870 ಅಂದರೆ ಸರಾಸರಿ 143 ಜನ ಪ್ರತಿವರ್ಷ ಸಾವಿಗೀಡಾಗಿದ್ದು ಮುಂಬೈ ವರದಿಯೊಂದರಿಂದ ತಿಳಿದು ಬರುತ್ತದೆ. ಸ್ವಾತಂತ್ರ್ಯಾನಂತರ 1952ರಲ್ಲಿ 92 ಜನ ಜಿಲ್ಲೆಯಲ್ಲಿ ಈ ರೋಗದಿಂದ ಸತ್ತಿರುವುದು ವರದಿ ಆಗಿದೆ.

ತೀವ್ರ ಪರಿಣಾಮ ಬೀರುವ ಈ ರೋಗದ ನಿರ್ಮೂಲನಕ್ಕಾಗಿ ಕೇಂದ್ರ ಸರ್ಕಾರವು 1961ರಲ್ಲಿ ರಾಷ್ಟ್ರೀಯ ಸಿಡುಬು ನಿರ್ಮೂಲನಾ ಕಾರ್ಯಕ್ರಮ ಪ್ರಾರಂಭಿಸಿತು. ಹುಟ್ಟಿದ ಎಲ್ಲ ಮಕ್ಕಳಿಗೂ (0-4 ವರ್ಷದವರೆಗಿನ) ಪ್ರಾಥಮಿಕ ದಾಕು ಹಾಕುವುದು, ನಂತರ ನಾಲ್ಕು ವರ್ಷಗಳಿಗೊಮ್ಮೆ ಮತ್ತೆ ದಾಕು ಹಾಕುವುದು ಪ್ರಾರಂಭಿಕ ಕ್ರಮವಾಗಿತ್ತು. ಆದಾಗ್ಯೂ ಸಿಡುಬು ಸಣ್ಣ ಪ್ರಮಾಣದಲ್ಲಿ ಅಲ್ಲಲ್ಲಿ ಕಂಡು ಬರುತ್ತಿತ್ತು. ಸಿಡುಬು ರೋಗದ ಪತ್ತೆಗಾಗಿ ರೋಗ ತಡೆಗಟ್ಟುವುದಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯು ರೋಗಾಣು ತಜ್ಞರ ಸಹಯೋಗದೊಂದಿಗೆ ವಿಶೇಷ ಜಾಗ್ರತಾ ಯೋಜನೆಗಳನ್ನು ಕೈಗೊಂಡು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹಲವಾರು ಸಲ ಶೋಧನಾ ಕಾರ್ಯವನ್ನು ಮನೆಮನೆಗೆ ಹೋಗಿ ನಡೆಸಲಾಯಿತಲ್ಲದೆ, ಸಾಕಷ್ಟು ಪ್ರಚಾರ ನೀಡಲಾಯಿತು. 1975ರಲ್ಲಿ ಶೂನ್ಯ ಸಿಡುಬುರೋಗದ ಗುರಿ ಕಾರ್ಯಕ್ರಮ ಹಾಕಿಕೊಂಡು ರಾಷ್ಟ್ರದಾದ್ಯಂತ ಆರಂಭಿಸಲಾಯಿತು. 1978ರಲ್ಲಿ ಭಾರತ ಸಿಡುಬು ರೋಗದಿಂದ ಮುಕ್ತವೆಂದು ಘೋಷಿಲಾಯಿತು. ಹೀಗಾಗಿ ಮೊದಲು ನಡೆಸುತ್ತಿದ್ದ ದಾಕು ಹಾಕುವ ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. 1970ರಿಂದ ಧಾರವಾಡ ಜಿಲ್ಲೆಯಲ್ಲಿ ಯಾವ ಸಿಡುಬು ಪ್ರಕರಣಗಳು ಇಲ್ಲ. ಸಿಡುಬುರೋಗ ಪ್ರಕರಣಗಳ ಬಗ್ಗೆ ಸಾಕಷ್ಟು ಎಚ್ಚರ ವಹಿಸಲಾಗುತ್ತಿದೆ; ಸಿಡುಬು ಪತ್ತೆ ಹಚ್ಚಿದವರಿಗೆ ಬಹುಮಾನ ಯೋಜನೆಯು ಜಾರಿಯಲ್ಲಿದೆ.

**ಕಾಲರಾ :** ಕಾಲರಾ ಒಂದು ತೀವ್ರತರ ಸಾಂಕ್ರಾಮಿಕ ರೋಗವಾಗಿದ್ದು ಸಕಾಲಿಕ ಚಿಕಿತ್ಸೆ ನೀಡದಿದ್ದಲ್ಲಿ ಪ್ರಾಣಾಂತಿಕವಾಗುತ್ತದೆ. ಸಾಮಾನ್ಯವಾಗಿ ಅಶುದ್ಧ ಆಹಾರ, ನೀರು, ನೈರ್ಮಲ್ಯದ ಕೊರತೆ ಈ ರೋಗ ಹರಡುವಿಕೆಗೆ ಸಾಧನಗಳಾಗಿವೆ. ಬಹಳ ಹಿಂದಿನಿಂದಲೂ ಇದೊಂದು ಗಂಭೀರ ಆರೋಗ್ಯ ಸಮಸ್ಯೆಯಾಗಿ ಕಾಡುತ್ತಿದ್ದು ಅಪಾರ ಸಾವು ನೋವುಗಳನ್ನುಂಟು ಮಾಡುತ್ತಿದೆ. 1818ರಲ್ಲಿಯೇ ಹುಬ್ಬಳ್ಳಿಗೆ ಬಂದ ಅನೇಕ ಬ್ರಿಟಿಷ್ ಸೈನಿಕರು ಈ ಪಿಡುಗಿಗೆ ತುತ್ತಾದರು. ಬಾಂಬೆ ಗ್ಯಾಜೆಟಿಯರ್‌ದಿಂದ (1884) ದೊರೆತ ಅಂಕಿ ಅಂಶಗಳ ಪ್ರಕಾರ 1866 ರಿಂದ 1883ರ ಅವಧಿಯಲ್ಲಿ ಒಟ್ಟು 34,045 ಜನರು (ವರ್ಷಕ್ಕೆ ಸರಾಸರಿ 1,891) ಈ ರೋಗದಿಂದ ಸಾವಿಗೀಡಾಗಿದ್ದು ತಿಳಿದು ಬರುತ್ತದೆ. 1866ರಲ್ಲಿ ಅತ್ಯಂತ ಹೆಚ್ಚು ಅಂದರೆ 11,172 ಜನ ಅಂದರೆ ಶೇ.33.87 ಜನ ಮರಣ ಹೊಂದಿದ್ದರು. ರೋಗದ ವಿರುದ್ಧ ಚುಚ್ಚುಮದ್ದು ಹಾಗೂ ಇನ್ನಿತರ ಜಾಗ್ರತಾ ಕ್ರಮಗಳನ್ನು ಜಾರಿಗೆ ತರುವ ಕಾರಣ ಈ ರೋಗದ

ಪ್ರಖರತೆ ಕಡಿಮೆ ಆಗುತ್ತಾ ಬಂತು. 1876-78ರ ಕ್ಷಾಮದ ಕಾಲಕ್ಕೂ ಈ ಪಿಡುಗು ಅನೇಕರನ್ನು ಬಲಿತೆಗೆದುಕೊಂಡಿತು. ಮುಂದೆ 1902 ರಿಂದ 1921ರ ಅವಧಿಯಲ್ಲಿ ಒಟ್ಟು 18,462 ಜನ ಅಂದರೆ ಸರಾಸರಿ 924 ಜನ ಸಾವಿಗೀಡಾಗಿದ್ದು ತಿಳಿದು ಬರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕಾಲರಾದ ಹಾವಳಿ ಬಹಳಷ್ಟು ಕಡಿಮೆ ಆಗಿದೆ. ಈ ರೋಗ ಕಾಣಿಸಿಕೊಂಡ ಕೂಡಲೇ ಸರ್ಕಾರದವರು, ಮುಂಜಾಗ್ರತಾ ಕ್ರಮವಾಗಿ ಆ ಪ್ರದೇಶವು ಕಾಲರಾ ಪೀಡಿತ ಪ್ರದೇಶವೆಂದು ಘೋಷಿಸಿ, ಜನರಿಗೆ ಕಾಲರಾದ ವಿರುದ್ಧ ಚುಚ್ಚುಮದ್ದು ಹಾಕುವುದು, ಕ್ರಿಮಿನಾಶಕಗಳನ್ನು ಸಿಂಪಡಿಸುವುದು ಮತ್ತು ಸೋಂಕು ತಗುಲಿದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವ್ಯಾಪಕ ಆರೋಗ್ಯ ಶಿಕ್ಷಣ ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು. ಪ್ರತೀ ಜಿಲ್ಲೆಯಲ್ಲಿಯೂ ಕಾಲರಾ ನಿಯಂತ್ರಣ ತಂಡಗಳು ಇವೆ. ಕೊಳವೆ ಬಾವಿಗಳನ್ನು ಹಾಕಿ ಶುದ್ಧ ಕುಡಿಯುವ ನೀರನ್ನು ಒದಗಿಸಿದ್ದರಿಂದ ಈ ರೋಗ ಬಹುಮಟ್ಟಿಗೆ ನಿಯಂತ್ರಣಕ್ಕೊಳಗಾಗಿದೆ. ಇತ್ತೀಚಿನ ಮೂರು ವರ್ಷಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಕಂಡುಬಂದ ರೋಗ ಪ್ರಕರಣಗಳು ಸಾವು ಹಾಗೂ ನಿರೋಧಕ ಚುಚ್ಚುಮದ್ದು ಹಾಕಲ್ಪಟ್ಟ ಜನರ ಸಂಖ್ಯೆ ಕೆಳಗಿನಂತಿದೆ. 1990ರಲ್ಲಿ 7 ಜನರಿಗೆ ರೋಗ ತಗುಲಿದ್ದು 2 ಸಾವುಗಳು ಸಂಭವಿಸಿವೆ. ಹಾಗೂ 10,205 ಜನರಿಗೆ ಚುಚ್ಚುಮದ್ದನ್ನು ಹಾಕಲಾಗಿದೆ; ಅದರಂತೆ 1991ರಲ್ಲಿ ಇವುಗಳ ಸಂಖ್ಯೆ ಕ್ರಮವಾಗಿ 15, 2 ಹಾಗೂ 36,349; ಮತ್ತು 1992ರಲ್ಲಿ ಇವುಗಳ ಸಂಖ್ಯೆ ಕ್ರಮವಾಗಿ 13, 11,52 ಆಗಿವೆ.

**ಕ್ಷಯ ರೋಗ** : ಕ್ಷಯರೋಗವು ಒಂದು ಪ್ರಮುಖ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸಿದ್ದು, ಮೈಕ್ರೊ ಬ್ಯಾಕ್ಟಿರಿಯಾ ಎಂಬ ರೋಗಾಣುವಿನಿಂದ ಈ ರೋಗ ಉಂಟಾಗುತ್ತದೆ. ಒಂದು ದಾಖಲಾತಿಯ ಪ್ರಕಾರ 1952ರಲ್ಲಿ ಧಾರವಾಡ ಜಿಲ್ಲೆಯಲ್ಲಿ 1,335 ಜನ ಕ್ಷಯದಿಂದ ಸಾವಿಗೀಡಾಗಿದ್ದು ತಿಳಿದು ಬರುತ್ತದೆ. ಸರ್ಕಾರವು ಸಾಮಾನ್ಯ ಆರೋಗ್ಯ ಸೇವೆಗಳಲ್ಲಿ ಕ್ಷಯರೋಗ ಕಾರ್ಯಕ್ರಮವನ್ನು ಸಂಯೋಜಿಸಿ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲಿ, ಜಿಲ್ಲಾ ಕ್ಷಯರೋಗ ಕೇಂದ್ರಗಳನ್ನು ತೆರೆದು, ಅವುಗಳಿಗೆ ತರಬೇತಿ ಪಡೆದ ವೈದ್ಯರು ಹಾಗೂ ಸಿಬ್ಬಂದಿ ವರ್ಗವನ್ನು ನೇಮಿಸಿ ಅವರಿಂದ ಕ್ಷಯರೋಗ ನಿಯಂತ್ರಣಾ ಕಾರ್ಯಗಳನ್ನು ಜಾರಿಗೊಳಿಸುತ್ತಿದೆ. ಬಿಸಿಜಿ ಚುಚ್ಚುಮದ್ದನ್ನು ನೀಡುವ ಮೂಲಕ ಈ ರೋಗದ ಪ್ರಾಥಮಿಕ ಸೋಂಕಿನ ಉಲ್ಬಣವನ್ನು ತಡೆಯುವುದು, ಆರೋಗ್ಯ ಶಿಕ್ಷಣ ನೀಡುವುದು, ರೋಗಿಗಳ ತಪಾಸಣೆ ಮತ್ತು ಸಂಪೂರ್ಣ ಗುಣಮುಖರಾಗುವವರೆಗೆ ಚಿಕಿತ್ಸೆ ನೀಡುವುದು, ಕ್ಷ ಕಿರಣ ಹಾಗೂ ಉಗುಳು ಪರೀಕ್ಷೆಗಳ ಮೂಲಕ ರೋಗ ಲಕ್ಷಣಗಳನ್ನು ಪತ್ತೆಹಚ್ಚುವುದು ಮುಂತಾದ ನಿಯಂತ್ರಣ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆರೋಗ್ಯ ಘಟಕಗಳು ನಿರ್ವಹಿಸುತ್ತಿವೆ. 1990-91 ರಿಂದ 1993-94ರವರೆಗೆ ಜಿಲ್ಲಾ ಆಸ್ಪತ್ರೆಯ 'ಕ್ಷಯಕೇಂದ್ರ'ದಲ್ಲಿ ನಡೆಸಿದ ಒಟ್ಟು ಕಫ ಪರೀಕ್ಷೆಗಳು 5,496 ಆಗಿದ್ದು, 1,244 ಜನ ಕ್ಷಯ ರೋಗಿಗಳು ಪತ್ತೆಯಾಗಿದ್ದು ಅವರಿಗೆ ಚಿಕಿತ್ಸೆ ನೀಡಲಾಗಿದೆ. ಜಿಲ್ಲೆಯಲ್ಲಿ 1990-91 ರಿಂದ 1993-94ರವರೆಗೆ ಕ್ರಮವಾಗಿ 99,731, 88,943, 89,048 ಹಾಗೂ 95,251 ಮಕ್ಕಳಿಗೆ ಬಿಸಿಜಿ ಚುಚ್ಚುಮದ್ದು ನೀಡಲಾಯಿತು. 1993-94ರಲ್ಲಿ ಪತ್ತೆ ಆದ ಕ್ಷಯರೋಗಿಗಳು 4,787 ಹಾಗೂ 17,579 ಜನರ ಕಫ ತಪಾಸಣೆ ಮಾಡಲಾಯಿತು.

ಕ್ಷಯ ರೋಗಿಗಳನ್ನು ಪತ್ತೆಹಚ್ಚಿ ಚಿಕಿತ್ಸೆಗೆ ಒಳಪಡಿಸುವ ಉದ್ದೇಶದಿಂದ ಜಿಲ್ಲಾ ಕ್ಷಯ ರೋಗ ಕೇಂದ್ರವು ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು. ಇದು ಧಾರವಾಡ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದು, ಜಿಲ್ಲಾ ಕ್ಷಯ ರೋಗ ವೈದ್ಯಾಧಿಕಾರಿಗಳು ಈ ಕೇಂದ್ರದ ಮುಖ್ಯಸ್ಥರಾಗಿದ್ದು ಅವರ ನೆರವಿಗೆ ನಾಲ್ಕು ಜನ ಹಿರಿಯ ಆರೋಗ್ಯ ಸಹಾಯಕರು, ಇಬ್ಬರು ಪ್ರಯೋಗಾಲಯ ತಂತ್ರಜ್ಞರು, ಒಬ್ಬರು ಕ್ಷ ಕಿರಣ ತಂತ್ರಜ್ಞರು ಹಾಗೂ ಇನ್ನಿತರ ಹತ್ತು ಜನ ಸಿಬ್ಬಂದಿ ವರ್ಗವಿದೆ. ಕಫ ಪರೀಕ್ಷೆ, ಕ್ಷಕಿರಣ ಪರೀಕ್ಷೆ ನಡೆಸುವುದು, ಕ್ಷಯ ನಿಯಂತ್ರಣ ಶಿಬಿರಗಳನ್ನು ಏರ್ಪಡಿಸುವುದು, ಕ್ಷಯ ರೋಗಿಗಳಿಗೆ ಚಿಕಿತ್ಸೆ ನೀಡುವುದು ಈ ಕೇಂದ್ರದ ಕಾರ್ಯ ಚಟುವಟಿಕೆಗಳಾಗಿವೆ. ಧಾರವಾಡ ಜಿಲ್ಲೆಯ ಎಲ್ಲ ಆರೋಗ್ಯ ಸಂಸ್ಥೆಗಳು (ಕ್ಷಯ ರೋಗ ಘಟಕಗಳು) ಕೇಂದ್ರದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

**ಕುಷ್ಠರೋಗ** : ಕುಷ್ಠರೋಗವು ಒಂದು ದೊಡ್ಡ ಸಾಮಾಜಿಕ ಮತ್ತು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಮುಂದುವರೆಯುತ್ತಿದೆ. ಕ್ರಿ.ಶ. 2000ರ ಹೊತ್ತಿಗೆ ಕುಷ್ಠರೋಗವನ್ನು ನಿರ್ಮೂಲ ಮಾಡುವ ಗುರಿ ಹೊಂದಿದ್ದು, ಆ ದಿಶೆಯಲ್ಲಿ ರಾಷ್ಟ್ರೀಯ ಕುಷ್ಠರೋಗ ನಿವಾರಣಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಸರ್ಕಾರದ ಇನ್ನಿತರ ವೈದ್ಯಕೀಯ ಸಂಸ್ಥೆಗಳೂ ಸಹ ಕುಷ್ಠರೋಗ ನಿವಾರಣಾ ಸೇವೆಯನ್ನು ಒದಗಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಕುಷ್ಠರೋಗವು ಮಧ್ಯಮ ಪ್ರಮಾಣದ ಸ್ಥಾನಿಕತೆಯನ್ನು ಹೊಂದಿದ್ದು 1991-92ರ ಅಂದಾಜಿನ ಪ್ರಕಾರ ಈ ರೋಗದ ಸ್ಥಾನಿಕತೆ ಪ್ರತೀ 1000 ಜನಸಂಖ್ಯೆಗೆ 1.6 ರಷ್ಟು ಇದೆ. ಇದು ಧಾರವಾಡ ಜಿಲ್ಲೆಯಲ್ಲಿ 2.4 ಕ್ಕಿಂತ ಅಧಿಕ ಇದ್ದು ನಿವಾರಣೆಗಾಗಿ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ಜಿಲ್ಲೆಯಲ್ಲಿ ಗದಗ, ಮುಂಡರಗಿ, ರೋಣ, ಶಿರಹಟ್ಟಿ, ನರಗುಂದ ಹಾಗೂ ಧಾರವಾಡ ತಾಲೂಕಿನ ಭಾಗಗಳಲ್ಲಿ ಈ ರೋಗವು ಹೆಚ್ಚಾಗಿ ಕಾಣಿಸಿಕೊಂಡಿದೆ. ರೋಗದ ನಿವಾರಣಾ ಕಾರ್ಯಕ್ರಮವು ಈ ಜಿಲ್ಲೆಯಲ್ಲಿ 1982ರಷ್ಟು ಹಿಂದೆ ಕುಷ್ಠರೋಗ ನಿವಾರಣಾ ಕೇಂದ್ರ ಸ್ಥಾಪನೆಯೊಂದಿಗೆ ಪ್ರಾರಂಭಗೊಂಡಿತು. ಜಿಲ್ಲಾ ಕುಷ್ಠರೋಗ ನಿವಾರಣಾ ಅಧಿಕಾರಿಗಳು ಕೇಂದ್ರದ ಮುಖ್ಯಸ್ಥರಾಗಿದ್ದು, ಜಿಲ್ಲೆಯ ಇನ್ನಿತರ ಕೇಂದ್ರಗಳ ಉಸ್ತುವಾರಿ ನೋಡಿಕೊಳ್ಳುವುದು. ಜಿಲ್ಲೆಯಲ್ಲಿಯ ಇನ್ನಿತರ ಕುಷ್ಠರೋಗ ನಿವಾರಣಾ ಕೇಂದ್ರಗಳು ಹಾವೇರಿ, ಶಿರಹಟ್ಟಿ, ಗಜೇಂದ್ರಗಡ, ಹಾನಗಲ್ ಮತ್ತು ನಗರ ಕೇಂದ್ರಗಳಾದ ರಾಣಿಬೆನ್ನೂರ, ಗದಗ ಹುಬ್ಬಳ್ಳಿಯ ಕೆ.ಎಂ.ಸಿ ಹಾಗೂ ಧಾರವಾಡದ ಜಿಲ್ಲಾ ಆಸ್ಪತ್ರೆಯಲ್ಲಿಯು ಇವೆ. ಎಸ್.ಇ.ಟಿ. ಕೇಂದ್ರಗಳು ಹಾವೇರಿ, ಹಾನಗಲ್, ಗಜೇಂದ್ರಗಡ ಹಾಗೂ ಶಿರಹಟ್ಟಿಗಳಲ್ಲಿ ಇವೆ. ಅಂಗವಿಕಲರ ಆಸ್ಪತ್ರೆ ('ಸ್ವಿಸ್‌ಮಾಸ್') ಹುಬ್ಬಳ್ಳಿಯಲ್ಲಿ ಇದ್ದು, ಒಂದು ಖಾಸಗಿ ಕುಷ್ಠ ರೋಗ ನಿವಾರಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ 1.4.1986ರಿಂದ ಬಹುವಿಧ ಔಷಧೋಪಚಾರ ಚಿಕಿತ್ಸೆ ಸ್ವಿಜರಲ್ಯಾಂಡ್ ರಾಷ್ಟ್ರದ ಸಹಾಯದಿಂದ ಪ್ರಾರಂಭಗೊಂಡು ಹಂತ ಹಂತವಾಗಿ ಕಾರ್ಯರೂಪಕ್ಕೆ ಬರುತ್ತಿವೆ. ಕುಷ್ಠರೋಗಿಗಳ ಹೊಸ ಸಮೀಕ್ಷೆ ಪ್ರಾರಂಭವಾಗಿ 14,461 ಹೊಸ ರೋಗಿಗಳನ್ನು ಪತ್ತೆ ಹಚ್ಚಲಾಯಿತು. ಹಾಗೂ ಅವರಿಗೆ ಬಹುವಿಧ ಔಷಧೋಪಚಾರ ನೀಡಲಾಯಿತು. ಈ ಚಿಕಿತ್ಸೆಯ ಪ್ರಾರಂಭಕ್ಕೆ ಮೊದಲು 13,040 ಹಳೆಯ ರೋಗಿಗಳಿದ್ದು ಅವರಿಗೂ ಕೂಡಾ ಬಹುವಿಧ ಚಿಕಿತ್ಸೆ ನೀಡಲಾಗಿದೆ. 1991 ಮಾರ್ಚ್ ಅಂತ್ಯದವರೆಗೆ 19,120 ರೋಗಿಗಳು ಬಹುವಿಧ ಔಷಧೋಪಚಾರ ಮತ್ತು ಮೊನೋಥೆರಫಿ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿರುತ್ತಾರೆ.

1991-92ರ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು 38,64,629 ಜನರನ್ನು ಪರೀಕ್ಷಿಸಲಾಯಿತು. 1986-87ರಿಂದ 1991-92ವರೆಗೆ ಪತ್ತೆ ಆಗಿರುವ ರೋಗಿಗಳು 14,461 ಇದ್ದು, ಇದೇ ಅವಧಿಯಲ್ಲಿ ಹಳೆಯ ರೋಗಿಗಳ ಸಂಖ್ಯೆ 10,312 ಹಾಗೂ ಗುಣಮುಖ ರಾಗಿರುವವರ ಸಂಖ್ಯೆ 8.808 ಆಗಿರುತ್ತದೆ. 1993-94ರಲ್ಲಿ 1,992 ಕುಷ್ಠರೋಗಿಗಳನ್ನು ಗುಣಪಡಿಸಲಾಗಿದೆ.

**ನಾರು ಹುಣ್ಣು :** ನಾರುಹುಣ್ಣು ನಿರ್ಮೂಲನಾ ಕಾರ್ಯಕ್ರಮವು ಒಂದು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ ಆಗಿದ್ದು 50:50 ರ ಪಾಲುಗಾರಿಕೆಯಲ್ಲಿ 1982ರಲ್ಲಿ ಪ್ರಾರಂಭವಾಯಿತು. ಇದಕ್ಕೂ ಪೂರ್ವದಲ್ಲಿಯೆ ಧಾರವಾಡ ಜಿಲ್ಲೆಯಲ್ಲಿಯ ಕೆಲವು ತಾಲೂಕುಗಳಲ್ಲಿ ಈ ರೋಗ ಕಂಡು ಬರುತ್ತಿತ್ತು. ಕೇಂದ್ರ ಸರ್ಕಾರವು 1992ರಲ್ಲಿ ಶೂನ್ಯ ಪ್ರಕರಣ ಗುರಿಯನ್ನು ಸಾಧಿಸುವ ಕಾರ್ಯಕ್ರಮ ಹಾಕಿಕೊಂಡು ಅದನ್ನು ಸಾಧಿಸಿದೆ. 1990, 1992ರಲ್ಲಿ ಜಿಲ್ಲೆಯಲ್ಲಿ ಯಾವುದೇ ನಾರುಹುಣ್ಣಿನ ಪ್ರಕರಣಗಳು ವರದಿಯಾಗಿಲ್ಲ. ಜಿಲ್ಲೆಯಲ್ಲಿ ಪ್ರತಿವರ್ಷ ಏಪ್ರಿಲ್ ಜೂನ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ನಾರುಹುಣ್ಣು ಸಮೀಕ್ಷೆಗಳನ್ನು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಖಾಂತರ ಪ್ರತಿಯೊಂದು ಹಳ್ಳಿಗಳಲ್ಲಿಯು ಕೈಗೊಳ್ಳಲಾಗುತ್ತದೆ. ಕುಡಿಯುವ ನೀರಿನ ಮೂಲಗಳಿಗೆ ಸೂಪರ್ ಕ್ಲೋರಿನೇಶನ್ ಮಾಡಿಸಲಾಗುತ್ತದೆ. ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು, ಮೆಟ್ಟಲಿಳಿದು ನೀರು ತುಂಬುವ ಬಾವಿ ಹಾಗೂ ಕೆರೆಗಳನ್ನು ನೇರವಾಗಿ ಉಪಯೋಗಿಸದಂತೆ ಆರೋಗ್ಯ ಶಿಕ್ಷಣ ನೀಡುವುದು, ಮತ್ತು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು, ಮುಂತಾದ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ನಡೆಸುತ್ತಾರೆ.

**ಏಡ್ಸ್‌ರೋಗ :** ಜ್ವರ, ಬೇಧಿ, ಸರ್ಪಸುತ್ತ (ಹರ್ಪಿಸ್) ಮುಂತಾದ ಹಲವು ಪೀಡೆಗಳು ಒಬ್ಬ ವ್ಯಕ್ತಿಗೆ ಒಮ್ಮೆಗೆ ಕಾಣಿಸುವುದು ಏಡ್ಸ್ ರೋಗದ ಮುಖ್ಯ ಲಕ್ಷಣ. ಈ ರೋಗಿಗಳಲ್ಲಿ ಪ್ರತಿರೋಧ ಶಕ್ತಿ ಇರುವುದಿಲ್ಲ. ಏಡ್ಸ್ ನಿಯಂತ್ರಣಾ ಕಾರ್ಯಕ್ರಮವನ್ನು 1987ರಲ್ಲಿ ಯೋಜಿಸಿ ಕಾರ್ಯರೂಪಕ್ಕೆ ತರಲಾಯಿತು. ಹೆಚ್ಚಾಗಿ ಈ ರೋಗವು ಲೈಂಗಿಕ ಸಂಪರ್ಕದಿಂದ ಹರಡುವುದು. ಆರೋಗ್ಯ ಶಿಕ್ಷಣ ನೀಡುವ ಮೂಲಕ ಜನರಿಗೆ ಈ ರೋಗದ ದುಷ್ಪರಿಣಾಮ ತಿಳಿಸಲಾಗುತ್ತಿದೆ. ಧಾರವಾಡ ಜಿಲ್ಲೆಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ. ಆಸ್ಪತ್ರೆ, ಹುಬ್ಬಳ್ಳಿಯಲ್ಲಿ ಏಡ್ಸ್ ನಿವಾರಣಾ ಕೇಂದ್ರವನ್ನು ಹಾಗೂ ವಿಭಾಗೀಯ ರಕ್ತ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಏಡ್ಸ್‌ರೋಗಿ ಪತ್ತೆ ಹಚ್ಚುವ ಕಾರ್ಯ ಧಾರವಾಡ ಜಿಲ್ಲೆಯಲ್ಲಿ ಇದ್ದು 1990 ರಲ್ಲಿ ಯಾವುದೇ ಏಡ್ಸ್ ತಗುಲಿದ ರೋಗಿಯ ಪ್ರಕರಣ ಪತ್ತೆ ಆಗಿರಲಿಲ್ಲ. 1991-92ರಲ್ಲಿ ನರಗುಂದ ತಾಲೂಕಿನ ಮಾಗನೂರ ಗ್ರಾಮದಲ್ಲಿ ಒಂದು ಏಡ್ಸ್ ಪ್ರಕರಣ ಪತ್ತೆ ಆಗಿದ್ದು,

ಅಲ್ಲಿ ಆರೋಗ್ಯ ಶಿಕ್ಷಣದ ಮೂಲಕ ಜನರಿಗೆ ತಿಳುವಳಿಕೆ ನೀಡಲಾಗುತ್ತಿದೆ. 1992-93ರಲ್ಲಿ 7 ಜನರಿಗೆ ಈ ರೋಗ ತಗುಲಿದ ಪ್ರಕರಣಗಳು ಇದ್ದು ಧಾರವಾಡದಲ್ಲಿ 5 , ಹುಬ್ಬಳ್ಳಿಯಲ್ಲಿ 1, ಹಾಗೂ ಅಳ್ನಾವರ ಪ್ರಾಥಮಿಕ ಆರೋಗ್ಯ ಕೇಂದ್ರ ವಿಭಾಗದಿಂದ ತೇಗೂರಿನಲ್ಲಿ 1 ಪ್ರಕರಣ ವರದಿಯಾಗಿದೆ. ಇವರೆಲ್ಲರೂ 19 ರಿಂದ 42 ವರ್ಷದೊಳಗಿನವರು ಇದ್ದು 6 ಜನ ಗಂಡಸರು ಹಾಗೂ ಒಬ್ಬ ಮಹಿಳೆ ಎಂದು ವರದಿ ತಿಳಿಸುತ್ತದೆ. 1993ರಲ್ಲಿ 29 ರೋಗ ತಗುಲಿದ ಪ್ರಕರಣಗಳು ಪತ್ತೆ ಆಗಿವೆ. 1994ರಲ್ಲಿ 11 ರೋಗದ ಪ್ರಕರಣಗಳಿದ್ದು ಒಬ್ಬ ವ್ಯಕ್ತಿ ಏಡ್ಸ್‌ನಿಂದ ಸಾವಿಗೀಡಾಗಿದ್ದಾನೆ. ರೋಗ ತಗುಲಿದ ಬಗ್ಗೆ ರಕ್ತ ಪರೀಕ್ಷೆಯ ನಂತರ ಖಚಿತ ಪಡುತ್ತದೆ. ಅಲ್ಲಿಯು ಕೂಡ ಆರೋಗ್ಯ ಶಿಕ್ಷಣ ನೀಡಲಾಗಿದ್ದು ರೋಗಿಗಳ ಸಂಬಂಧಿಕರ ಹಾಗೂ ಪೋಲಿಸರ ಸಹಕಾರದಿಂದ ವೇಶ್ಯೆಯರ ರಕ್ತ ಪರೀಕ್ಷೆ ಮಾಡಿಸಲಾಗುತ್ತಿದೆ. ಸರಕಾರ ಮುಂಜಾಗ್ರತಾ ಕ್ರಮಗಳನ್ವಯ ಎಲ್ಲ ರಕ್ತ ಸಂಗ್ರಹಾಲಯಗಳಲ್ಲಿಯೂ ಸಹ ಏಡ್ಸ್ ರೋಗದ ಬಗ್ಗೆ ಮೊದಲು ಪರೀಕ್ಷೆ ನಡೆಸಿ ನಂತರ ರಕ್ತ ಸಂಗ್ರಹಮಾಡಿ ಏಡ್ಸ್ ರೋಗದಿಂದ ಮುಕ್ತ ಎಂಬ ಚೀಟಿ ಅಂಟಿಸಲು ನಿರ್ದೇಶಿಸಲಾಗಿದೆ. ಹಾಗೂ ಏಡ್ಸ್ ಪರೀಕ್ಷೆಗೊಳಪಡಿಸಿದ ರಕ್ತವನ್ನು ಮಾತ್ರ ಉಪಯೋಗಿಸುವಂತೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

**ಫ್ಲೂರೋಸಿಸ್ :** ಕುಡಿಯುವ ನೀರಿನಲ್ಲಿ ಕರಗಿರುವ ಅಧಿಕಾಂಶ ಫ್ಲೋರೈಡ್ ರಸಾಯನಿಕದಿಂದ ಫ್ಲೂರೋಸಿಸ್ ಎಂಬ ರೋಗವು ಬರುತ್ತದೆ. ಇದು ಒಂದು ಗುಣಪಡಿಸಲಾರದ ರೋಗ. ಬಹುಶಃ ಅಂತರ ಜಲದಲ್ಲಿ ಫ್ಲೋರೈಡ್ ಕಲುಷಿತತೆ, ದೇಶದ ಕೆಲವು ಕಡೆ ಕಂಡು ಬಂದಿದೆ. ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಫ್ಲೋರೈಡ್ ರಾಸಾಯನಿಕ ಇದ್ದಲ್ಲಿ ಫ್ಲೂರೋಸಿಸ್ ರೋಗ ಹರಡಲು ಕಾರಣವಾಗುತ್ತದೆ. ಕುಡಿಯುವ ನೀರಿನಲ್ಲಿ ಇದರ ಅಂಶ 1 ಪಿ ಪಿ ಎಂ ಗಿಂತ ಹೆಚ್ಚು ಇದ್ದ ನೀರನ್ನು ಸತತವಾಗಿ ಬಳಸುವುದರಿಂದ ಜನರು ಈ ರೋಗಕ್ಕೆ ತುತ್ತಾಗುತ್ತಾರೆ. ಧಾರವಾಡ ಜಿಲ್ಲೆಯಲ್ಲಿ ಈ ರೋಗವು ಎರಡು ತಾಲೂಕುಗಳ (ಶಿರಹಟ್ಟಿ ಮತ್ತು ಮುಂಡರಗಿ) 38 ಗ್ರಾಮಗಳಲ್ಲಿ ಕಂಡು ಬಂದಿದೆ.

ಸ್ನಾಯು ಎಳೆತ, ಬೆನ್ನು ಸೊಂಟ ಮತ್ತು ಕಾಲು ಕೀಲುಗಳ ನೋವು, ತಲೆ ನೋವು, ಮಲಬದ್ಧತೆ, ಬಾಯಾರಿಕೆ, ಸುಸ್ತು, ಹಸಿವಾಗದಿರುವಿಕೆ, ಪದೇ ಪದೇ ಮೂತ್ರ ವಿಸರ್ಜನೆ ಮುಂತಾದ ರೋಗ ಲಕ್ಷಣಗಳು ಈ ರೋಗದಲ್ಲಿ ಕಂಡು ಬರುತ್ತವೆ. ದಂತ ಫ್ಲೂರೋಸಿಸ್ ರೋಗದಲ್ಲಿ ಹಲ್ಲುಗಳ ಮೇಲೆ ಕಂದು ಬಣ್ಣದ ಚುಕ್ಕೆ ಕಾಣಿಸಿಕೊಳ್ಳಲು ಪ್ರಾರಂಭಿಸಿ ಕ್ರಮೇಣ ಹಲ್ಲುಗಳು ಹಳದಿ ಬಣ್ಣಕ್ಕೆ ತಿರುಗಿ ನಂತರು ನಶಿಸಿ ಹೋಗುತ್ತವೆ. ಎಲುಬು (ಮೂಳೆ) ಫ್ಲೂರೋಸಿಸ್‌ನಲ್ಲಿ ಎಲುಬುಗಳು ಕ್ರಮೇಣ ಮೆದುವಾಗಿ ದೇಹದ ಆಕಾರ ಬದಲಾಗುವುದಲ್ಲದೇ ಎದ್ದು ಓಡಾಡಲು ಸಾಧ್ಯವಾಗದು. ಫ್ಲೊರೋಸಿಸ್ ರೋಗ ಕಾಣಿಸಿಕೊಂಡ ಗ್ರಾಮಗಳನ್ನು ಸರ್ಕಾರ ಗುರುತಿಸಿ, ಜಲ ಮೂಲಗಳ ಸಮೀಕ್ಷೆ ನಡೆಸಿ ವರದಿಯ ಆಧಾರದ ಮೇಲೆ ವಿವಿಧ ಹಂತಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ. ಪ್ರಥಮ ಹಂತದಲ್ಲಿ ರೋಗದ ಮಾಹಿತಿಯನ್ನು ಜನತೆಗೆ ಒದಗಿಸಿ ಜನಜಾಗೃತಿಯನ್ನುಂಟು ಮಾಡುವುದು, ವೈದ್ಯರಿಗೆ, ಆರೋಗ್ಯ ಕಾರ್ಯಕರ್ತರಿಗೆ, ವೈದ್ಯೇತರರಿಗೆ ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಎರಡು ದಿನಗಳ ತರಬೇತಿ ನೀಡುವುದು, ಮುಂತಾದ ತರಬೇತಿಗಳನ್ನು 1988-89 ಹಾಗೂ 1990-91ರಲ್ಲಿ ನೀಡಲಾಯಿತು. ದ್ವಿತೀಯ ಹಂತದ ಕಾರ್ಯಕ್ರಮವಾಗಿ ಎಪಿಡೆಮಿ ಎಕೊಲಜಿ ಸಮೀಕ್ಷೆ ರೀತ್ಯಾ ರೋಗಕ್ಕೆ ತುತ್ತಾದ ಗ್ರಾಮಗಳ ಜಲಮೂಲಗಳ ಪರೀಕ್ಷೆ ನಡೆಸಿ ನೀರಿನಲ್ಲಿಯ ರಾಸಾಯನಿಕದ ಮಟ್ಟವನ್ನು ಗುರುತಿಸುವುದು, ಯೋಗ್ಯವಲ್ಲದ ಜಲಮೂಲಗಳನ್ನು ಗುರುತಿಸುವುದು ಹಾಗೂ ಶಾಲಾ ಮಕ್ಕಳ ದಂತ ಪರೀಕ್ಷೆ ಮಾಡಿ ರೋಗಕ್ಕೆ ತುತ್ತಾದವರನ್ನು ಗುರುತಿಸುವುದು. ತೃತೀಯ ಹಂತದ ಕಾರ್ಯಕ್ರಮವಾಗಿ ಯೋಗ್ಯವಲ್ಲದ ನೀರನ್ನು ಜನರು ಕುಡಿಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು, ಸಾರ್ವಜನಿಕ ಶಿಕ್ಷಣ ಏರ್ಪಡಿಸಿ ಸಮತೋಲನ ಆಹಾರದ ಮಹತ್ವ 'ಸಿ' ಅನ್ನಾಂಗ ಮತ್ತು ಕ್ಯಾಲ್ಸಿಯಂ ಬಳಕೆಯ ಪ್ರಾಮುಖ್ಯತೆ, ದಂತ ಆರೋಗ್ಯದ ಬಗ್ಗೆ ಸೂಕ್ತ ಮಾಹಿತಿ ನೀಡುವುದು, ನೀರನ್ನು ಪರೀಕ್ಷೆಗೆ ಒಳಪಡಿಸಿ ಉಪಯೋಗಿಸುವಂತೆ ತಿಳುವಳಿಕೆ ನೀಡುವುದು ಹಾಗೂ ಮುಂಜಾಗ್ರತಾ ಶಿಬಿರಗಳನ್ನು ಏರ್ಪಡಿಸುವುದು ಆಗಿದೆ.

ಜಿಲ್ಲೆಯ 38 ಹಳ್ಳಿಗಳ 62,241 ಜನ ಸಮುದಾಯದಲ್ಲಿ 60,756 ಜನರ ಸಮೀಕ್ಷೆ ನಡೆಸಿ 3,699 ಜನ ಎಲುಬು ಫ್ಲೂರೋಸಿಸ್‌ನಿಂದಲೂ, 12,012 ಜನ ದಂತ ಫ್ಲೋರೋಸಿಸ್‌ನಿಂದ ಬಳಲುತ್ತಿರುವುದು ತಿಳಿದು ಬಂದಿದೆ.

## ಆಯುರ್ವೇದ

ಪ್ರಾಚೀನ ಭಾರತದ ವೈದ್ಯ ಪರಂಪರೆ ಹಾಗೂ ಅದರ ಹಿರಿಮೆಯ ದ್ಯೋತಕವಾಗಿ ಬೆಳದು ಬಂದ ಆಯುರ್ವೇದ ನಮ್ಮ ದೇಶದ ಒಂದು ಸತ್ವಶಾಲಿ ವೈದ್ಯ ವಿದ್ಯೆ ಆಗಿದೆ. ಇದರ ಆವಿಷ್ಕಾರ ವೈದಿಕ ಕಾಲವಾಗಿದ್ದು ಶತಮಾನಗಳು ಉರುಳಿದರೂ ತನ್ನ

ಶ್ರೇಷ್ಠತೆ ಗರಿಮೆಯನ್ನು ಇಂದಿಗೂ ಕಳೆದುಕೊಳ್ಳದೆ ಜನಪದದ ಆರೋಗ್ಯ ಕಾಪಾಡುವಲ್ಲಿ ನೆರವಾಗುತ್ತಿದೆ. ಇದು ಪ್ರಾಚೀನ ವಿದ್ಯೆಗಳಲ್ಲಿಯೇ ಉತ್ಕೃಷ್ಟ ವಿದ್ಯೆ ಎಂದು ಮಾನ್ಯವಾಗಿದೆ. ಮಾನವರ ಆಯುಸ್ಸು ಅದರ ರಕ್ಷಣೆ, ಚಿಕಿತ್ಸೆ ಮುಂತಾದವುಗಳಿಗೆ ಸಂಬಂಧಿಸಿದ ಜ್ಞಾನವಾದ ಇದರಲ್ಲಿ ವಿವಿಧ ರೋಗಗಳ ಮಾಹಿತಿ ಹಾಗೂ ಚಿಕಿತ್ಸಾ ವಿಧಾನ ಹೇಳಿದೆ. ವಾಯು (ವಾತ), ಪಿತ್ತ, ಕಫ ಎಂಬ ಮೂರು ತತ್ವಗಳನ್ನು ಆಯುರ್ವೇದ ಹೊಂದಿದ್ದು, ಇವು ವಿಕಾರ ಹೊಂದಿದಲ್ಲಿ ದೇಹದ ಆರೋಗ್ಯ ಕೆಡುವುದು. ಈ ತ್ರಿದೋಷಗಳ ನಿವಾರಣಾ ಕ್ರಮಗಳನ್ನು ಈ ವೈದ್ಯ ಪದ್ಧತಿ ತಿಳಿಸುತ್ತದೆ. ಬ್ರಿಟೀಶರ ಆಳ್ವಿಕೆಯಲ್ಲಿ ಭಾರತಕ್ಕೆ ಬಂದ ಆಲೋಪಥಿ ವೈದ್ಯ ಪದ್ಧತಿಯು ಜನರಲ್ಲಿ ಆಯುರ್ವೇದದ ಬಗ್ಗೆ ಸ್ವಲ್ಪ ಮಟ್ಟಿನ ವಿಶ್ವಾಸವನ್ನು ಕದಡಿತ್ತು. ಆದರೆ ಇದು ಒಂದು ವಿಜ್ಞಾನವೆಂದು ಈಗ ಮನವರಿಕೆಯಾಗುತ್ತಿದೆ. ಈ ವೈದ್ಯ ಪದ್ಧತಿಯು ಈಗ ಆಲೋಪಥಿಗೆ ಸಮಾನಾಂತರವಾಗಿ ಅಭಿವೃದ್ಧಿ ಹೊಂದುತ್ತಿದೆ. ಸರ್ಕಾರವು ಕೂಡಾ ಈ ಭಾರತೀಯ ವೈದ್ಯ ಪದ್ಧತಿಯ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುತ್ತಿದೆ.

**ಆಯುರ್ವೇದ ಶಿಕ್ಷಣ :** ಆಯುರ್ವೇದ ಶಿಕ್ಷಣ ನೀಡುವ ವಿದ್ಯಾಲಯಗಳನ್ನು ತೆರೆಯುವ ಮೂಲಕ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು, ಆಯುರ್ವೇದ ಜ್ಞಾನ ಪ್ರಸಾರದಲ್ಲಿ ತೀವ್ರ ಆಸಕ್ತಿ ತೋರಿಸುತ್ತಾ ಬಂದಿವೆ. ರಾಜ್ಯಗಳ ಪುನರ್ ವಿಂಗಡನೆ ಪೂರ್ವದಲ್ಲಿ ಹಳೆಯ ಮೈಸೂರು ವಿಭಾಗದಲ್ಲಿ ಮಿಶ್ರಾಯುರ್ವೇದ ಶಿಕ್ಷಣ ಪದ್ಧತಿ ಜಾರಿಯಲ್ಲಿ ಇತ್ತು. ಉತ್ತರ ಕರ್ನಾಟಕದಲ್ಲಿ ಯಾವ ಶಿಕ್ಷಣ ಸಂಸ್ಥೆಯು ಇಲ್ಲದ ಕಾರಣ ಅದರ ಅವಶ್ಯಕತೆಯನ್ನು ಅರಿತ ತಜ್ಞ ವೈದ್ಯರಾದ ವೈದ್ಯಗುರು ಪಿ.ಎ.ಹಲ್ಲೀಕರ ಅವರ ಪ್ರಯತ್ನ ಹಾಗೂ ಮಾರ್ಗದರ್ಶನದ ಫಲವಾಗಿ 1954ರಲ್ಲಿ ಆಯುರ್ವೇದ ಮಹಾವಿದ್ಯಾಲಯವು ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡಿತು. ಪ್ರಾರಂಭದಲ್ಲಿ ಕೇವಲ 9 ಜನ ಅಧ್ಯಾಪಕ ವರ್ಗವಿದ್ದು ಪ್ರಥಮವಾಗಿ 28 ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯಿತು. 1956ರಲ್ಲಿ ಮುಂಬೈ ಸರ್ಕಾರದ ಧನ ಸಹಾಯ ದೊರಕಿ ವಿದ್ಯಾಲಯವು ತನ್ನ ಅಗತ್ಯ ಸಲಕರಣೆಗಳನ್ನು ಹೊಂದಿಸಿಕೊಂಡಿತು. 1961ರಲ್ಲಿ ಹುಬ್ಬಳ್ಳಿ ಆಯುರ್ವೇದ ಸೇವಾ ಸಮಿತಿಯು ಸಂಸ್ಥೆಯ ಆಡಳಿತವನ್ನು ವಹಿಸಿಕೊಂಡಿತು; ಇದಕ್ಕೆ ಡಾ।। ಹರ್ಡೀಕರರ ಮಾರ್ಗದರ್ಶನವಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಈ ಮಹಾ ವಿದ್ಯಾಲಯ 1970ರಲ್ಲಿ ಬಿ.ಎ.ಎಮ್.ಎಸ್. ಮತ್ತು 5 1/2 ವರ್ಷಗಳ ಅವಧಿಯ ಆಯುರ್ವೇದ ಆಚಾರ್ಯ ಎಂಬ ಪದವಿಗಳನ್ನು ಪ್ರಾರಂಭಿಸಿತು. ಕಾಲೇಜಿಗೆ ಹೊಂದಿಕೊಂಡಂತೆ ಒಂದು ಆಸ್ಪತ್ರೆ ಇದೆ. ಕೇಂದ್ರ ಸರಕಾರವು 5 ಲಕ್ಷ ರೂಪಾಯಿಗಳ ಧನ ಸಹಾಯ ನೀಡಿ ಸಂಸ್ಥೆಗೆ ಸ್ವಂತ ಕಟ್ಟಡ ಹೊಂದಲು ಅನುವು ಮಾಡಿಕೊಟ್ಟಿತು. ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ಹುಬ್ಬಳ್ಳಿಯ ಹೆಗ್ಗೇರಿಯಲ್ಲಿ 5 ಎಕರೆ ಭೂಮಿಯನ್ನು ಅಲ್ಪ ದರದಲ್ಲಿ ಒದಗಿಸಿ ಕೊಟ್ಟು ಈ ಸಂಸ್ಥೆಯ ಅಭಿವೃದ್ಧಿಗೆ ತಿರುವು ನೀಡಿದವು. ಒಂದು ಸುಸಜ್ಜಿತವಾದ ಆಸ್ಪತ್ರೆಯನ್ನು ಸುಮಾರು 12 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕೆ ಮಹಾವಿದ್ಯಾಲಯಕ್ಕೆ ಹೊಂದಿಕೊಂಡಂತೆ ವಾಚನಾಲಯ, ಶರೀರರಸಶಾಸ್ತ್ರ, ದ್ರವ್ಯಗುಣ, ಶವಚ್ಛೇದನ ಮುಂತಾದ ವಿಭಾಗಗಳು ಇವೆ. ಯೋಗ ವಿಷಯವನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. ವಿದ್ಯಾಲಯವು ತನ್ನದೇ ಆದ ಔಷಧಿ ನಿರ್ಮಾಣ ಘಟಕ ಹೊಂದಿದೆ. ಗರ್ಭಿಣಿಯರ ಪೂರ್ವ ಪರೀಕ್ಷೆ ಹಾಗೂ ಹೆರಿಗೆ ನಂತರದ ಚಿಕಿತ್ಸೆ ಸೌಲಭ್ಯವೂ ಇದೆ. ಮಧುಮೇಹ, ವಾತರೋಗಗಳ ಬಗ್ಗೆ ಸಂಶೋಧನೆಗೆ ಇಲ್ಲಿ ಅವಕಾಶ ಉಂಟು ಅಪಸ್ಮಾರ ಮತ್ತು ತೊನ್ನು ರೋಗಿಗಳಿಗೂ ಕೂಡಾ ತಜ್ಞ ವೈದ್ಯರ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತದೆ. ಸುಸಜ್ಜಿತವಾದ ಸಂಶೋಧನಾ ವಿಭಾಗವನ್ನು ಈ ಸಂಸ್ಥೆ ಪಡೆದಿದೆ. ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ಈ ಸಂಸ್ಥೆ ನೀಡುತ್ತಿದೆ.

1992-93ರಲ್ಲಿ ಧಾರವಾಡ ಜಿಲ್ಲೆಯಲ್ಲಿ ನಾಲ್ಕು ಆಯುರ್ವೇದ ಮಹಾವಿದ್ಯಾಲಯಗಳಿದ್ದು ಅವುಗಳು ಗದಗ, ಹಾವೇರಿ, ಹುಬ್ಬಳ್ಳಿ ಮತ್ತು ಮುಂಡರಗಿಯಲ್ಲಿ ಇದ್ದು ಅವು ಕ್ರಮವಾಗಿ 127, 25, 40, ಮತ್ತು 22 ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಪ್ರವೇಶ ಒದಗಿಸುತ್ತದೆ. 1993-94ರಲ್ಲಿ ಆಯುರ್ವೇದ ಮಹಾವಿದ್ಯಾಲಯಗಳ ಸಂಖ್ಯೆ 7 ಆಗಿದ್ದು, ಅವು ಹುಬ್ಬಳ್ಳಿ, ಗದಗ (2), ಮುಂಡರಗಿ, ಹಾವೇರಿ, ರೋಣ, ಹಾಗೂ ಧಾರವಾಡಗಳಲ್ಲಿದ್ದು ಅವುಗಳಲ್ಲಿ ಒಟ್ಟು 225 ವಿದ್ಯಾರ್ಥಿಗಳಿಗೆ ಪ್ರತೀ ವರ್ಷ ಪ್ರವೇಶಾವಕಾಶವಿದೆ.

## ಆರೋಗ್ಯ ಸಂಸ್ಥೆಗಳು

**ಜಿಲ್ಲಾ ಆಸ್ಪತ್ರೆ, ಧಾರವಾಡ :** ಜಿಲ್ಲಾ ಆಸ್ಪತ್ರೆ, ಧಾರವಾಡವು 1830ರಷ್ಟು ಹಿಂದೆಯೇ ಸ್ಥಾಪಿಸಲ್ಪಟ್ಟ ಜಿಲ್ಲೆಯ ಅತ್ಯಂತ ಹಳೆಯ ಆಸ್ಪತ್ರೆ ಆಗಿದೆ. ಮೊದಲು ಸಿವಿಲ್ ಆಸ್ಪತ್ರೆ ಎಂದು ಕರೆಯಲ್ಪಡುತ್ತಿದ್ದ ಈ ಆಸ್ಪತ್ರೆ 1881ರಲ್ಲಿ ಬೇರೆ ಹೊಸ ಕಟ್ಟಡಕ್ಕೆ

ಶ್ರೇಷ್ಠತೆ ಗರಿಮೆಯನ್ನು ಇಂದಿಗೂ ಕಳೆದುಕೊಳ್ಳದೆ ಜನಪದದ ಆರೋಗ್ಯ ಕಾಪಾಡುವಲ್ಲಿ ನೆರವಾಗುತ್ತಿದೆ. ಇದು ಪ್ರಾಚೀನ ವಿದ್ಯೆಗಳಲ್ಲಿಯೇ ಉತ್ಕೃಷ್ಟ ವಿದ್ಯೆ ಎಂದು ಮಾನ್ಯವಾಗಿದೆ. ಮಾನವರ ಆಯುಸ್ಸು ಅದರ ರಕ್ಷಣೆ, ಚಿಕಿತ್ಸೆ ಮುಂತಾದವುಗಳಿಗೆ ಸಂಬಂಧಿಸಿದ ಜ್ಞಾನವಾದ ಇದರಲ್ಲಿ ವಿವಿಧ ರೋಗಗಳ ಮಾಹಿತಿ ಹಾಗೂ ಚಿಕಿತ್ಸಾ ವಿಧಾನ ಹೇಳಿದೆ. ವಾಯು (ವಾತ), ಪಿತ್ತ, ಕಫ ಎಂಬ ಮೂರು ತತ್ವಗಳನ್ನು ಆಯುರ್ವೇದ ಹೊಂದಿದ್ದು, ಇವು ವಿಕಾರ ಹೊಂದಿದಲ್ಲಿ ದೇಹದ ಆರೋಗ್ಯ ಕೆಡುವುದು. ಈ ತ್ರಿದೋಷಗಳ ನಿವಾರಣಾ ಕ್ರಮಗಳನ್ನು ಈ ವೈದ್ಯ ಪದ್ಧತಿ ತಿಳಿಸುತ್ತದೆ. ಬ್ರಿಟೀಶರ ಆಳ್ವಿಕೆಯಲ್ಲಿ ಭಾರತಕ್ಕೆ ಬಂದ ಆಲೋಪಥಿ ವೈದ್ಯ ಪದ್ಧತಿಯು ಜನರಲ್ಲಿ ಆಯುರ್ವೇದದ ಬಗ್ಗೆ ಸ್ವಲ್ಪ ಮಟ್ಟಿನ ವಿಶ್ವಾಸವನ್ನು ಕದಡಿತ್ತು. ಆದರೆ ಇದು ಒಂದು ವಿಜ್ಞಾನವೆಂದು ಈಗ ಮನವರಿಕೆಯಾಗುತ್ತಿದೆ. ಈ ವೈದ್ಯ ಪದ್ಧತಿಯು ಈಗ ಆಲೋಪಥಿಗೆ ಸಮಾನಾಂತರವಾಗಿ ಅಭಿವೃದ್ಧಿ ಹೊಂದುತ್ತಿದೆ. ಸರ್ಕಾರವು ಕೂಡಾ ಈ ಭಾರತೀಯ ವೈದ್ಯ ಪದ್ಧತಿಯ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುತ್ತಿದೆ.

**ಆಯುರ್ವೇದ ಶಿಕ್ಷಣ :** ಆಯುರ್ವೇದ ಶಿಕ್ಷಣ ನೀಡುವ ವಿದ್ಯಾಲಯಗಳನ್ನು ತೆರೆಯುವ ಮೂಲಕ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು, ಆಯುರ್ವೇದ ಜ್ಞಾನ ಪ್ರಸಾರದಲ್ಲಿ ತೀವ್ರ ಆಸಕ್ತಿ ತೋರಿಸುತ್ತಾ ಬಂದಿವೆ. ರಾಜ್ಯಗಳ ಪುನರ್ ವಿಂಗಡನೆ ಪೂರ್ವದಲ್ಲಿ ಹಳೆಯ ಮೈಸೂರು ವಿಭಾಗದಲ್ಲಿ ಮಿಶ್ರಾಯುರ್ವೇದ ಶಿಕ್ಷಣ ಪದ್ಧತಿ ಜಾರಿಯಲ್ಲಿ ಇತ್ತು. ಉತ್ತರ ಕರ್ನಾಟಕದಲ್ಲಿ ಯಾವ ಶಿಕ್ಷಣ ಸಂಸ್ಥೆಯು ಇಲ್ಲದ ಕಾರಣ ಅದರ ಅವಶ್ಯಕತೆಯನ್ನು ಅರಿತ ತಜ್ಞ ವೈದ್ಯರಾದ ವೈದ್ಯಗುರು ಪಿ.ಎ.ಹರ್ಡೀಕರ ಅವರ ಪ್ರಯತ್ನ ಹಾಗೂ ಮಾರ್ಗದರ್ಶನದ ಫಲವಾಗಿ 1954ರಲ್ಲಿ ಆಯುರ್ವೇದ ಮಹಾವಿದ್ಯಾಲಯವು ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡಿತು. ಪ್ರಾರಂಭದಲ್ಲಿ ಕೇವಲ 9 ಜನ ಅಧ್ಯಾಪಕ ವರ್ಗವಿದ್ದು ಪ್ರಥಮವಾಗಿ 28 ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯಿತು. 1956ರಲ್ಲಿ ಮುಂಬೈ ಸರ್ಕಾರದ ಧನ ಸಹಾಯ ದೊರಕಿ ವಿದ್ಯಾಲಯವು ತನ್ನ ಅಗತ್ಯ ಸಲಕರಣೆಗಳನ್ನು ಹೊಂದಿಸಿಕೊಂಡಿತು. 1961ರಲ್ಲಿ ಹುಬ್ಬಳ್ಳಿ ಆಯುರ್ವೇದ ಸೇವಾ ಸಮಿತಿಯು ಸಂಸ್ಥೆಯ ಆಡಳಿತವನ್ನು ವಹಿಸಿಕೊಂಡಿತು; ಇದಕ್ಕೆ ಡಾ|| ಹರ್ಡೀಕರರ ಮಾರ್ಗದರ್ಶನವಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಈ ಮಹಾ ವಿದ್ಯಾಲಯ 1970ರಲ್ಲಿ ಬಿ.ಎ.ಎಮ್.ಎಸ್. ಮತ್ತು 5 1/2 ವರ್ಷಗಳ ಅವಧಿಯ ಆಯುರ್ವೇದ ಆಚಾರ್ಯ ಎಂಬ ಪದವಿಗಳನ್ನು ಪ್ರಾರಂಭಿಸಿತು. ಕಾಲೇಜಿಗೆ ಹೊಂದಿಕೊಂಡಂತೆ ಒಂದು ಆಸ್ಪತ್ರೆ ಇದೆ. ಕೇಂದ್ರ ಸರಕಾರವು 5 ಲಕ್ಷ ರೂಪಾಯಿಗಳ ಧನ ಸಹಾಯ ನೀಡಿ ಸಂಸ್ಥೆಗೆ ಸ್ವಂತ ಕಟ್ಟಡ ಹೊಂದಲು ಅನುವು ಮಾಡಿಕೊಟ್ಟಿತು. ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ಹುಬ್ಬಳ್ಳಿಯ ಹೆಗ್ಗೇರಿಯಲ್ಲಿ 5 ಎಕರೆ ಭೂಮಿಯನ್ನು ಅಲ್ಪ ದರದಲ್ಲಿ ಒದಗಿಸಿ ಕೊಟ್ಟು ಈ ಸಂಸ್ಥೆಯ ಅಭಿವೃದ್ಧಿಗೆ ತಿರುವು ನೀಡಿದವು. ಒಂದು ಸುಸಜ್ಜಿತವಾದ ಆಸ್ಪತ್ರೆಯನ್ನು ಸುಮಾರು 12 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕೆ ಮಹಾವಿದ್ಯಾಲಯಕ್ಕೆ ಹೊಂದಿಕೊಂಡಂತೆ ವಾಚನಾಲಯ, ಶರೀರರಸಶಾಸ್ತ್ರ, ದ್ರವ್ಯಗುಣ, ಶವಚ್ಛೇದನ ಮುಂತಾದ ವಿಭಾಗಗಳು ಇವೆ. ಯೋಗ ವಿಷಯವನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. ವಿದ್ಯಾಲಯವು ತನ್ನದೇ ಆದ ಔಷಧಿ ನಿರ್ಮಾಣ ಘಟಕ ಹೊಂದಿದೆ. ಗರ್ಭಿಣಿಯರ ಪೂರ್ವ ಪರೀಕ್ಷೆ ಹಾಗೂ ಹೆರಿಗೆ ನಂತರದ ಚಿಕಿತ್ಸೆ ಸೌಲಭ್ಯವೂ ಇದೆ. ಮಧುಮೇಹ, ವಾತರೋಗಗಳ ಬಗ್ಗೆ ಸಂಶೋಧನೆಗೆ ಇಲ್ಲಿ ಅವಕಾಶ ಉಂಟು ಅಪಸ್ಮಾರ ಮತ್ತು ತೊನ್ನು ರೋಗಿಗಳಿಗೂ ಕೂಡಾ ತಜ್ಞ ವೈದ್ಯರ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತದೆ. ಸುಸಜ್ಜಿತವಾದ ಸಂಶೋಧನಾ ವಿಭಾಗವನ್ನು ಈ ಸಂಸ್ಥೆ ಪಡೆದಿದೆ. ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ಈ ಸಂಸ್ಥೆ ನೀಡುತ್ತಿದೆ.

1992-93ರಲ್ಲಿ ಧಾರವಾಡ ಜಿಲ್ಲೆಯಲ್ಲಿ ನಾಲ್ಕು ಆಯುರ್ವೇದ ಮಹಾವಿದ್ಯಾಲಯಗಳಿದ್ದು ಅವುಗಳು ಗದಗ, ಹಾವೇರಿ, ಹುಬ್ಬಳ್ಳಿ ಮತ್ತು ಮುಂಡರಗಿಯಲ್ಲಿ ಇದ್ದು ಅವು ಕ್ರಮವಾಗಿ 127, 25, 40, ಮತ್ತು 22 ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಪ್ರವೇಶ ಒದಗಿಸುತ್ತದೆ. 1993-94ರಲ್ಲಿ ಆಯುರ್ವೇದ ಮಹಾವಿದ್ಯಾಲಯಗಳ ಸಂಖ್ಯೆ 7 ಆಗಿದ್ದು, ಅವು ಹುಬ್ಬಳ್ಳಿ, ಗದಗ (2), ಮುಂಡರಗಿ, ಹಾವೇರಿ, ರೋಣ, ಹಾಗೂ ಧಾರವಾಡಗಳಲ್ಲಿದ್ದು ಅವುಗಳಲ್ಲಿ ಒಟ್ಟು 225 ವಿದ್ಯಾರ್ಥಿಗಳಿಗೆ ಪ್ರತೀ ವರ್ಷ ಪ್ರವೇಶಾವಕಾಶವಿದೆ.

## ಆರೋಗ್ಯ ಸಂಸ್ಥೆಗಳು

**ಜಿಲ್ಲಾ ಆಸ್ಪತ್ರೆ, ಧಾರವಾಡ :** ಜಿಲ್ಲಾ ಆಸ್ಪತ್ರೆ, ಧಾರವಾಡವು 1830ರಷ್ಟು ಹಿಂದೆಯೇ ಸ್ಥಾಪಿಸಲ್ಪಟ್ಟ ಜಿಲ್ಲೆಯ ಅತ್ಯಂತ ಹಳೆಯ ಆಸ್ಪತ್ರೆ ಆಗಿದೆ. ಮೊದಲು ಸಿವಿಲ್ ಆಸ್ಪತ್ರೆ ಎಂದು ಕರೆಯಲ್ಪಡುತ್ತಿದ್ದ ಈ ಆಸ್ಪತ್ರೆ 1881ರಲ್ಲಿ ಬೇರೆ ಹೊಸ ಕಟ್ಟಡಕ್ಕೆ

ಮಾರ್ಪಾಯಿಸಲ್ಪಟ್ಟಿತು. ಆ ವರ್ಷ 356 ಜನ ಒಳರೋಗಿಗಳು ಹಾಗೂ 5,276 ಜನ ಹೊರರೋಗಿಗಳು ಚಿಕಿತ್ಸೆ ಪಡೆದಿದ್ದರು. ಈ ಆಸ್ಪತ್ರೆಯು ಜಿಲ್ಲೆಯ ಎಲ್ಲ ಸರ್ಕಾರಿ ಹಾಗೂ ಅನುದಾನಿತ ಆಸ್ಪತ್ರೆಗಳ ಆಡಳಿತಾಧಿಕಾರವನ್ನು ನಿರ್ವಹಿಸುತ್ತಿದೆ.

1952ರ ವೇಳೆಗೆ ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ 77 ಆಗಿತ್ತು ಮತ್ತು ಆಸ್ಪತ್ರೆಯು ಕ್ಷ ಕಿರಣ ಸೌಲಭ್ಯವನ್ನು ಹೊಂದಿತ್ತು. 17 ಹಾಸಿಗೆಗಳ ಹೆರಿಗೆ ವಿಭಾಗ ಹಾಗೂ 6 ಹಾಸಿಗೆಗಳ ಸೋಂಕು ರೋಗ ವಿಭಾಗವಿತ್ತು. 1951ರಲ್ಲಿ 3,189 ಒಳರೋಗಿಗಳು ಹಾಗೂ 15,211 ಹೊರರೋಗಿಗಳು ಚಿಕಿತ್ಸೆ ಪಡೆದಿದ್ದರು. ಸರ್ಕಾರವು ಈ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು 170 ರಿಂದ 250ಕ್ಕೆ ಹೆಚ್ಚಿಸಿ ಆಸ್ಪತ್ರೆಯನ್ನು ಮೇಲ್‌ದರ್ಜೆಗೆ ಏರಿಸಿತು. 1994ರಲ್ಲಿ ಹೊರರೋಗಿಗಳ ವಿಭಾಗದ ಹೊಸ ಕಟ್ಟಡವನ್ನು ಆಸ್ಪತ್ರೆ ಪಡೆದುಕೊಂಡಿತು. ಹಾಗೂ 1993-94ನೇ ಸಾಲಿನಲ್ಲಿ 75,000 ರೂಪಾಯಿಗಳ ಅನುದಾನವನ್ನು ಸಹ ಪಡೆಯಿತು. ಪ್ರಸ್ತುತ ಆಸ್ಪತ್ರೆಯು ಅತ್ಯಾಧುನಿಕ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿದೆ. ಸಾಮಾನ್ಯ ವೈದ್ಯ, ಶಸ್ತ್ರ ಚಿಕಿತ್ಸೆ, ಸ್ತ್ರೀರೋಗ, ಚಿಕ್ಕಮಕ್ಕಳ ವಿಭಾಗ, ಅರಿವಳಿಕೆ (ಅನಿಸ್ತೀಶಿಯಾ), ರೇಡಿಯೊಲಜಿ, ಅಸ್ಥಿಚಿಕಿತ್ಸೆ, ನೇತ್ರಚಿಕಿತ್ಸೆ, ಕಿವಿಮೂಗು ಗಂಟಲು ಚಿಕಿತ್ಸೆ, ಚರ್ಮ ಹಾಗೂ ಗುಹ್ಯರೋಗ ಹಾಗೂ ದಂತ ಚಿಕಿತ್ಸಾ ವಿಭಾಗಗಳನ್ನು ಹೊಂದಿದೆ. ಪ್ರತೀಯೊಂದು ವಿಭಾಗವು ತಜ್ಞ ವೈದ್ಯರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿವೆ. 16 ಜನ ವಿವಿಧ ತಜ್ಞ ವೈದ್ಯರುಗಳನ್ನು ಈ ಆಸ್ಪತ್ರೆ ಪಡೆದಿದೆ.

1993ರಲ್ಲಿ ಜಿಲ್ಲಾ ನೇತ್ರ ಸಂಚಾರಿ ಘಟಕ ಮಂಜುರಾಗಿದ್ದು ಈ ಆಸ್ಪತ್ರೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. 1994 ಮಾರ್ಚ್ ಅಂತ್ಯದವರೆಗೆ 4 ತಿಂಗಳಲ್ಲಿ 1,973 ನೇತ್ರ ರೋಗಿಗಳನ್ನು ಪರೀಕ್ಷಿಸಿದ್ದು, 52 ಜನರಿಗೆ ಕನ್ನಡಕದ ನಂಬರುಗಳನ್ನು ನೀಡಿರುವುದು, 456 ಜನರಿಗೆ ಮೋತಿ ಬಿಂದು ಶಸ್ತ್ರ ಚಿಕಿತ್ಸೆ ಮಾಡಿದ್ದು, 456 ಶಸ್ತ್ರ ಚಿಕಿತ್ಸೆ ಹೊಂದಿರುವ ಫಲಾನುಭವಿಗಳಿಗೆ ಉಚಿತವಾಗಿ ಕನ್ನಡಕಗಳನ್ನು ಈ ಸಂಚಾರಿ ಘಟಕ ನೀಡಿದೆ.

ಕುಟುಂಬ ಕಲ್ಯಾಣ ಕೇಂದ್ರ, ತರಬೇತಿ ಕೇಂದ್ರ, ಕ್ಷಯರೋಗ ನಿಯಂತ್ರಣ ಕೇಂದ್ರ, ಕುಷ್ಠರೋಗ ವಿಭಾಗ, ಲೈಂಗಿಕ ರೋಗಿಗಳ ವಿಭಾಗ, ಬಾಣಂತಿ ಸೇವಾ ಕೇಂದ್ರಗಳನ್ನು ಸಹ ಈ ಆಸ್ಪತ್ರೆ ಹೊಂದಿದೆ. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ 190-91 ಹಾಗೂ 1993-94 ಈ ಎರಡು ಸಾಲುಗಳಲ್ಲಿ ಕ್ರಮವಾಗಿ 4/2 ವ್ಯಾಸಕ್ಟಮಿ 339/467 ಟ್ಯೂಬೆಕ್ಟಮಿ 12/93 ಉದರದರ್ಶಕ ಶಸ್ತ್ರ ಚಿಕಿತ್ಸೆ ಹೀಗೆ ಒಟ್ಟು 351/562 ಸಂತಾನ ಹರಣ ಚಿಕಿತ್ಸೆಗಳನ್ನು ನಡೆಸಲಾಗಿದೆ; ಮತ್ತು 351/434 ವಂಕಿಧಾರಣೆ ಮಾಡಿಸಲಾಗಿದೆ; 133/195 ಜನರಿಗೆ ಗರ್ಭ ನಿರೋಧಕ ಮಾತ್ರೆಗಳು, 198/500 ಜನರಿಗೆ ನಿರೋಧ ಒದಗಿಸಲಾಯಿತು. ಬಾಣಂತಿ ಸೇವಾ ಕಾರ್ಯಕ್ರಮದಡಿಯಲ್ಲಿ 1990-91 ಮತ್ತು 1993-94 ಈ ಎರಡು ಸಾಲುಗಳಲ್ಲಿ 1439/1487 ಹೆರಿಗೆಗಳು 108/125 ಗರ್ಭದತ್ರಿ, 55/29 ಎಂಟಿಪಿ ಮಾಡಿಸಲಾಯಿತು. ಮಕ್ಕಳ ಮತ್ತು ತಾಯಂದಿರ ಆರೋಗ್ಯ ಕಾರ್ಯಕ್ರಮದಡಿ 1990-91 ಮತ್ತು 1993-94ರಲ್ಲಿ ಕ್ರಮವಾಗಿ 1760/1160 ಡಿಪಿಟಿ, 1347/1602 ಡಿ ಮತ್ತು ಟಿ, 1780/1825 ಟಿಟಿ (ತಾಯಂದಿರಿಗೆ), 1760/1460 ಪೋಲಿಯೋ ನಿರೋಧಕ, 1058/1275 ದಢಾರ ಲಸಿಕೆಗಳನ್ನು, 2423/1840 ಬಿಸಿಜಿ ಚುಚ್ಚುಮದ್ದು ನೀಡಲಾಯಿತು. ಕ್ಷಯ ರೋಗಿಗಳ ನಿಯಂತ್ರಣದಡಿಯಲ್ಲಿ 1990-91 ಮತ್ತು 1993-94ನೇ ಸಾಲಿನಲ್ಲಿ ಕ್ರಮವಾಗಿ 1081/1420, ಕಫ ಪರೀಕ್ಷೆ, 354/261 ಕ್ಷಯ ರೋಗಿಗಳನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡಿದೆ. ಕುಷ್ಠರೋಗ ನಿಯಂತ್ರಣ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು 1990-91 ಹಾಗೂ 1993-94ರಲ್ಲಿ ಕ್ರಮವಾಗಿ 27/140, ರಾಷ್ಟ್ರೀಯ ಅಂಧತ್ವ ನಿವಾರಣಾ ಕ್ರಮದಡಿಯಲ್ಲಿ 1993-94ರಲ್ಲಿ 18,705 ಜನರ ಕಣ್ಣು ಪರೀಕ್ಷೆ ನಡೆಸಿ ಒಟ್ಟು 5,411 ಮೋತಿ ಬಿಂದು ಶಸ್ತ್ರಚಿಕಿತ್ಸೆಗಳನ್ನು ಮಾಡಲಾಯಿತು. ಹಾಗೂ 2,503 ಜನರಿಗೆ ಕನ್ನಡಕ ತೆಗೆದುಕೊಡಲಾಯಿತು.

1991-92, 1992-93ರಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ ಕ್ರಮವಾಗಿ 2,85,584 ಹಾಗೂ 2,88,325; ಒಳರೋಗಿಗಳ ಸಂಖ್ಯೆ 7,689 ಮತ್ತು 7,106; ಹಾಗೂ ಆಸ್ಪತ್ರೆಯಲ್ಲಿ ಮೃತರಾದವರ ಸಂಖ್ಯೆ 249 ಮತ್ತು 216 ಆಗಿದೆ. 1993-94ರಲ್ಲಿ ಆಸ್ಪತ್ರೆಯಲ್ಲಿ ನಡೆಸಿದ ಶಸ್ತ್ರ ಚಿಕಿತ್ಸೆಗಳು 1,359 ಮತ್ತು ಮಾಡಿಸಲಾದ ಹೆರಿಗೆಗಳು 1,570 ಆಗಿವೆ.

ಜಿಲ್ಲಾ ಶಸ್ತ್ರ ಚಿಕಿತ್ಸಕರು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾಗಿದ್ದು ಅವರ ನೆರವಿಗೆ 5 ಜನ ಆರೋಗ್ಯಾಧಿಕಾರಿಗಳು, 9 ಜನ ಸಹಾಯಕ ಶಸ್ತ್ರ ಚಿಕಿತ್ಸಕರು ಒಬ್ಬರು ದಂತ ಚಿಕಿತ್ಸಕರು ಹಾಗೂ ಇತರ 164 ಜನ ಸಿಬ್ಬಂದಿ ವರ್ಗವಿದೆ.

**ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ**

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯು ಹುಬ್ಬಳ್ಳಿಯಲ್ಲಿ 1957ರಲ್ಲಿ ಸ್ಥಾಪನೆಗೊಂಡು, 1960ರಲ್ಲಿ ಕಾರ್ಯಾರಂಭ ಮಾಡಿತು. ಆರಂಭದಲ್ಲಿ 150 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದ ಈ ಆಸ್ಪತ್ರೆ ಈಗ 790 ಹಾಸಿಗೆಗಳ ಸಾಮರ್ಥ್ಯ ಪಡೆದಿದೆ. ಸುಮಾರು 110 ಎಕರೆ ಪ್ರದೇಶದಲ್ಲಿ ಆಸ್ಪತ್ರೆ ಹಾಗೂ ವಸತಿ ಗೃಹಗಳ ನಿರ್ಮಾಣ ಮಾಡಲಾಗಿದೆ. ಆಸ್ಪತ್ರೆಯು ಎಕ್ಸರೇ, ಬ್ಲಡ್‌ಬ್ಯಾಂಕ್, ಫಾರ್ಮಸಿ, ವಿ.ವಿ.ದ್ರವ ತಯಾರಿಕಾ ಘಟಕ, ನರ್ಸಿಂಗ್ ಸೆಂಟರ್, ಮುಂತಾದ ಸೌಲಭ್ಯಗಳನ್ನು ಹೊಂದಿದೆ. ಎಂಡೋಸ್ಕೋಪಿಕ್, ಅಲ್ಟ್ರಾಸೌಂಡ್, ಡಯಾಲಸಿಸ್, ಪ್ಲಾಸ್ಟಿಕ್ ಸರ್ಜರಿ, ಆವರಾಲಜಿ ಹಾಗೂ ಥೊರಾಸಿಕ ಸರ್ಜರಿ ಮುಂತಾದ ಇನ್ನಿತರ ವಿಶೇಷ ಸೌಲಭ್ಯಗಳು ಈ ಆಸ್ಪತ್ರೆಯಲ್ಲಿ ಲಭ್ಯವಿದೆ. ತಜ್ಞ ವೈದ್ಯ ವೃಂದ, ಆಧುನಿಕ ಸಲಕರಣೆಗಳು ಪ್ರಯೋಗಾಲಯ ಮತ್ತು ತನ್ನದೇ ಆದ ಔಷಧಿ ಘಟಕ ಹೊಂದಿರುವ ಇದು ಎಲ್ಲ ಬಗೆಯ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದ್ದು ಪ್ರಥಮ ದರ್ಜೆಯ ಆಸ್ಪತ್ರೆಯಾಗಿ ರೂಪಗೊಂಡಿದೆ. 20 ಹಾಸಿಗೆಗಳ ಕುಷ್ಠ ರೋಗ ವಾರ್ಡುಗಳನ್ನು ಈ ಆಸ್ಪತ್ರೆ ಹೊಂದಿದೆ. ಕ್ಷಯ ರೋಗಿಗಳಿಗಾಗಿ 40 ಹಾಸಿಗೆಗಳಿವೆ. ಈ ವಿಭಾಗದಲ್ಲಿ 1981ರಲ್ಲಿ ಚಿಕಿತ್ಸೆ ಪಡೆದ ಒಳ ಮತ್ತು ಹೊರ ರೋಗಿಗಳ ಸಂಖ್ಯೆ 1,052 ಮತ್ತು 5,972 ಆಗಿತ್ತು ಮತ್ತು ಈ ಸಂಖ್ಯೆ 1980 ರಲ್ಲಿ ಅನುಕ್ರಮವಾಗಿ 1,075 ಮತ್ತು 6,984 ಇದ್ದಿತು.

1981ರಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಒಳ ಮತ್ತು ಹೊರ ರೋಗಿಗಳ ಸಂಖ್ಯೆ ಅನುಕ್ರಮವಾಗಿ 17,123 ಮತ್ತು 1,67,006 ಮತ್ತು 1980ರಲ್ಲಿ ಅದು 22,366 ಮತ್ತು 2,35,156 ಇದ್ದಿತು. 1990-91, 1991-92ರಲ್ಲಿ ಜನರು ಪಡೆದ ವಿವಿಧ ಸೇವೆಗಳ ಅಂಕಿ ಅಂಶಗಳು ಈ ಕೆಳಗಿನಂತಿವೆ.

| | 1990-91 | 1991-92 |
|---|---|---|
| 1. ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ | 3,20,675 | 3,28,501 |
| 2. ಚಿಕಿತ್ಸೆ ಪಡೆದ ಒಳರೋಗಿಗಳ ಸಂಖ್ಯೆ | 20,341 | ,21,139 |
| 3. ಪ್ರಸೂತಿಕಾ ಸೇವೆ ಪಡೆದವರ ಸಂಖ್ಯೆ | 2,862 | 2,897 |
| 4. ನಡೆಸಲ್ಪಟ್ಟ ಶಸ್ತ್ರ ಚಿಕಿತ್ಸೆಗಳು | 7,206 | 7,362 |
| 5. ಆಸ್ಪತ್ರೆಯಲ್ಲಿ ತೆಗೆದ ಕ್ಷ ಕಿರಣ ಚಿತ್ರ | 18,000 | 20,000 |
| 6. ಆಸ್ಪತ್ರೆಯಲ್ಲಿ ನಡೆಸಿದ ಸ್ಕ್ರೀನಿಂಗ್‌ಗಳು | 4,000 | 5,000 |
| 7. ಚಿಕಿತ್ಸೆ ಪಡೆಯುತ್ತಿರುವ ಕ್ಷಯ ರೋಗಿಗಳು | 2,824 | 3,757 |
| 8. ಚಿಕಿತ್ಸೆ ಪಡೆಯುತ್ತಿರುವ ಕುಷ್ಠ ರೋಗಿಗಳು | 863 | 802 |
| 9. ಕುಟುಂಬ ಯೋಜನೆಯಲ್ಲಿ ನಡೆಸಿದ ಶಸ್ತ್ರಚಿಕಿತ್ಸೆಗಳು | | |
| ಅ. ವೆಸೆಕ್ಟಮಿ | 7 | 1 |
| ಆ. ಟ್ಯೂಬೆಕ್ಟಮಿ | 693 | 729 |
| ಇ. ಉದರದರ್ಶಕ ಚಿಕಿತ್ಸೆ | 78 | 79 |
| 10. ಮಕ್ಕಳ ಹಾಗೂ ಸ್ತ್ರೀಯರ ಆರೋಗ್ಯ ಕಾರ್ಯಕ್ರಮಗಳು | | |
| 1. ಡಿಪಿಟಿ ಚುಚ್ಚುಮದ್ದು | 673 | 1091 |
| 2. ಡಿಟಿ ಚುಚ್ಚುಮದ್ದು | 204 | 741 |
| 3. ಟಿಟಿ ಚುಚ್ಚುಮದ್ದು | 1211 | 1795 |
| 4. ಪೋಲಿಯೋ ಲಸಿಕೆ ಪಡೆದವರ ಸಂಖ್ಯೆ | 673 | 1090 |

ಆಸ್ಪತ್ರೆಯಲ್ಲಿ ಅಧೀಕ್ಷಕರು, ವೈದ್ಯಾಧಿಕಾರಿಗಳು, ಶಸ್ತ್ರಚಿಕಿತ್ಸಕರು, ಚೀಫ್ ಫಾರ್ಮಾಸಿಸ್ಟ್‌ಗಳು ಸೇರಿದಂತೆ ಒಟ್ಟು 591 ಜನ ಸಿಬ್ಬಂದಿ ವರ್ಗವಿದೆ. ನಗರದ ಕುಷ್ಠ ರೋಗ ಕೇಂದ್ರವು ಈ ಆಸ್ಪತ್ರೆಗೆ ಹೊಂದಿಕೊಂಡಂತೆ ಹೊರ ರೋಗಿಗಳ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯವು ಎರಡೂ ವೈದ್ಯಕೀಯ ಪದವಿಪೂರ್ವ ಹಾಗೂ ಸ್ನಾತಕೋತ್ತರ ವೃತ್ತಿ ತರಬೇತಿಗಳನ್ನು ನೀಡುತ್ತಿದ್ದು, ಮಹಾ ವಿದ್ಯಾಲಯವು 1960ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಅಫಿಲಿಯೇಷನ್‌ಗೆ ಒಳಪಟ್ಟಿದೆ. 1) ವೈದ್ಯಕೀಯ ಶಾಸ್ತ್ರ, 2) ಶಸ್ತ್ರ ಚಿಕಿತ್ಸೆ, 3) ಸ್ತ್ರೀರೋಗ ಹಾಗೂ ಪ್ರಸೂತಿ ಪೂರ್ವ ಚಿಕಿತ್ಸೆ, 4) ಚಿಕ್ಕಮಕ್ಕಳ ರೋಗ ಶಾಸ್ತ್ರ, 5) ಆಸ್ಥಿಗಳ ಚಿಕಿತ್ಸೆ ಶಾಸ್ತ್ರ, 6) ಕಿವಿ, ಮೂಗು, ಗಂಟಲು ಚಿಕಿತ್ಸಾ ಶಾಸ್ತ್ರ, 7) ನೇತ್ರಾ ಚಿಕಿತ್ಸಾ ಶಾಸ್ತ್ರ, 8) ಕ್ಷ ಕಿರಣ ವಿಭಾಗ, 9) ಚರ್ಮ ರೋಗ ಹಾಗೂ ಲೈಂಗಿಕ ರೋಗ ಶಾಸ್ತ್ರ, 10) ರೋಗ ಲಕ್ಷಣ ಶಾಸ್ತ್ರ, 11) ಅಣು ಜೀವಿ ಶಾಸ್ತ್ರ, 12) ರೋಗ ನಿರೋಧಕ ಹಾಗೂ ಸಾಮಾಜಿಕ ವೈದ್ಯಕೀಯ ಶಾಸ್ತ್ರ, 13) ಅಂಗ ರಚನೆ ಶಾಸ್ತ್ರ, 14) ಶರೀರ ಕ್ರಿಯಾ ಶಾಸ್ತ್ರ, 15) ಜೀವ ರಸಾಯನ ಶಾಸ್ತ್ರ, 16) ನ್ಯಾಯ ವೈದ್ಯ ಶಾಸ್ತ್ರ, 17) ಅರಿವಳಿಕೆ ಸಾಸ್ತ್ರ, 18) ದಂತ ವೈದ್ಯ, 19) ಕ್ಷಯ ರೋಗ ಶಾಸ್ತ್ರ, 20) ಹೃದಯ ಮತ್ತು ಪುಪ್ಪುಸ ಚಿಕಿತ್ಸಾ ಶಾಸ್ತ್ರ, 21) ಸುರುಪಿಕಾ ಚಿಕಿತ್ಸಾ ಶಾಸ್ತ್ರ (ಪ್ಲಾಸ್ಟಿಕ್ ಸರ್ಜರಿ), 22) ಔಷಧಿ ಶಾಸ್ತ್ರ ಇವೇ ಮುಂತಾದವುಗಳಲ್ಲಿ ಸ್ನಾತಕೋತ್ತರ ವೃತ್ತಿ ತರಬೇತಿ ನೀಡಲಾಗುವುದು. ಪ್ರತೀವರ್ಷ ವೈದ್ಯಕೀಯ ಪದವಿಗೆ 130 ವಿದ್ಯಾರ್ಥಿಗಳು. ಸ್ನಾತಕೋತ್ತರ ವ್ಯಾಸಾಂಗಕ್ಕೆ 150 ವಿದ್ಯಾರ್ಥಿಗಳಿಗೆ ಪ್ರವೇಶ ದೊರಕಿಸಿ ಕೊಡಲಾಗುವುದು. ಆಸ್ಪತ್ರೆಯು ತನ್ನದೇ ಆದ ಕೇಂದ್ರ ಗ್ರಂಥ ಭಂಡಾರ ಹೊಂದಿದ್ದು, 15,968 ವೈದ್ಯಕೀಯ ಗ್ರಂಥಗಳನ್ನೊಳಗೊಂಡಿದೆ. ಸುಮಾರು 200 ವಿದ್ಯಾರ್ಥಿಗಳಿಗೆ ಗ್ರಂಥಾಲಯದಲ್ಲಿ ಕುಳಿತು ಏಕಕಾಲದಲ್ಲಿ ಅಭ್ಯಸಿಸಲು ಅವಕಾಶವಿದೆ.

**ಕರ್ನಾಟಕ ಮಾನಸಿಕ ಆರೋಗ್ಯ ಸಂಸ್ಥೆ**

ಕರ್ನಾಟಕ ಮಾನಸಿಕ ಆರೋಗ್ಯ ಸಂಸ್ಥೆಯು 1845ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಇದರ ಹೆಸರು 'ಲುನ್ಯಾಟಿಕ್ ಅಸೈಲಂ' ಎಂದು ಇತ್ತು. ಬ್ರಿಟಿಷ್ ಸರ್ಕಾರವು ಮಾನಸಿಕ ರೋಗಿಗಳ ಉಪದ್ರವ ತಪ್ಪಿಸಲು ಅವರನ್ನು ಒಂದು ಕಡೆ ಕೂಡಿ ಹಾಕಿ ಆಹಾರ ಕೊಟ್ಟು ಚಿಕಿತ್ಸೆ ನೀಡಿ ದುಡಿಸಿಕೊಳ್ಳುತ್ತಿತ್ತು. ಮುಂದೆ 1943ರ ಸುಮಾರಿನಲ್ಲಿ ಇದನ್ನು ಮಾನಸಿಕ ಆಸ್ಪತ್ರೆ ಎಂದು ಕರೆಯಲಾಯಿತು. 1960ರವರೆಗೆ ಈ ಆಸ್ಪತ್ರೆಯು ಜಿಲ್ಲಾ ಸಿವಿಲ್ ಸರ್ಜನರ ಮೇಲ್ವಿಚಾರಣೆಗೆ ಒಳಪಟ್ಟಿತ್ತು. 1960ರಲ್ಲಿ ಪ್ರಥಮವಾಗಿ ಮಾನಸಿಕ ರೋಗ ತಜ್ಞರನ್ನು ಆಸ್ಪತ್ರೆಯ ಮುಖ್ಯಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಆ ವೇಳೆಗೆ ಮಾನಸಿಕ ರೋಗಿಗಳಿಗೆ ಕೆಲವು ನಿರ್ದಿಷ್ಟ ಔಷಧಿಗಳು ಲಭ್ಯವಾದ್ದರಿಂದ ರೋಗಿಗಳು ಚಿಕಿತ್ಸೆ ಪಡೆದು ಗುಣಮುಖರಾಗತೊಡಗಿದರು. ನಂತರದಲ್ಲಿ ಈ ಆಸ್ಪತ್ರೆ ತನ್ನದೇ ಆದ ವೈದ್ಯಕೀಯ ಸಿಬ್ಬಂದಿ, ತಜ್ಞರ ತಂಡ ಹಾಗೂ ಇತರ ಚಿಕಿತ್ಸಾ ಅನುಕೂಲತೆಗಳನ್ನು ಪಡೆದು ಕೊಂಡಿತು. ಪ್ರಸ್ತುತ ಮಾನಸಿಕ ರೋಗ ತಜ್ಞರು ಆಸ್ಪತ್ರೆಯ ಮುಖ್ಯಾಧಿಕಾರಿಗಳಾಗಿರುತ್ತಾರೆ. 1978ರಿಂದ ಈಚೆಗೆ ಆಸ್ಪತ್ರೆಯು ಬೋಧನಾ ಆಸ್ಪತ್ರೆಯಾಗಿ ಮಾರ್ಪಾಡಾದದ್ದು ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮತ್ತು ದಾದಿಯರಿಗೆ ಮಾನಸಿಕ ರೋಗಗಳ ವಿಷಯದಲ್ಲಿ ತರಬೇತಿ ನೀಡುತ್ತಿದೆ. 1992ರಲ್ಲಿ ಈ ಆಸ್ಪತ್ರೆಯನ್ನು 'ಕರ್ನಾಟಕ ಮಾನಸಿಕ ಆರೋಗ್ಯ ಸಂಸ್ಥೆ' ಎಂದು ಸರ್ಕಾರ ಪುನರ್ ನಾಮಕರಣ ಮಾಡಿದೆ. ಈಗ ಈ ಸಂಸ್ಥೆಯು ಬೋಧನೆಯ ಜೊತೆಗೆ ಸಂಶೋಧನಾ ಕಾರ್ಯವನ್ನು ಹಮ್ಮಿಕ್ಕೊಂಡಿರುವುದು.

ಆಸ್ಪತ್ರೆಯ ಸಂಕೀರ್ಣವು ಸುಮಾರು 13 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದ್ದು ತನ್ನದೇ ಆದ ಹೊರ ರೋಗಿಗಳ ವಿಭಾಗ, 20 ಹಾಸಿಗೆಗಳ ಓಪನ್ ವಾರ್ಡ್ ಪ್ರಯೋಗಾಲಯಗಳನ್ನು ಹೊಂದಿದೆ. 375 ಹಾಸಿಗೆಗಳ ಸಾಮರ್ಥ್ಯದಲ್ಲಿ ಸಂಸ್ಥೆಯಲ್ಲಿ ಎಕ್ಸರೇ ಬ್ಲಡ್ ಬ್ಯಾಂಕ್ ಸೌಲಭ್ಯಗಳು ಲಬ್ಯವಿದ್ದು ನೇತ್ರ ಚಿಕಿತ್ಸೆ, ಹೃದಯ ತಜ್ಞರ ವಿಶೇಷ ಸೌಕರ್ಯಗಳನ್ನು ಸಹ ಹೊಂದಿದೆ. ವೈದ್ಯಕೀಯ ಅಧೀಕ್ಷಕರು, ಮೂವರು ಮಾನಸಿಕ ರೋಗ ತಜ್ಞರು, ಒಬ್ಬರು ಫಿಜೀಸಿಯನ್, ಇಬ್ಬರು ಸಾಮಾನ್ಯ ವೈದ್ಯರು, ಮೂವರು ಮನಶ್ಶಾಸ್ತ್ರಜ್ಞರು ಹಾಗೂ ಇನ್ನಿತರ 136 ಜನ ಇತರ ಆಸ್ಪತ್ರೆ ಸಿಬ್ಬಂದಿ ಇದೆ. 1990-91ರಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳು 3,274 (ಹೊಸ ರೋಗಿಗಳು), 27,312 (ಹಳೆಯ ರೋಗಿಗಳು) ಹಾಗೂ ಚಿಕಿತ್ಸೆ ಪಡೆದ ಒಳರೋಗಿಗಳ ಸಂಖ್ಯೆ 4,748. ಹಾಗೂ 1993-94ರಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳು 3,542 (ಹೊಸ ರೋಗಿಗಳು), 36,000 (ಹಳೆ ರೋಗಿಗಳು) ಆಗಿದ್ದು ಪ್ರತಿದಿನ ಸರಾಸರಿ 108 ಜನ ಚಿಕಿತ್ಸೆ ಪಡೆಯುತ್ತಿರುವರು.

**ಕ್ಯಾನ್ಸರ್ ಆಸ್ಪತ್ರೆ**

ಉತ್ತರ ಕರ್ನಾಟಕದಲ್ಲಿ ಇದ್ದ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯಗಳ ಕೊರತೆ ನೀಗಿಸುವ ದಿಶೆಯಲ್ಲಿ ಡಾ: ಬಿ.ಆರ್. ಪಾಟೀಲರಂಥ ಮೇಧಾವಿ ವೈದ್ಯರ ಪ್ರಯತ್ನದ ಫಲವಾಗಿ 'ಕರ್ನಾಟಕ ಕ್ಯಾನ್ಸರ ಥೆರಪಿ ಮತ್ತು ಪರಿಶೋಧನಾ ಸಂಸ್ಥೆ' ಹುಬ್ಬಳ್ಳಿಯ ನವನಗರದಲ್ಲಿ ಸ್ಥಾಪನೆಗೊಂಡಿತು. ಭಾರತದಲ್ಲಿಯ ಒಂಭತ್ತು ಪ್ರಾದೇಶಿಕ ಸಂಸ್ಥೆಗಳ ಪೈಕಿ ಈ ಸಂಸ್ಥೆಯು ಒಂದಾಗಿದ್ದು 1980ರಲ್ಲಿ ಸ್ವಾಯತ್ತ ಸಂಸ್ಥೆ ಆಗಿ ಪರಿವರ್ತನೆ ಆಯಿತು. ಹುಬ್ಬಳ್ಳಿ ಮಹಾನಗರ ಸಭೆಯು 5 ಲಕ್ಷ ರೂ ದೇಣಿಗೆಯೊಂದಿಗೆ 10 ಎಕರೆ ಜಮೀನು ನೀಡಿತು. 1977ರಲ್ಲಿ ಆಸ್ಪತ್ರೆ ಕಟ್ಟಡ ಪೂರ್ಣಗೊಂಡಿತು.

ಕ್ಯಾನ್ಸರ್ ರೋಗ ಚಿಕಿತ್ಸೆ ಸಂಶೋಧನೆ ಹಾಗೂ ರೋಗ ತಡೆಗಟ್ಟುವಲ್ಲಿ ಜನರಿಗೆ ತಿಳುವಳಿಕೆ ನೀಡುವುದು, ಸೊಸೈಟಿಯ ಗುರಿ ಆಗಿದೆ. ಈಗ ಹಾಸಿಗೆಗಳ ಸಂಖ್ಯೆಯನ್ನು 150ಕ್ಕೆ ಹೆಚ್ಚಿಸಲಾಗಿದೆ. ವಿವಿಧ ಚಿಕಿತ್ಸೆ ಉಪಕರಣಗಳ ಖರೀಧಿ ಹಾಗೂ ಸ್ಥಾಪನೆಯೊಂದಿಗೆ ಆಸ್ಪತ್ರೆ ಆಧುನೀಕರಣ ಕಾರ್ಯಕ್ಕೆಗೊಳ್ಳಲಾಯಿತು. ಪ್ರಾರಂಭದ ವರ್ಷದಲ್ಲಿ 1,060 ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, 15,816 ಜನರಿಗೆ ಚಿಕಿತ್ಸಾ ನಂತರದ ಸೇವೆ ಸಲ್ಲಿಸಲಾಗುತ್ತಿದೆ. ಅತ್ಯಾಧುನಿಕ ಉಪಕರಣಗಳಿಂದ ಸುಸಜ್ಜಿತವಾದ ಈ ಆಸ್ಪತ್ರೆಯಲ್ಲಿ ಪ್ರಸಕ್ತ 110 ಒಳರೋಗಿಗಳು ಇದ್ದು, ಒಳರೋಗಿಗಳಿಗಾಗಿ 15 ಹಾಸಿಗೆಗಳ ಉಚಿತ ಚಿಕಿತ್ಸಾ ವಿಭಾಗವನ್ನು ಸಹ ಇದು ಹೊಂದಿದೆ.

**ಸಹಕಾರಿ ಆಸ್ಪತ್ರೆ ಹುಬ್ಬಳ್ಳಿ**

ಮೊದಲು 'ಭವಾನಿ ಹಾಸ್ಪಿಟಲ್' ಎಂಬ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿದ ಸಹಕಾರಿ ಆಸ್ಪತ್ರೆಗೆ ಸ್ಥಳದ ಅಭಾವ ಉಂಟಾದಾಗ ಖುರ್ಷಿದಾಬಾಯಿ ಜಗಮನ್‌ವಾಲಾ ಎನ್ನುವ ಪಾರ್ಸಿ ಮಹಿಳೆಯು ಈಗಿರುವ ಆಸ್ಪತ್ರೆಯ ವಿಶಾಲ ಜಾಗವನ್ನು ದಾನವಾಗಿ ಕೊಟ್ಟರು. 1924ರಲ್ಲಿ ಕಟ್ಟಡ ಪೂರ್ಣಗೊಂಡು ಆಸ್ಪತ್ರೆ ತನ್ನದೇ ಆದ ಹೊಸ ಕಟ್ಟಡದಲ್ಲಿ ಕಾರ್ಯ ಮುಂದುವರಿಸಿತು. ಪ್ರಾರಂಭದಲ್ಲಿ ಕೇವಲ 36 ಹಾಸಿಗೆಗಳ ಅವಕಾಶ ಹೊಂದಿದ ಈ ಆಸ್ಪತ್ರೆ ಪ್ರಸ್ತುತ 150 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದೆ. ಆಸ್ಪತ್ರೆ ಪ್ರತ್ಯೇಕ ಪ್ರಸವ ವಿಭಾಗವನ್ನು ಹೊಂದಿದೆ. ಹೊರರೋಗಿಗಳಿಗೆ ಪ್ರತ್ಯೇಕ ವಿಭಾಗ ರಚನೆಗೊಂಡಿದೆ. ಪ್ರತೀಯೊಂದು ಕಾಯಿಲೆಗಳಿಗೆ ಇಲ್ಲಿ ಚಿಕಿತ್ಸೆ ನಡೆಸಲಾಗುತ್ತಿದೆ. ಶುದ್ಧ ಭಾರತೀಯ ಆಯುರ್ವೇದ ಚಿಕಿತ್ಸಾ ವಿಧಾನವನ್ನು ಇಲ್ಲಿ ಬಳಸಲಾಗುತ್ತಿದೆ. ಎಕ್ಸರೇ ಸೌಲಭ್ಯ, ಸುಸಜ್ಜಿತ ಶಸ್ತ್ರಚಿಕಿತ್ಸಾ ವಿಭಾಗವಿದ್ದು ಹೃದಯ ಬೇನೆ, ಕಣ್ಣು, ಕಿವಿ, ಮೂಗು, ಗಂಟಲು, ಕೀಲು ಬೇನೆ ಮುಂತಾದವುಗಳಿಗೆ ಇಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳನ್ನು ಹೊಂದಿರುವ ಈ ಆಸ್ಪತ್ರೆಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ 1980 ರಿಂದ 'ಇಂಟರ್ನ್‌ಶಿಪ್'ಗೆ ಅವಕಾಶವಿದೆ. ಆಸ್ಪತ್ರೆಯಲ್ಲಿ ಒಬ್ಬ ತಜ್ಞ ವೈದ್ಯರು ಹಾಗೂ ಒಬ್ಬ ಮಹಿಳಾ ವೈದ್ಯರೂ ಮತ್ತು 5 ಜನ ಆಯುರ್ವೇದ ಪದವಿ ಪಡೆದ ವೈದ್ಯರು ಇದ್ದಾರೆ. 1987ರಲ್ಲಿ ಹೊರ ರೋಗಿಗಳ ಸಂಖ್ಯೆ 7,061 ಆಗಿದ್ದು, ಒಳರೋಗಿಗಳ ಸಂಖ್ಯೆ 3,632 ಇತ್ತು.

**ಚಿಟಗುಪ್ಪಿ ಆಸ್ಪತ್ರೆ**

ರಾವಬಹದೂರ ಶ್ರೀನಿವಾಸರಾವ ಬಾಲಾಜಿ ಚಿಟಗುಪ್ಪಿಯವರು ದಾನನೀಡಿದ ಸ್ಥಳದಲ್ಲಿ ಪುರಸಭೆಯ ಔಷಧಾಲಯವಾಗಿ, ಮುಂದೆ 1936ರಲ್ಲಿ ಇದು ಆಸ್ಪತ್ರೆಯಾಗಿ ಮಾರ್ಪಾಟ್ಟಿತು. 1961ರಲ್ಲಿ ಕಾರ್ಪೋರೇಶನ್‌ಗೆ ಹಸ್ತಾಂತರಗೊಂಡಿತು. ಒಳರೋಗಿಗಳ ವಿಭಾಗ, ಹೊರ ರೋಗಿಗಳ ವಿಭಾಗ, ಪ್ರಸೂತಿ ಗೃಹ, ಕ್ಷ ಕಿರಣ ವಿಭಾಗ, ಪ್ರಯೋಗಾಲಯ ಮುಂತಾದ ಸೌಲಭ್ಯಗಳನ್ನು ಪಡೆಯಿತು. ಪ್ರಸ್ತುತ ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ 86 ಆಗಿದೆ. ಸರ್ಜನರು, ಆಸ್ಪತ್ರೆಯ ಮುಖ್ಯ ವೈದ್ಯರು, ಅವರ ಅಧೀನದಲ್ಲಿ 7 ಜನ ವೈದ್ಯರು, ಒಬ್ಬರು ಹೃದಯ ತಜ್ಞರು, 3 ಜನ ಸ್ಟಾಫ್ ನರ್ಸ್‌ಗಳು 10 ಜನ ಸೂಲಗಿತ್ತಿಯರು (ಎ ಎನ್ ಎಂ) ಪ್ರಯೋಗಾಲಯ ಹಾಗೂ ಕ್ಷ ಕಿರಣ ತಂತ್ರಜ್ಞರು ಹಾಗೂ ಇತರ ಕಛೇರಿ ಸಿಬ್ಬಂದಿ ಇದೆ.

ಆಸ್ಪತ್ರೆಗೆ ಹೊಂದಿಕೊಂಡಂತೆ ಬಾಣಂತಿ ಸೇವಾ ಕೇಂದ್ರ (ಪಿ.ಪಿ.ಸಿ.) ಹಾಗೂ ಕುಟುಂಬ ಕಲ್ಯಾಣ ಕೇಂದ್ರಗಳು ಇವೆ. ಕುಟುಂಬ ಯೋಜನೆ ಕಾರ್ಯಕ್ರಮದಡಿಯಲ್ಲಿ ಆಸ್ಪತ್ರೆಯು 1992-93 ಹಾಗೂ 1993-94ರಲ್ಲಿ ಕ್ರಮವಾಗಿ 1/2 ವ್ಯಾಸೆಕ್ಟೆಮಿ ಶಸ್ತ್ರ ಚಿಕಿತ್ಸೆಗಳನ್ನು 860/1990 ಟ್ಯೂಬೆಕ್ಟಮಿ ಶಸ್ತ್ರ ಚಿಕಿತ್ಸೆ ಹಾಗೂ 185/224 ವಂಕಿಧಾರಣೆಗಳನ್ನು ಮಂಡಿಸಿದೆ. ತಾಯಂದಿರ ಮತ್ತು ಮಕ್ಕಳ ಆರೋಗ್ಯ

ತಜ್ಞರು ಇಬ್ಬರು ಮಕ್ಕಳ ರೋಗ ತಜ್ಞರು, ಒಬ್ಬರು ಪ್ರಸವ ತಜ್ಞರು ಮತ್ತು ಮೂವರು ಸಾಮಾನ್ಯ ವೈದ್ಯರು ಹೀಗೆ ಆಸ್ಪತ್ರೆಯು ಗೌರವ ವೈದ್ಯ ವೃಂದದ ಸೇವೆಯನ್ನು ನೀಡುತ್ತಿದೆ.

1992ರಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ 22,874 ಆಗಿದೆ. ಅದರಂತೆ 1993 ಹಾಗೂ 1984 ಈ ಸಾಲಿನಲ್ಲಿ ಚಿಕಿತ್ಸೆ ಪಡೆದ ಹೊರ ಹಾಗೂ ಒಳರೋಗಿಗಳ ಸಂಖ್ಯೆಗಳು ಕ್ರಮವಾಗಿ 27,604 ಮತ್ತು 5,046 ಹಾಗೂ 20,205 ಮತ್ತು 4,579 ಆಗಿರುತ್ತದೆ. 1992 ಹಾಗೂ 1993ರಲ್ಲಿ ಪ್ರಸೂತಿಕಾ ಚಿಕಿತ್ಸೆ ಪಡೆದವರ ಚಿಕಿತ್ಸೆ ಕ್ರಮವಾಗಿ 412 ಹಾಗೂ 363 ಆಗಿರುತ್ತದೆ. ಇದೇ ಅವಧಿಯಲ್ಲಿ (1993) ನಡೆಸಲ್ಪಟ್ಟ ಶಸ್ತ್ರ ಚಿಕಿತ್ಸೆಗಳ ಮುಖ್ಯ (ಮೇಜರ್) 406 ಹಾಗೂ ಸಣ್ಣ (ಮೈನರ್) 436 ಆಗಿವೆ. 1992 ಮತ್ತು 1993ರಲ್ಲಿ ತೆಗೆದ ಎಕ್ಸರೆಗಳು 2,634 ಮತ್ತು 2,009 ಆಗಿದ್ದು ಇದೇ ಅವಧಿಯಲ್ಲಿ ಚಿಕಿತ್ಸೆ ಪಡೆದ ಕ್ಷಯ ರೋಗಿಗಳ ಸಂಖ್ಯೆ 213 ಮತ್ತು 222 ಆಗಿರುತ್ತಾರೆ. ಲಸಿಕಾ ಕಾರ್ಯಕ್ರಮದಡಿಯಲ್ಲಿ 1993ರಲ್ಲಿ ಆಸ್ಪತ್ರೆ ನೀಡಿದ ರೋಗ ನಿರೋಧಕ ಲಸಿಕೆಗಳ ಕ್ರಮವಾಗಿ ಡಿಪಿಟಿ 585; ಟಿಟಿ 948; ಬಿಸಿಜಿ 245; ದಡಾರ 138 ಆಗಿರುತ್ತದೆ. ಸ್ವಾಭಾವಿಕ ಮಿತ ಸಂತಾನದ ವಿಧಾನಗಳನ್ನು ಜನರಿಗೆ ಆಸ್ಪತ್ರೆ ಸಿಬ್ಬಂದಿ ತಿಳಿಯಪಡಿಸುವುದಲ್ಲದೆ ವಿಧಾನಗಳನ್ನು ಪ್ರೋತ್ಸಾಹಿಸುತ್ತಿದೆ. ಧಾರವಾಡದ ಈ ಮಿಶನ್ ಆಸ್ಪತ್ರೆ ಜಿಲ್ಲೆಯಲ್ಲಿ 'ಜರ್ಮನ ಆಸ್ಪತ್ರೆ' ಹೆಸರಿನಿಂದ ಜನಪ್ರಿಯತೆಯನ್ನು ಪಡೆದಿದೆ.

**ರೇಲ್ವೆ ಆಸ್ಪತ್ರೆ**

ರೇಲ್ವೆ ಆಸ್ಪತ್ರೆ (ದಕ್ಷಿಣ ಮಧ್ಯ ರೇಲ್ವೆ) ಹುಬ್ಬಳ್ಳಿಯಲ್ಲಿ ಪ್ರಾರಂಭಗೊಂಡಿದ್ದು 1962ರಲ್ಲಿ ಈ ಆಸ್ಪತ್ರೆಯು ಹೊಸ ಕಟ್ಟಡ ಸಂಕೀರ್ಣಕ್ಕೆ ವರ್ಗಾಯಿಸಲ್ಪಟ್ಟಿತು. ಪ್ರಾರಂಭದಲ್ಲಿ 49 ಹಾಸಿಗೆಗ ' ಈ ಆಸ್ಪತ್ರೆ ಪ್ರಸ್ತುತ 174 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು ಮಹಿಳಾ ವಾರ್ಡ್, ಸರ್ಜಿಕಲ್ ವಾರ್ಡ್, ಮಕ್ಕಳ ವಿಭಾಗ, ಜನರಲ್ ವಾರ್ಡ್, ಐಸೋಲೇಸನ್ ವಾರ್ಡ್, ಕ್ಷಯರೋಗ ವಿಭಾಗ, ತುರ್ತು ಚಿಕಿತ್ಸಾ ವಿಭಾಗ, ಕ್ಷ ಕಿರಣ ಘಟಕ ಹಾಗೂ ಪ್ರಯೋಗಾಲಯಗಳನ್ನು ಹೊಂದಿದೆ. ಹಿರಿಯ ವೈದ್ಯಕೀಯ ಅಧೀಕ್ಷಕರು ಆಸ್ಪತ್ರೆಯ ಮುಖ್ಯಸ್ಥರಿದ್ದು ಇವರು ಹುಬ್ಬಳ್ಳಿ ರೇಲ್ವೆ ವಿಭಾಗದ ಮುಖ್ಯಾಧಿಕಾರಿಗಳು ಸಹ ಆಗಿದ್ದಾರೆ. ಎಕ್ಸರೇ ಸ್ಕ್ರೀನಿಂಗ್, ಇಸಿಜಿ, ಇಇಜಿ, ಯು ಎಸ್ ಜಿ, ಟ್ರೆಡ್‌ಮೀಲ್ ಸೌಲಭ್ಯಗಳು ಆಸ್ಪತ್ರೆಯಲ್ಲಿ ದೊರೆಯುತ್ತವೆ. ಹೃದಯ ಚಿಕಿತ್ಸೆ, ಕಣ್ಣು ಚಿಕಿತ್ಸೆ, ಕಣ್ಣು ಕಿವಿ ಗಂಟಲು ಚಿಕಿತ್ಸೆ, ಸ್ತ್ರೀರೋಗ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ಮಕ್ಕಳ ರೋಗ ಚಿಕಿತ್ಸೆ ಮುಂತಾದ ವಿಶೇಷ ಚಿಕಿತ್ಸಾ ಸೌಲಭ್ಯಗಳು ಇವೆ.

1992-93 ಹಾಗೂ 1993-94ರಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ ಕ್ರಮವಾಗಿ 2,13,448 ಮತ್ತು 4,12,871; ಚಿಕಿತ್ಸೆ ಪಡೆದ ಒಳರೋಗಿಗಳು 4,519 ಮತ್ತು 4,460; ಪ್ರಸೂತಿಕಾ ಚಿಕಿತ್ಸೆಗಳು 319 ಮತ್ತು 282; ನಡೆಸಿದ ಶಸ್ತ್ರ ಚಿಕಿತ್ಸೆಗಳು 1,671 ಮತ್ತು 749; ತೆಗೆದ ಎಕ್ಸರೇಗಳು 10,274 ಮತ್ತು 10,373; ಚಿಕಿತ್ಸೆ ನೀಡಿದ ಕ್ಷಯರೋಗಿಗಳ ಸಂಖ್ಯೆ 572 ಮತ್ತು 176; ಕುಷ್ಠರೋಗಿಗಳು 5 ಮತ್ತು 4 ಆಗಿರುತ್ತದೆ. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1991-92, 1992-93, 1993-94 ವ್ಯಾಸಕ್ಟಮಿ ಶಸ್ತ್ರ ಚಿಕಿತ್ಸೆಗಳು 36, 27 ಮತ್ತು 26, ಟ್ಯೂಬೆಕ್ಟಮಿಗಳು 395, 329 ಮತ್ತು 277; ಹಾಗೂ ವಂಕಿಧಾರಣೆ ಪ್ರಕರಣಗಳು 170, 160 ಮತ್ತು 148. ತಾಯಂದಿರ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ, ಮೇಲಿನ ಅವಧಿಯಲ್ಲಿ ಸಾಧಿಸಿದ ಪ್ರಗತಿ ಡಿಪಿಟಿ 3,365, 2,716 ಮತ್ತ 1,278; ಡಿಟಿ 1,108, 1,003 ಮತ್ತು 643; ಟಿಟಿ ತಾಯಂದಿರಿಗೆ 1,802, 1,422 ಮತ್ತು 855; ಟಿಟಿ ಮಕ್ಕಳಿಗೆ 1,515, 3,565 ಮತ್ತು 2,416; ಪೋಲಿಯೋ 3,308, 2,716 ಮತ್ತು 691; 681, 526 ಮತ್ತು 1,278 ಆಗಿರುತ್ತದೆ.

**ವಿವೇಕಾನಂದ ಜನರಲ್ ಆಸ್ಪತ್ರೆ**

ವಿವೇಕಾನಮದ ಜನರಲ್ ಆಸ್ಪತ್ರೆಯ 1920ರಲ್ಲಿ ಹೆಣ್ಣು ಮಕ್ಕಳ ದವಾಖಾನೆಯೆಂದು ಇಂಡಿಯನ್ ವಿಮೆನ್ಸ್ ಏಡ್ಸ್ ಸೊಸೈಟಿಯವರಿಂದ ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿ ಸ್ಥಾಪಿಸಲ್ಪಟ್ಟಿತು. 1982 ರಲ್ಲಿ ಈಗಿರುವಂತೆ ವಿವೇಕಾನಂದ ಜನರಲ್ ಆಸ್ಪತ್ರೆ ಎಂದು ನಾಮಕರಣಗೊಂಡಿತು. 68 ಹಾಸಿಗೆಗಳ ಸಾಮರ್ಥ್ಯ ಪಡೆದ ಈ ಆಸ್ಪತ್ರೆ ಸರ್ಜರಿ, ಡಯಾಬಿಟಿಸ್, ತುರ್ತು ಚಿಕಿತ್ಸೆ ಯಂಥ ವಿಶೇಷ ಸೌಲಭ್ಯಗಳನ್ನು ಹೊಂದಿದೆಯಲ್ಲದೆ, ಸರ್ಜರಿ, ಮೆಡಿಸಿನ್, ಇನ್‌ಕ್ಯೂಬೇಟರ್ಸ್, ಎಕ್ಸರೇ, ಡಯಲಿಸಿಸ್, ಇ ಇ

ಜಿ, ಪ್ರಯೋಗಾಲಯ, ಬ್ಲಡ್ ಬ್ಯಾಂಕ್ ಮುಂತಾದ ಸವಲತ್ತುಗಳನ್ನು ಸಹ ಹೊಂದಿದೆ. ಗೌರವ ಮುಖ್ಯ ವೈದ್ಯಾಧಿಕಾರಿಗಳು ಮಹಿಳಾ ವೈದ್ಯಾಧಿಕಾರಿಗಳು ಹಾಗೂ ಸಹಾಯ ವೈದ್ಯಾಧಿಕಾರಿಗಳಲ್ಲದೆ ಇತರ ಸಹಾಯಕ ಸಿಬ್ಬಂದಿ ಇದೆ. 1992-93, 1993-94ನೇ ಸಾಲಿನಲ್ಲಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದವರ ಸಂಖ್ಯೆ ಕ್ರಮವಾಗಿ 7,569 ಹಾಗೂ 8,062; ಒಳರೋಗಿಗಳ ಸಂಖ್ಯೆ 1,845 ಹಾಗೂ 1,915; ಪ್ರಸೂತಿ ಚಿಕಿತ್ಸೆಗಳು 104 ಮತ್ತು 120; ನಡೆಸಲ್ಪಟ್ಟ ಶಸ್ತ್ರ ಚಿಕಿತ್ಸೆಗಳು 737 ಮತ್ತು 800; ತೆಗೆದ ಎಕ್ಸರೇಗಳು ಹಾಗೂ ಸ್ಕ್ರೀನಿಂಗ್‌ಗಳು 201 ಮತ್ತು 292; ಕುಟುಂಬ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ 1993-94ರಲ್ಲಿ ಟ್ಯೂಬೆಕ್ಟಮಿ ಶಸ್ತ್ರ ಚಿಕಿತ್ಸೆಗಳು 6 ಹಾಗೂ ವಂಕಿಧಾರಣೆಗಳು 12.

### ಎಮ್.ಜಿ.ಎಮ್.ಕ್ಷಯ ಮತ್ತು ಎದೆರೋಗ ಆಸ್ಪತ್ರೆ, ಗದಗ

ಮಹಾತ್ಮಾಗಾಂಧಿ ಸ್ಮಾರಕ ಕ್ಷಯ ಮತ್ತು ಎದೆರೋಗ ಆಸ್ಪತ್ರೆ ಮಲಸಮುದ್ರ, ಗದಗ 1959ರಲ್ಲಿ ಖಾಸಗಿ ಸಂಸ್ಥೆ ಆಗಿ ಸ್ಥಾಪನೆಯಾಯಿತು; ನಂತರ 1967ರಲ್ಲಿ ಸರ್ಕಾರವು ಆಸ್ಪತ್ರೆಯ ಆಡಳಿತವನ್ನು ವಹಿಸಿಕೊಂಡು, ಆಸ್ಪತ್ರೆಯ ಹಾಸಗೆಗಳ ಸಾಮರ್ಥ್ಯವನ್ನು 22 ರಿಂದ 62ಕ್ಕೆ ಹೆಚ್ಚಿಸಿತು. ಆಸ್ಪತ್ರೆಗೆ ಸ್ವಂತ ಕಟ್ಟಡವಿದ್ದು 53 ಎಕರೆಯ ನಿವೇಶನವಿದೆ. ಗದುಗಿನಿಂದ 5 ಕಿ.ಮೀ ದೂರದಲ್ಲಿಯ ಈ ಆಸ್ಪತ್ರೆ ಧಾರವಾಡ ಜಿಲ್ಲೆಯಷ್ಟೇ ಅಲ್ಲದೆ, ರಾಯಚೂರು ಬಳ್ಳಾರಿ, ವಿಜಾಪುರ ಜಿಲ್ಲೆಯ ಜನರಿಗೂ ಚಿಕಿತ್ಸೆ ಸೌಲಭ್ಯ ದೊರಕಿಸಿಕೊಡುತ್ತಿದೆ. ಕ್ಷಯ ರೋಗಿಗಳಿಗೆ ಇದು ಒಂದು ಮಾದರಿ ಆಸ್ಪತ್ರೆ ಎನಿಸಿದೆ. ಕ್ಷಯ ರೋಗ ತಜ್ಞರು, ಶಸ್ತ್ರ ಚಿಕಿತ್ಸಕರು, ನೇತ್ರ ತಜ್ಞರು ಮತ್ತು ಚಿಕ್ಕಮಕ್ಕಳ ತಜ್ಞರು ಈ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವರು. 1990-92ರವರೆಗಿನ ಚಿಕಿತ್ಸೆ ಪಡೆದ ಕ್ಷಯ ರೋಗಿಗಳ ಸಂಖ್ಯೆ 2,593 ಆಗಿದೆ. ಇದೇ ಅವಧಿಗೆ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ 2,336, ಹಾಗೂ ಒಳರೋಗಿಗಳ ಸಂಖ್ಯೆ 1,095; ತೆಗೆದ ಕ್ಷ ಕಿರಣಗಳು 1,363; ಸ್ಕ್ರೀನಿಂಗ್‌ಗಳು 11,195 ಆಗಿರುತ್ತವೆ.

### ಸಾರ್ವಜನಿಕ ಆಸ್ಪತ್ರೆ, ಗದಗ

ಸಾರ್ವಜನಿಕ ಆಸ್ಪತ್ರೆ, ಗದಗ ಇದು ನಗರ ಸಭೆಯ ದವಾಖಾನೆಯಾಗಿ 1864ರಲ್ಲಿ ಪ್ರಾರಂಭಗೊಂಡು ನಂತರ 1975ರಲ್ಲಿ ಕಾಟೇಜ್ ಆಸ್ಪತ್ರೆಯಾಗಿ ಮಾರ್ಪಾಡಾಯಿತು. 1982-83ರಲ್ಲಿ ಸಾರ್ವಜನಿಕ ಆಸ್ಪತ್ರೆಯಾಗಿ ಮತ್ತೆ ಪರಿವರ್ತನೆಗೊಂಡಿತು. ಎಲ್ಲ ರೀತಿಯ ಆಧುನಿಕ ಸೌಕರ್ಯಗಳನ್ನು ಈ ಆಸ್ಪತ್ರೆ ಹೊಂದಿದ್ದು, ವಿಶೇಷ ಚಿಕಿತ್ಸಾ ಸೌಲಭ್ಯಗಳನ್ನು ಹೊಂದಿದೆ. ಆಸ್ಪತ್ರೆಯ ಆಡಳಿತಕ್ಕೆ ಒಳಪಟ್ಟಂತೆ ಡಿ ಎಂ ಎಂ ಹೆರಿಗೆ ವಿಭಾಗ, ಬಾಣಂತಿ ಸೇವಾ ಕೇಂದ್ರ, ಕುಟುಂಬ ಕಲ್ಯಾಣ ಕೇಂದ್ರ ಹಾಗೂ ಕುಷ್ಠರೋಗ ಚಿಕಿತ್ಸಾ ಕೇಂದ್ರಗಳು ಇವೆ. ಆಸ್ಪತ್ರೆಯಲ್ಲಿ ದೊರೆಯುವ ವಿಶೇಷ ಸವಲತ್ತುಗಳೆಂದರೆ ಹೃದಯ ಚಿಕಿತ್ಸೆ, ಅರಿವಳಿಕೆ ವಿಭಾಗ, ಸಾಮಾನ್ಯ ಶಸ್ತ್ರ ಚಿಕಿತ್ಸೆ, ಎಲುಬು ಕೀಲುಗಳ ಚಿಕಿತ್ಸೆ, ದಂತ ಚಿಕಿತ್ಸೆ ಹಾಗೂ ಸ್ತ್ರೀರೋಗ ಚಿಕಿತ್ಸೆ ಮುಂತಾದವು. ಪ್ರತೀ ವಿಭಾಗಕ್ಕೂ ತಜ್ಞ ವೈದ್ಯರ ಸೇವೆಯನ್ನು ಒದಗಿಸಲಾಗಿದೆ. ಎಕ್ಸರೇ ಸೌಲಭ್ಯವನ್ನು ಸಹ ಈ ಆಸ್ಪತ್ರೆಯು ಹೊಂದಿದೆ.

ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ 1990-91 ರಿಂದ 93-94ರವರೆಗಿನ 4 ವರ್ಷಗಳಲ್ಲಿ ಪ್ರತಿ 736, 941, 1,456 ಮತ್ತು 1,057 ಟ್ಯೂಬೆಕ್ಟಮಿ ಶಸ್ತ್ರ ಚಿಕಿತ್ಸೆಗಳು ಹಾಗೂ 189, 413, 625 ಮತ್ತು 478 ವಂಕಿಧಾರಣೆ ಮಾಡಿಸಲಾಗಿದೆ. ಇದೇ ಅವಧಿಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕ್ಷಯರೋಗಿಗಳ ಸಂಖ್ಯೆಯು ಕ್ರಮವಾಗಿ 192, 173, 151, ಮತ್ತು 197, ನಡೆಸಲ್ಪಟ್ಟ ಒಟ್ಟು ಸಣ್ಣ ಹಾಗೂ ದೊಡ್ಡ ಶಸ್ತ್ರ ಚಿಕಿತ್ಸೆಗಳು 1,336, 1,270, 1,890 ಮತ್ತು 1,569, ಹಾಗೂ ತೆಗೆಯಲ್ಪಟ್ಟ ಎಕ್ಸರೇಗಳು. 2,074, 2,236, 4,723 ಮತ್ತು 6,152 ಆಗಿರುತ್ತವೆ. ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹೊರ ರೋಗಿಗಳ ಸಂಖ್ಯೆ ಕ್ರಮವಾಗಿ 1,29,198, 1,32,019, 1,32,020 ಮತ್ತು 1,51,340; ಒಳರೋಗಿಗಳ ಸಂಖ್ಯೆ 3,010, 3,240, 3,249 ಮತ್ತು 5,571; ಹಾಗೂ ಅದೇ ಅವಧಿಯಲ್ಲಿ ನಡೆದ ಪ್ರಸೂತಿಗಳು 1,565, 1,469, 1,417 ಮತ್ತು 1,518 ಆಗಿರುತ್ತವೆ. 1990-91 ಮತ್ತು 1991-92ರ ಅವಧಿಗೆ ಚಿಕಿತ್ಸೆ ಪಡೆಯುತ್ತಿರುವ ಕುಷ್ಠರೋಗಿಗಳು 69 ಮತ್ತು 133 ಆಗಿವೆ.

**ಸಾರ್ವಜನಿಕ ಆಸ್ಪತ್ರೆ, ಹಾವೇರಿ**

ಸಾರ್ವಜನಿಕ ಆಸ್ಪತ್ರೆ ಹಾವೇರಿಯು ಪ್ರಾರಂಭದಲ್ಲಿ ಮುನಿಸಿಪಲ್ ಡಿಸ್‌ಪೆನ್ಸರಿ ಎಂದು 1878ರಲ್ಲಿ ಸ್ಥಾಪನೆಯಾಯಿತು. ನಂತರದಲ್ಲಿ ಕಾಟೇಜ ಆಸ್ಪತ್ರೆಯಾಗಿ ಪರಿವರ್ತನೆಗೊಂಡು 1962ರಲ್ಲಿ ಈ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣಗೊಂಡು, ಅದೇ ವರ್ಷ ಆಸ್ಪತ್ರೆ ಸರ್ಕಾರದ ಆಡಳಿತಕ್ಕೆ ಒಳಪಟ್ಟು, ಸಾರ್ವಜನಿಕ ಆಸ್ಪತ್ರೆ ಆಗಿ ಬದಲಾವಣೆಗೊಂಡಿತು. ಪ್ರಸ್ತುತ ಆಸ್ಪತ್ರೆಯು 66 ಹಾಸಿಗೆಗಳ ಸಾಮರ್ಥ್ಯ (ಬಾಣಂತಿ ಸೇವಾ ಕೇಂದ್ರಕ್ಕೆ ಒಳಪಟ್ಟಂತೆ 6 ಹಾಸಿಗೆ ಸೇರಿ) ಪಡೆದಿದ್ದು, ಎಕ್ಸರೇ ಹಾಗೂ ಸ್ಕ್ರಿನಿಂಗ್ ಸೌಲಭ್ಯಗಳನ್ನು ಪಡೆದಿದೆ. ನೇತ್ರ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ಹೃದಯ ರೋಗಗಳ ಚಿಕಿತ್ಸೆ ಮತ್ತು ಸ್ತ್ರೀರೋಗ ಚಿಕಿತ್ಸೆ ಮುಂತಾದ ವಿಭಾಗಗಳನ್ನು ಹೊಂದಿದ್ದು ತಜ್ಞ ವೈದ್ಯರ ಸೇವೆಯನ್ನು ನೀಡುತ್ತಿದೆ. ಆಸ್ಪತ್ರೆ ಆಡಳಿತಕ್ಕೆ ಒಳಪಟ್ಟಂತೆ ಕುಟುಂಬ ಕಲ್ಯಾಣ ಕೇಂದ್ರ, ತಾಯಂದಿರ ಮಕ್ಕಳ ಆರೋಗ್ಯ ಕೇಂದ್ರ (ಪಿಪಿಸಿ), ಕ್ಷಯ ರೋಗ ನಿಯಂತ್ರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ.

ಆಸ್ಪತ್ರೆಯಲ್ಲಿ 1990-91, 91-92, 92-93 ವರ್ಷಗಳಲ್ಲಿ ಚಿಕಿತ್ಸೆ ಪಡೆದ ಹೊರ ರೋಗಿಗಳ ಸಂಖ್ಯೆ ಕ್ರಮವಾಗಿ 1,25,626, 1,33,928 ಮತ್ತು 1,27,878; ಚಿಕಿತ್ಸೆ ಪಡೆದ ಒಳ ರೋಗಿಗಳ ಸಂಖ್ಯೆ ಕ್ರಮವಾಗಿ 3,572, 3,772 ಮತ್ತು 3,997; ಪ್ರಸೂತಿಕಾ ಚಿಕಿತ್ಸೆ ಪಡೆದವರ ಸಂಖ್ಯೆಯು 425, 454 ಮತ್ತು 464; ನಡೆಸಲ್ಪಟ್ಟ ಶಸ್ತ್ರ ಚಿಕಿತ್ಸೆಗಳು 623, 694 ಮತ್ತು 376; ಆಸ್ಪತ್ರೆಯಲ್ಲಿ ತೆಗೆಯಲಾದ ಎಕ್ಸರೇಗಳು 4491, 4542 ಮತ್ತು 4887; ಹಾಗೂ ತೆಗೆದ ಸ್ಕ್ರಿನಿಂಗ್‌ಗಳು 69,161 ಹಾಗೂ 129 ಆಗಿವೆ.

ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1990-91, 91-92, 92-93ರಲ್ಲಿ ನಡೆಸಲ್ಪಟ್ಟ ಟ್ಯೂಬೆಕ್ಟಮಿ ಶಸ್ತ್ರ ಚಿಕಿತ್ಸೆಗಳು ಕ್ರಮವಾಗಿ 353,309 ಹಾಗೂ 365 ಹಾಗೂ ವಂಕಿಧಾರಣೆ 254, 279 ಹಾಗೂ 232 ಆಗಿದೆ. ಇದೇ ಅವಧಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕ್ಷಯರೋಗಿಗಳ ಸಂಖ್ಯೆ 334, 432 ಹಾಗೂ 263 ಆಗಿರುತ್ತದೆ.

**ಸಾರ್ವಜನಿಕ ಆಸ್ಪತ್ರೆ, ನವಲಗುಂದ**

ಸಾರ್ವಜನಿಕ ಆಸ್ಪತ್ರೆ ನವಲಗುಂದವು 1953ರಲ್ಲಿ ಪ್ರಾರಂಭಗೊಂಡಿತು. 1959ರಲ್ಲಿ ವಿಸ್ತರಣೆಗೊಂಡಿತು. ಇದು ಪ್ರಾರಂಭದಲ್ಲಿ ನಗರ ಸಭೆ ಆಸ್ಪತ್ರೆ ಆಗಿದ್ದು 1981ರಲ್ಲಿ ಸರ್ಕಾರ ಇದರ ಆಡಳಿತ ವಹಿಸಿಕೊಂಡಿತು. 18 ಹಾಸಿಗೆಗಳ ಸೌಲಭ್ಯ ಪಡೆದ ಈ ಆಸ್ಪತ್ರೆ ಕ್ಷ-ಕಿರಣ ಹಾಗೂ ಹೆರಿಗೆ ವಿಭಾಗಗಳನ್ನು ಹೊಂದಿದೆ.

1992-93 ಹಾಗೂ 1993-94 ನೇ ಸಾಲಿನಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹೊರ ರೋಗಿಗಳು ಕ್ರಮವಾಗಿ 29,355 ಮತ್ತು 34;025, ಒಳರೋಗಿಗಳು 374 ಮತ್ತು 404 ಆಗಿರುತ್ತದೆ. ಇದೇ ಅವಧಿಗೆ ಪ್ರಸೂತಿಕಾ ಚಿಕಿತ್ಸೆ ಪಡೆದವರ ಸಂಖ್ಯೆಗಳು ಕ್ರಮವಾಗಿ 347 ಮತ್ತು 368; ಶಸ್ತ್ರ ಚಿಕಿತ್ಸೆ ಪಡೆದವರ ಸಂಖ್ಯೆ 150 ಮತ್ತು 200. ಚಿಕಿತ್ಸೆ ಪಡೆಯುತ್ತಿರುವ ಕ್ಷಯರೋಗಿಗಳ ಸಂಖ್ಯೆ 32 ಮತ್ತು 20; ಕುಷ್ಠ ರೋಗಿಗಳು 102 ಮತ್ತು 78 ಆಗಿವೆ. ಕುಟುಂಬ ಯೋಜನಾ ಕಾರ್ಯಕ್ರಮದಡಿಯಲ್ಲಿ 1991-92, 1992-93, 1993-94ರಲ್ಲಿ ಆಸ್ಪತ್ರೆಯ ಸಾಧನೆ ಕ್ರಮವಾಗಿ ಟ್ಯೂಬೆಕ್ಟಮಿ ಹಾಗೂ ಉದರದರ್ಶಕ ಶಸ್ತ್ರ ಚಿಕಿತ್ಸೆಗಳು ಸೇರಿ 275, 414 ಹಾಗೂ 580; ಹಾಗೂ ವಂಕಿಧಾರಣೆ ಪ್ರಕರಣಗಳು 15, 13 ಹಾಗೂ 15; ಆಗಿದೆ.

**ಸಾರ್ವಜನಿಕ ಆಸ್ಪತ್ರೆ, ರಾಣೆಬೆನ್ನೂರು**

. ಸಾರ್ವಜನಿಕ ಆಸ್ಪತ್ರೆಯು 1937 ರಷ್ಟು ಪೂರ್ವದಲ್ಲಿಯೇ ಪುರಸಭೆ ಆಸ್ಪತ್ರೆಯಾಗಿ ರಾಣೆಬೆನ್ನೂರಿನಲ್ಲಿ ಪ್ರಾರಂಭಗೊಂಡಿತ್ತು. 1982 ರಿಂದ ಸರ್ಕಾರ ಇದರ ಆಡಳಿತ ವಹಿಸಿದ ಮೇಲೆ ಸಾರ್ವಜನಿಕ ಆಸ್ಪತ್ರೆಯಾಗಿ ರೂಪುಗೊಂಡಿತು. ಪ್ರಾರಂಭಿಕವಾಗಿ 29 ಹಾಸಿಗೆಗಳ ಈ ಆಸ್ಪತ್ರೆ ಪ್ರಸ್ತುತ 59 ಹಾಸಿಗೆಗಳ ಸಾಮರ್ಥ್ಯಪಡೆದಿದೆ. ಆಸ್ಪತ್ರೆಯ ಅಧೀನದಲ್ಲಿ ಒಂದು ನಗರ ಕುಟುಂಬ ಕಲ್ಯಾಣ ಕೇಂದ್ರ ಹಾಗೂ ರಾಷ್ಟ್ರೀಯ ಕುಷ್ಠರೋಗ ನಿವಾರಣಾ ಕೇಂದ್ರಗಳು ಇವೆ. ಸ್ಥಾನಿಕ ಸಂಸ್ಥೆಗಳಿಂದ ಇಲ್ಲಿ ನೇತ್ರ ಚಿಕಿತ್ಸೆ ಸೌಲಭ್ಯವನ್ನು ಒದಗಿಸಿ ಕೊಡಲಾಗುತ್ತಿದೆ.

1992-1993 ಹಾಗೂ 1993-94 ರಲ್ಲಿ ಚಿಕಿತ್ಸೆ ಪಡೆದ ಒಳ ಹಾಗೂ ಹೊರ ರೋಗಿಗಳ ಸಂಖ್ಯೆಗಳು ಕ್ರಮವಾಗಿ 220/607 ಹಾಗೂ 17,835/24,934 ಆಗಿರುತ್ತದೆ. ಇದೇ ಅವಧಿಗೆ ಪ್ರಸೂತಿಕಾ ಚಿಕಿತ್ಸೆ ಪಡೆದವರ ಸಂಖ್ಯೆ 360/375 ಆಗಿತ್ತು. ಹಾಗೂ ದಾಖಲಾದ ಕ್ಷಯ ಹಾಗೂ ಕುಷ್ಠರೋಗಗಳ ಸಂಖ್ಯೆಗಳು ಕ್ರಮವಾಗಿ 25/22 ಹಾಗೂ 21/23 ಆಗಿರುತ್ತದೆ.

ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1991-92, 1992-93 ಹಾಗೂ 1993-94 ರಲ್ಲಿ ನಡೆಸಲ್ಪಟ್ಟ ಸಂತಾನಹರಣ ಚಿಕಿತ್ಸೆಗಳಾದ ಟ್ಯೂಬೆಕ್ಟಮಿ ಹಾಗೂ ಉದರ ದರ್ಶಕ ಶಸ್ತ್ರ ಚಿಕಿತ್ಸೆಗಳು ಸೇರಿ 354/371 ಹಾಗೂ 385 ಹಾಗೂ ವಂಕಿಧಾರಣೆ ಪ್ರಕರಣಗಳು ಕ್ರಮವಾಗಿ 197/141 ಹಾಗೂ 161 ಆಗಿರುತ್ತದೆ.

**ಸಾರ್ವಜನಿಕ ಆಸ್ಪತ್ರೆ, ಸವಣೂರು**

ಸಾರ್ವಜನಿಕ ಆಸ್ಪತ್ರೆ ಸವಣೂರು ಇದು ಪೂರ್ವದಲ್ಲಿ ತ್ಯಾಬ್ರಿಜ್ ಆಸ್ಪತ್ರೆ ಎಂಬ ಹೆಸರಿನಿಂದ 1893 ರಷ್ಟು ಹಿಂದೆಯೇ ಪ್ರಾರಂಭಗೊಂಡಿತು. ಇದು ಮುಂದೆ ಪಿಪಿಸಿ ಮತ್ತು ಸಿಎಚ್‌ಸಿ (ಸಮುದಾಯ ಆರೋಗ್ಯ ಕೇಂದ್ರ) ಸ್ಥಾನ ಸೌಲಭ್ಯಗಳನ್ನು 1986 ಹಾಗೂ 1990 ರಲ್ಲಿ ಪಡೆದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳನ್ನು ಜನರಿಗೆ ಒದಗಿಸುತ್ತಿದೆ. ಪ್ರಾರಂಭದಲ್ಲಿ 8 ಹಾಸಿಗೆಗಳ ಈ ಆಸ್ಪತ್ರೆ ಪ್ರಸ್ತುತ 40 ಹಾಸಿಗೆಗಳ ಸಾಮರ್ಥ್ಯ ಪಡೆದಿದೆ. 1992-93 ಮತ್ತು 1993-94 ನೇ ಸಾಲಿನಲ್ಲಿ ಈ ಆಸ್ಪತ್ರೆ ಕ್ರಮವಾಗಿ 23,385 ಮತ್ತು 27,873 ಜನ ಹೊರರೋಗಿಗಳು 968 ಮತ್ತು 1,156 ಜನ ಒಳರೋಗಿಗಳು 324 ಮತ್ತು 358 ಬಾಣಂತಿಯರು ಹಾಗೂ 48 ಮತ್ತು 63 ಜನ ಕ್ಷಯ ರೋಗಿಗಳು ಚಿಕಿತ್ಸೆ ಪಡೆದಿರುತ್ತಾರೆ. ಕುಟುಂಬ ಕಲ್ಯಾಣ ಯೋಜನೆಯಡಿ 1991-92, 1992-93 ಮತ್ತು 1993-94 ರಲ್ಲಿ ಕ್ರಮವಾಗಿ 129/110 ಮತ್ತು 198 ಟ್ಯೂಬೆಕ್ಟಮಿ ಶಸ್ತ್ರ ಚಿಕಿತ್ಸೆಗಳು, 119/138 ಮತ್ತು 143 ಉದರ ದರ್ಶಕ ಶಸ್ತ್ರ ಚಿಕಿತ್ಸೆಗಳು ಹಾಗೂ 164/171 ಮತ್ತು 256 ಜನರಿಗೆ ವಂಕಿಧಾರಣೆ ಮಾಡಿಸಿದ ಸಾಧನೆ ಈ ಆಸ್ಪತ್ರೆಯದಾಗಿದೆ.

**ಸಾರ್ವಜನಿಕ ಆಸ್ಪತ್ರೆ, ರೋಣ**

ಸಾರ್ವಜನಿಕ ಆಸ್ಪತ್ರೆ, ರೋಣ ಪ್ರಾರಂಭವಾದಾಗ (1914) ಔಷಧಾಲಯವಾಗಿತ್ತು. ನಂತರ ಡಿಎಲ್‌ಬಿ ಆಡಳಿತಕ್ಕೆ ಒಳಪಟ್ಟು ಮುಂದೆ ಟಿಡಿಬಿ ವ್ಯಾಪ್ತಿಗೆ ಬಂದು, ಬಿಡಿಒ ಆಡಳಿತಕ್ಕೆ ಒಳಪಟ್ಟಿತು. 1977 ರಲ್ಲಿ ಸರ್ಕಾರ ಇದರ ಆಡಳಿತ ವಹಿಸಿಕೊಂಡಿತು. 1988 ರಲ್ಲಿ ಐಪಿಪಿ III ರಿಂದ ಸಮುದಾಯ ಆರೋಗ್ಯ ಕೇಂದ್ರವಾಗಿ ಶಸ್ತ್ರ ಚಿಕಿತ್ಸೆ ಕೊಠಡಿಯನ್ನು ಒಳಗೊಂಡಂತೆ 24 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಗೊಂಡಿತು. ಪ್ರಸ್ತುತ 26 ಹಾಸಿಗೆಗಳ ಸೌಲಭ್ಯ ಪಡೆದ ಈ ಆಸ್ಪತ್ರೆಯಲ್ಲಿ 1992-93 ಹಾಗೂ 1993-94 ರಲ್ಲಿ ಚಿಕಿತ್ಸೆ ಪಡೆದ ಒಳರೋಗಿಗಳ ಸಂಖ್ಯೆ 526 ಮತ್ತು 634 ಆಗಿರುತ್ತದೆ. ಹಾಗೂ ಪ್ರಸೂತಿಕಾ ಚಿಕಿತ್ಸೆ ಪಡೆದವರ ಸಂಖ್ಯೆ 141 ಮತ್ತು 208. ಇದೇ ವರ್ಷಗಳಲ್ಲಿ 429 ಮತ್ತು 641 ಟ್ಯೂಬೆಕ್ಟಮಿ ಮತ್ತು ಉದರದರ್ಶಕ ಶಸ್ತ್ರ ಚಿಕಿತ್ಸೆಗಳು ನಡೆಸಲ್ಪಟ್ಟಿದ್ದು, ಆಸ್ಪತ್ರೆಯಲ್ಲಿ ಕ್ರಮವಾಗಿ 25 ಮತ್ತು 26 ಕ್ಷಯ ರೋಗಿಗಳು, 16 ಮತ್ತು 16 ಕುಷ್ಠ ರೋಗಿಗಳು ಚಿಕಿತ್ಸೆ ಪಡೆದಿದ್ದರು. ಆಸ್ಪತ್ರೆಯು ಕ್ಷ ಕಿರಣ ಸೌಲಭ್ಯವನ್ನು ಪಡೆದಿದೆ.

**ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ದಂತ ಮಹಾವಿದ್ಯಾಲಯ ಆಸ್ಪತ್ರೆ**

ಅತ್ಯಾಧುನಿಕ ಸೇವಾ ಸೌಲಭ್ಯ, ಸಲಕರಣೆ ಮತ್ತು ಆಕರ್ಷಕ ಕಟ್ಟಡ ಸಂಕೀರ್ಣವನ್ನು ಹೊಂದಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ದಂತ ಮಹಾವಿದ್ಯಾಲಯ ಆಸ್ಪತ್ರೆಯು 1986 ರಲ್ಲಿ ಎಸ್.ಡಿ.ಎಂ.ಇ. ಸೊಸೈಟಿ ಉಜಿರೆ ಆಶ್ರಯದಲ್ಲಿ ಧಾರವಾಡದ ಸತ್ತೂರಿನ ಧವಳಾನಗರದಲ್ಲಿ ಪ್ರಾರಂಭಗೊಂಡಿತು. ಸುಮಾರು ಮೂರು ಕೋಟಿಗೂ ಹೆಚ್ಚಿನ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಪ್ರತಿಷ್ಠಿತ ಕಾಲೇಜು ಆಸ್ಪತ್ರೆ ಕಟ್ಟಡವು ತನ್ನ ಅನೇಕ ವಿಶೇಷತೆಗಳಾದ ಶಸ್ತ್ರ ಚಿಕಿತ್ಸಾ ವಿಭಾಗ, ವಿಶೇಷ ಚಿಕಿತ್ಸಾ ವಿಭಾಗ, ಪ್ರಯೋಗಾಲಯ, ಇಲೆಕ್ಟ್ರಾನಿಕ್ ದಂತ ಚಿಕಿತ್ಸಾ ಆಸನಗಳು, ಸಂಶೋಧನಾ ವಿಭಾಗ ಹಾಗೂ ನುರಿತ ವೈದ್ಯ ತಂಡಗಳಿಂದ ಕೂಡಿದ್ದು, ದೇಶದಲ್ಲಿಯೇ ಗಣ್ಯ ದಂತ ಚಿಕಿತ್ಸಾ ಕೇಂದ್ರವೆಂದು ಹೆಸರು ಪಡೆಯುತ್ತಿದೆ.

1992 ರಲ್ಲಿ 20 ಹಾಸಿಗೆಗಳ ಒಳರೋಗಿ ಚಿಕಿತ್ಸಾ ವಿಭಾಗ, ಆಪರೇಶನ್ ಥೇಟರ್ ಹಾಗೂ ಸಂಶೋಧನಾ ವಿಭಾಗಗಳನ್ನು ಈ ಆಸ್ಪತ್ರೆ ಪಡೆಯಿತು. ಪ್ರಸ್ತುತ ನಿತ್ಯ ಸುಮಾರು 500 ರಿಂದ 600 ಜನರು ಆಸ್ಪತ್ರೆಗೆ ಪರೀಕ್ಷೆ ಇಲ್ಲವೆ ಚಿಕಿತ್ಸೆ ಪಡೆಯಲು ಬರುತ್ತಾರೆ. ಹೊರ ರೋಗಿಗಳಿಗಾಗಿ ಹತ್ತು ಹೊರರೋಗಿ ವಿಭಾಗಗಳು ಇವೆ. ಓರಲ್ ಇಂಪ್ಲಾಂಟೊಲೋಜಿ ವಿಭಾಗವನ್ನು ಪ್ರಾರಂಭಿಸಿದ್ದು ಇದು ದೇಶದಲ್ಲಿಯೇ ಪ್ರಥಮ ಎಂದು ಹೇಳಲಾಗಿದೆ. 1991 ರಲ್ಲಿ ಮಹಾವಿದ್ಯಾಲಯವು ಒಂಭತ್ತು ವಿವಿಧ ವಿಶೇಷಜ್ಞರನ್ನು ಒಳಗೊಂಡ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಿದೆ.

ಆಸ್ಪತ್ರೆಯಲ್ಲಿ 178 ಡೆಂಟಲ ಚೇರ್‌ಗಳು ಇದ್ದು ಅವುಗಳಲ್ಲಿ 75 ಇಲೆಕ್ಟ್ರಾನಿಕ್ ತಂತ್ರಜ್ಞಾನದಿಂದ ನಿಯಂತ್ರಿಸಲ್ಪಡುವುದಾಗಿವೆ. ಕ್ಷ ಕಿರಣ, ದಂತ ಚಿಕಿತ್ಸೆ ಹಾಗೂ ಸಾಮಾನ್ಯ ಪರೀಕ್ಷೆ ಸೌಲಭ್ಯಗಳು ಸಹ ಆಸ್ಪತ್ರೆಯಲ್ಲಿ ಲಭ್ಯವಿದೆ. ಬಾಯಿ ಮತ್ತು ಮುಖ ಶಸ್ತ್ರ ಚಿಕಿತ್ಸೆ, ಕೃತಕ ದಂತ, ವಕ್ರದಂತ ಚಿಕಿತ್ಸೆ, ಮಕ್ಕಳ ದಂತ ಚಿಕಿತ್ಸೆ, ಹುಳುಕು ಹುಲ್ಲು ಚಿಕಿತ್ಸೆ, ಹಲ್ಲು ಕೀಳುವುದು ಮುಂತಾದ ವಿಭಾಗ ಗಳನ್ನು ಈ ಆಸ್ಪತ್ರೆ ಪಡೆದಿದೆ. 1991-92 ಮತ್ತು 1992-93 ನೇ ಸಾಲಿನಲ್ಲಿ ಚಿಕಿತ್ಸೆ ಪಡೆದ ಒಳ ಹಾಗೂ ಹೊರ ರೋಗಿಗಳ ಸಂಖ್ಯೆ ಕ್ರಮವಾಗಿ 1,46,371 ಮತ್ತು 1,73,871 , ಇದೇ ಅವಧಿಯಲ್ಲಿ ನಡೆಸಲ್ಪಟ್ಟ ಶಸ್ತ್ರ ಚಿಕಿತ್ಸೆಗಳು 80 ಮತ್ತು 130.

## ನಿಸರ್ಗ ಜೀವನ ಸಾಧನಾಲಯ

ಗಾಂಧೀಜಿಯವರ ಸ್ವಾವಲಂಬನೆ ಹಾಗೂ ಕಡಿಮೆ ಖರ್ಚಿನಲ್ಲಿ ಆರೋಗ್ಯ ಲಭ್ಯ ಎಂಬ ನಿಸರ್ಗ ಚಿಕಿತ್ಸಾ ವಿಧಾನವೆನ್ನುವ ತತ್ವದ ಮೇಲೆ ನಿಸರ್ಗ ಜೀವನ ಸಾಧನಾಲಯವು ಹುಬ್ಬಳ್ಳಿಯ ಬೆಂಗೇರಿಯಲ್ಲಿ ವೆಂಕಟೇಶ ಮಾಗಡಿಯವರ ಯತ್ನದಿಂದ 1973 ರಲ್ಲಿ ಸ್ಥಾಪನೆಯಾಯಿತು. ಪುಣೆಯ ಹತ್ತಿರ ಸ್ಥಾಪಿತವಾದ ನಿಸರ್ಗ ಚಿಕಿತ್ಸಾಲಯದ ಮಹತ್ವ ಹಾಗೂ ನಿಸರ್ಗ ಚಿಕಿತ್ಸೆಯ ಶ್ರೇಷ್ಠತೆ ಅರಿತು ನಿಸರ್ಗ ಚಿಕಿತ್ಸೆ ಸಮಿತಿ ಹುಬ್ಬಳ್ಳಿ ಹಾಗೂ ಕರ್ನಾಟಕ ಸರ್ಕಾರ ರಾಜಸ್ಥಾನದ ಪ್ರಸಿದ್ಧ ವೈದ್ಯರಾದ ರಾಮೇಶ್ವರ ಪೊತದಾರ ಅವರಿಗೆ ಸಹಕಾರ ನೀಡಲು ಎಚ್. ಶ್ರೀನಿವಾಸ ರೆಡ್ಡಿ (ನಿಸರ್ಗ ಚಿಕಿತ್ಸಾ ಸಹಾಯಕ ನಿರ್ದೇಶಕರು)ಯವರನ್ನು ನೇಮಿಸಿತು. ಪ್ರಾರಂಭಗೊಂಡಾಗ ಆಸ್ಪತ್ರೆಯು ಬೆಂಗೇರಿಯ ಖಾದಿಗ್ರಾಮೋದ್ಯೋಗ ಕೇಂದ್ರದ ಒಂದು ಕೊಠಡಿಯಲ್ಲಿ ಕಾರ್ಯಾರಂಭ ಮಾಡಿತ್ತು. ಪ್ರಸ್ತುತ ಈ ಚಿಕಿತ್ಸಾಲಯವು 16 ಕೊಠಡಿಗಳನ್ನು ಹೊಂದಿದ್ದು ಮಹಿಳೆಯರಿಗೆ, ಪುರುಷರಿಗೆ ಪ್ರತ್ಯೇಕ ವಾರ್ಡಗಳು ಹಾಗೂ ಒಂದು ಪ್ರಾರ್ಥನಾ ಮಂದಿರ ಸಹ ಇದೆ. ಪ್ರಾರಂಭದಲ್ಲಿ ಎರಡು ಹಾಸಿಗೆಗಳನ್ನು ಈ ಚಿಕಿತ್ಸಾಲಯ ಹೊಂದಿದ್ದು ಈಗ ಹಾಸಿಗೆಗಳ ಸಾಮರ್ಥ್ಯ 45 ಕ್ಕೆ ಹೆಚ್ಚಿದೆ. ಆಸ್ಪತ್ರೆಗೆ ಸ್ವಂತ ಕಟ್ಟಡವಿಲ್ಲ, ಖಾದಿಗ್ರಾಮೋದ್ಯೋಗದವರು ಉಚಿತವಾಗಿ ಸಾಧನಾಲಯಕ್ಕೆ ಸ್ಥಳ ಹಾಗೂ ಕಟ್ಟಡ ನೀಡಿರುವರು. ಪ್ರಸ್ತುತ ಸರ್ಕಾರದ ಅನುದಾನ ಇದಕ್ಕಿಲ್ಲ ಸಾರ್ವಜನಿಕ ದೇಣಿಗೆಯಿಂದಲೇ ಪ್ರಗತಿಪರ ಚಟುವಟಿಕೆಗಳನ್ನು ನಡೆಸಲಾಗುವುದು. ಪಂಚ ಮಹಾಭೂತ ಚಿಕಿತ್ಸೆ, ಜಲ ಚಿಕಿತ್ಸೆ, ಮೃತ್ತಿಕಾ ಚಿಕಿತ್ಸೆ, ಯೋಗ ಚಿಕಿತ್ಸೆ, ಆಹಾರ ಚಿಕಿತ್ಸೆ ಹಾಗೂ ಮಾಲೀಶ, ಪ್ರಾರ್ಥನೆ, ಪ್ರಾಣಾಯಾಮಾ, ಧ್ಯಾನ ಹಾಗೂ ಸೂರ್ಯಕಿರಣ ಚಿಕಿತ್ಸೆಗಳಿಂದ ರೋಗಿಗಳ ಉಪಚಾರ ನಡೆಸಲಾಗುವುದು. ಸಾಧನಾಲಯದ ಪ್ರಾರಂಭದಲ್ಲಿಯ ಒಳರೋಗಿಗಳ ಸಂಖ್ಯೆ 100 ಹಾಗೂ ಹೊರ ರೋಗಿಗಳು 200 ಆಗಿತ್ತು. 1990-91 ಹಾಗೂ 93-94 ರ ಸಾಲುಗಳಲ್ಲಿ ಹೊರರೋಗಿಗಳ ಹಾಗೂ ಒಳರೋಗಿಗಳ ಸಂಖ್ಯೆ ಕ್ರಮವಾಗಿ 1880/604 ಹಾಗೂ 1721 ಮತ್ತು 653 ಆಗಿರುತ್ತದೆ.

ಕುಟುಂಬ ಯೋಜನಾ ಪರ ಪ್ರಚಾರ ಭಾಷಣ ಏರ್ಪಡಿಸುವುದು, ಬ್ರಹ್ಮಚಾರ್ಯಪಾಲನೆ, ಪ್ರಕೃತಿ ಜೀವನ ನಡೆಸುವಲ್ಲಿ ಜನಗಳಿಗೆ ತಿಳುವಳಿಕೆ ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ಈ ಸಂಸ್ಥೆ ಹಾಕಿಕೊಂಡಿರುತ್ತದೆ. 'ಆರೋಗ್ಯ ಮತ್ತು ಆಹಾರ' ಎಂಬ ಮಾಸಿಕದ ಜೊತೆ 'ಕಚ್ಚಾ ನೀರಾಗ್ನಿ ಆಹಾರ', 'ಜೀವಂತ ಆಹಾರ', 'ಹೃದಯ ರೋಗಗಳು', 'ದೀರ್ಘಾಯಸ್ಸು' ಮತ್ತು 'ಗೋದಿ ಹುಲ್ಲಿನ ಕೈಪಿಡಿ' ಮುಂತಾದ ಪುಸ್ತಕಗಳನ್ನು ಇದು ಪ್ರಕಟಿಸಿದೆ.

## ಮಹಾನಗರ ಸಭೆ ನಡೆಸುತ್ತಿರುವ ಆರೋಗ್ಯ ಸಂಸ್ಥೆಗಳು

ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯು ಮೂರು ಜನರಲ್ ಆಸ್ಪತ್ರೆಗಳನ್ನು ನಾಲ್ಕು ಹೆರಿಗೆ ಆಸ್ಪತ್ರೆಗಳನ್ನು ನಾಲ್ಕು ದೇಶೀಯ ವೈದ್ಯಾಲಯಗಳು, ಎರಡು ಆಯುರ್ವೇದ ದವಾಖಾನೆಗಳು, ನಾಲ್ಕು ಹೋಮಿಯೊಪಥಿಕ್ ದವಾಖಾನೆಗಳು, ಮೂರು ಕುಟುಂಬ

ಕಲ್ಯಾಣ ಕೇಂದ್ರಗಳು ಹಾಗೂ ಒಂದು ಬಾಣಂತಿ ಸೇವಾ ಕೇಂದ್ರ ಹೀಗೆ ಒಟ್ಟು 21 ಆರೋಗ್ಯ ಸಂಸ್ಥೆಗಳನ್ನು ನಡೆಸುತ್ತಿವೆ. ಚಿಟಗುಪ್ಪಿ ಆಸ್ಪತ್ರೆ ಹುಬ್ಬಳ್ಳಿಯು 75 ಹಾಸಿಗೆಗಳ ಸಾಮರ್ಥ್ಯ ಹೊಂದಿದೆ. ಇದರಂತೆ ಇತರ ಆಸ್ಪತ್ರೆಗಳ ಹಾಸಿಗೆ ಸಂಖ್ಯೆ ಕ್ರಮವಾಗಿ, ಧಾರವಾಡ ಬಸ್‌ಸ್ಟ್ಯಾಂಡ್ ಆಸ್ಪತ್ರೆ 55, ಹಳೇ ಹುಬ್ಬಳ್ಳಿ ಆಸ್ಪತ್ರೆ 30, ತೊರವಿಗಲ್ಲಿ ಆಸ್ಪತ್ರೆ 14, ಕಾಮನಕಟ್ಟಿ 16 ಹಾಗೂ ಮದಿಹಾಳ ಆಸ್ಪೆ 10 ಹೀಗೆ ಒಟ್ಟು 200 ಹಾಸಿಗೆಗಳ ಸೌಲಭ್ಯವಿದೆ. 1985-86 ರಲ್ಲಿ 3,70,202 ಹೊರರೋಗಿಗಳು, 2,247 ಒಳರೋಗಿಗಳು ಈ ಆಸ್ಪತ್ರೆ/ದವಾಖಾನೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಒಂದು ಎಂಟಿಪಿ ವಿಭಾಗವು ಚಿಟಗುಪ್ಪಿ ಆಸ್ಪತ್ರೆಯಲ್ಲಿ ಇದ್ದು ಕುಟುಂಬ ಕಲ್ಯಾಣ ಯೋಜನೆಯನ್ವಯ ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳಬಹುದಾಗಿದೆ. ನಗರ ಸಭೆ ತನ್ನ ಮೂರು ಕುಟುಂಬ ಕಲ್ಯಾಣ ಹಾಗೂ ಬಾಣಂತಿ ಸೇವಾ ಕೇಂದ್ರಗಳ ಮೂಲಕ ಕುಟುಂಬ ಕಲ್ಯಾಣ ಶಸ್ತ್ರಕ್ರಿಯೆಗಳನ್ನು ನಡೆಸುತ್ತಿದ್ದು, 1986-87 ರಲ್ಲಿ ಮೂರು ಬೃಹತ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಿದೆ. 2,003 ಜನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದು ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ಪ್ರೋತ್ಸಾಹ ಧನವಾಗಿ 1,16,300 ರೂ.ಗಳನ್ನು ಮಹಾನಗರಸಭೆ ನೀಡಿದೆ. ಮಹಿಳೆಯರ ಮತ್ತು ಮಕ್ಕಳ ಕಾರ್ಯಕ್ರಮದಡಿಯಲ್ಲಿಯು ಸಹ ಇದು ತನ್ನ ಸಹಯೋಗದಲ್ಲಿ ನೀಡುತ್ತಿದೆ.

ಜಿಲ್ಲೆಯಲ್ಲಿನ ಈ ಕೆಳಗಿನ ಖಾಸಗಿಯ ಆಸ್ಪತ್ರೆಗಳು ಕುಟುಂಬ ಯೋಜನಾ ಸೇವೆಯನ್ನು ಒದಗಿಸುತ್ತದೆ.

1) ಕಾಂಪ್ರಹೆನ್ಸಿವ್ ಮಾಡೆಲ ಸೆಂಟರ್, ನಾರಾಯಣಪೂರ, ಧಾರವಾಡ, 2) ಕೋ ಆಪರೇಟಿವ್ ಆಸ್ಪತ್ರೆ, ಹುಬ್ಬಳ್ಳಿ, 3) ಇಂಡಿಯನ್ ಕ್ರಿಶ್ಚಿಯನ್ ಮಿಶನ ಆಸ್ಪತ್ರೆ, ಹಾವೇರಿ, 4) ತಾವರಗೇರಿ ನರ್ಸಿಂಗ್ ಹೋಮ್, ಕೆಸಿ ಪಾರ್ಕ, ಧಾರವಾಡ, 5) ಹೆಚ್.ಡಿ. ಗಂಗಲ ನರ್ಸಿಂಗ್ ಹೋಮ, ಹುಬ್ಬಳ್ಳಿ, 6) ನಳಿನಿ ಹುಕ್ಕೇರಿ ಹೆರಿಗೆ ಆಸ್ಪತ್ರೆ, ಧಾರವಾಡ, 7) ಕಸ್ತೂರಬಾ ಮೆಟರ್ನಿಟಿ ಮತ್ತು ನರ್ಸಿಂಗ್ ಹೋಮ, ಗದಗ, 8) ಉಷಾ ಕ್ಲಿನಿಕ ಅಂಡ್ ಡಿಸ್ಪೆನ್ಸರಿ, ಹೊನ್ನೂರು, ಹುಬ್ಬಳ್ಳಿ, 9) ಅನ್ನಪೂರ್ಣಾಭಾಯಿ ಮೆಟರ್ನಿಟಿ ಮತ್ತು ನರ್ಸಿಂಗ್ ಹೋಮ್, ಗದಗ, 10) ಡಾ. ಕುಲಕರ್ಣಿ ಅಂಡ್ ಡಾ. ಸಜ್ಜನರ ಹಾಸ್ಪಟಲ್, ಗದಗ, 11) ಹುಬ್ಬಳ್ಳಿ ಪಾಲಿಕ್ಲೀನಿಕ್ ಅಂಡ್ ಜನರಲ್ ಹಾಸ್ಪಿಟಲ್, ಹುಬ್ಬಳ್ಳಿ, 12) ಡಾ. ಪುಷ್ಪಮಾಲಾ ಆರ್. ಲೋಡಾಯಿ ಸಾವಲ್‌ಜೀ ದೇವಲಜಿ ಮೆಟರ್ನಿಟಿ ಹೋಂ, ಹಾವೇರಿ, 13) ಮೇಮೋರಿಯಲ್ ಮೆಟರ್ನಿಟಿ ಹೋಮ್, ಹಾವೇರಿ, 14) ಡಾ. ಎನ್.ಎಮ್. ಮಹಾಬಲಶೆಟ್ಟಿ ಮೆಟರ್ನಿಟಿ ಮತ್ತು ಜನರಲ್ ಆಸ್ಪತ್ರೆ, ಹಳೇ ಹುಬ್ಬಳ್ಳಿ, 15) ಡಾ. ರೋಹಿಣಿ ಎನ್. ಪ್ರಭು ನರ್ಸಿಂಗ್ ಹೋಮ್, ನ್ಯೂಕಾಟನ್ ಮಾರ್ಕೆಟ, ಹುಬ್ಬಳ್ಳಿ, 16) ಡಾ. ಬಿ.ಎನ್. ಕಮಲಾಪೂರ ನರ್ಸಿಂಗ್ ಹೋಮ್, ಮಾಳಮಡ್ಡಿ, ಧಾರವಾಡ, 17) ಕರ್ನಾಟಕ ನರ್ಸಿಂಗ್ ಹೋಮ್, ಹುಬ್ಬಳ್ಳಿ 18) ಭಾರತೀಯ ಕುಟುಂಬ ಯೋಜನಾ ಸಂಘ, ಧಾರವಾಡ, 19) ಸಿದ್ದೇಶ್ವರ ನರ್ಸಿಂಗ್ ಹೋಮ್, ಹುಬ್ಬಳ್ಳಿ, 20) ದತ್ತಪ್ರಸಾದ ಸರ್ಜಿಕಲ್ ಕ್ಲಿನೀಕ್, ಬ್ರಾಡವೇ, ಹುಬ್ಬಳ್ಳಿ, 21) ಅರವಿಂದ ಜನರಲ್ ಹಾಸ್ಪಿಟಲ್, ನೀಲಜಿನ್ ರೋಡ್, ಹುಬ್ಬಳ್ಳಿ, 22) ಬಂಡಿವಾಡಬೇಸ್ ನರ್ಸಿಂಗ್ ಹೋಮ್, ಹುಬ್ಬಳ್ಳಿ, 23) ವಿವೇಕಾನಂದ ಜನರಲ್ ಹಾಸ್ಪಿಟಲ್, ಕ್ಲಬ್‌ರೋಡ, ಹುಬ್ಬಳ್ಳಿ, 24) ಡಾ. ಕಬಾಡಿ ನರ್ಸಿಂಗ್ ಹೋಮ್, ಹುಬ್ಬಳ್ಳಿ, 25) ಡಾ. ಕೆ.ಹೆಚ್. ಜಿತೂರಿ ನರ್ಸಿಂಗ್ ಹೋಮ್, ದಾಜಿಬಾನಪೇಟೆ, ಹುಬ್ಬಳ್ಳಿ, 26) ಡಾ. ಕೊಣ್ಣೂರ ನರ್ಸಿಂಗ್ ಹೋಮ್, ಹುಬ್ಬಳ್ಳಿ, 27) ಡಾ. ಹುಯಲಗೋಳ ಸರ್ಜಿಕಲ್ ಸೆಂಟರ್, ಪಿಂಟೋ ರೋಡ್, ಹುಬ್ಬಳ್ಳಿ 28) ಕರ್ನಾಟಕ ನರ್ಸಿಂಗ್ ಹೋಮ್ ಹೊಸೂರ, ಹುಬ್ಬಳ್ಳಿ, 29) ಸಿಟಿ ಕ್ಲೀನಿಕ್, ಹುಬ್ಬಳ್ಳಿ, 30) ಹಿರೇಮಠ ಕ್ಲಿನಿಕ್, ಹುಬ್ಬಳ್ಳಿ, 31) ಡಾ. ಮಹಾಬಲಶೆಟ್ಟಿ ನರ್ಸಿಂಗ್ ಹೋಮ್, ಹುಬ್ಬಳ್ಳಿ, 32) ಡಾ. ಪುಷ್ಪಾ ಜೋಶಿ, ಪಿ.ಬಿ. ರೋಡ, ಹುಬ್ಬಳ್ಳಿ, 33) ಡಾ. ಡಿ.ಆರ್. ಜಕರೆಡ್ಡಿ ನರ್ಸಿಂಗ್ ಹೋಮ್, ಹುಬ್ಬಳ್ಳಿ, 34) ದೀನಬಂಧು ಜೆ. ಹಳ್ಳಿಕೇರಿ ನರ್ಸಿಂಗ್ ಹೋಮ್, ಕೇಶ್ವಾಪೂರ, ಹುಬ್ಬಳ್ಳಿ, 35) ಡಾ.ಆರ್.ಎನ್. ಗೋಕಾವಿ ನರ್ಸಿಂಗ್ ಹೋಮ್, ಹುಬ್ಬಳ್ಳಿ, 36) ಡಾ. ಆರ್.ಬಿ. ಪಾಟೀಲ ನರ್ಸಿಂಗ್ ಹೋಮ್, ಹುಬ್ಬಳ್ಳಿ, 37) ಡಾ. ಗಲಗಲಿ ನರ್ಸಿಂಗ್ ಹೋಮ್, ಹುಬ್ಬಳ್ಳಿ, 38) ಡಾ. ವಿದ್ಯಾ ವಿಶ್ವಾಸ್, ಮೂರುಸಾವಿರಮಠ, ಹುಬ್ಬಳ್ಳಿ, 39) ಡಾ. ವಿ.ಹೆಚ್. ಕಲಬುರ್ಗಿ ಸರ್ಜಿಕಲ್ ಕ್ಲೀನಿಕ್, ಹಾವೇರಿ, 40) ಅಶ್ವಿನಿ ಹಾಸ್ಪಟಲ್, ಅಶ್ವಿನಿನಗರ, ಹಾವೇರಿ, 41) ಡಾ. ದೇವಧರ ಹಾಸ್ಪಿಟಲ್, ಹಾವೇರಿ, 42) ಡಾ. ಮೆಲೋಡಿ ಕ್ಲೀನಿಕ ಮೇಟರ್ನಿಟಿ ಹೋಮ್, ಪಿ ಹೆಚ್ ರೋಡ, ಅಕ್ಕಿಆಲೂರ, 43) ಡಾ. ಹುಂಬರವಾಡಿ ನರ್ಸಿಂಗ್ ಹೋಮ್, ಗದಗ, 44) ಡಾ. ಆಲೂರ ನರ್ಸಿಂಗ್ ಹೋಮ, ಗದಗ, 45) ಡಾ. ಕುಲಕರ್ಣಿ ಮೇಟರ್ನಿಟಿ ಹೋಮ್, ಗದಗ, 46) ಡಾ.ವಿ.ಡಿ. ಚಾಫೇಕರ ಮಾತೃ ನರ್ಸಿಂಗ್ ಹೋಮ್, ಗದಗ, 47) ಡಾ. ಹುಯಲಗೋಳ ನರ್ಸಿಂಗ್ ಹೋಮ, ಗದಗ, 48) ಕಸ್ತೂರ್‌ಬಾ ನರ್ಸಿಂಗ್ ಹೋಮ್, ಗದಗ, 49) ಕುಲಕರ್ಣಿ ನರ್ಸಿಂಗ್ ಹೋಮ್, ಗದಗ-ಬೆಟಗೇರಿ,

50) ಡಾ. ಸಜ್ಜನರ ನರ್ಸಿಂಗ್ ಹೋಮ್, ಗದಗ, 51) ಕಾಶಿಬಾಯಿ ಮೇಟರ್ನಿಟಿ ಅಂಡ್ ನರ್ಸಿಂಗ್ ಹೋಮ್, ಗದಗ, 52) ಸಿ.ಡಿ. ಹಾಸ್ಪಿಟಲ್, ಗದಗ-ಬೆಟಗೇರಿ, 53) ತಾವರಗೇರಿ ನರ್ಸಿಂಗ್ ಹೋಮ್, ಧಾರವಾಡ, 54) ಡಾ. ರಾಮನಗೌಡ ನರ್ಸಿಂಗ್ ಹೋಮ್, ಧಾರವಾಡ, 55) ಸಂಜೀವಿನಿ ನರ್ಸಿಂಗ್ ಹೋಮ್, ರಾಣೆಬೆನ್ನೂರ 56) ಸಿದ್ದೇಶ್ವರ ನರ್ಸಿಂಗ್ ಹೋಮ್, ಬೆಳಗಾವಗಲ್ಲಿ, ಹುಬ್ಬಳ್ಳಿ, 57) ಡಾ. ಬಸವರಾಜ ತೆಲಗಾರ ನರ್ಸಿಂಗ್ ಹೋಮ್, ರಾಣೆಬೆನ್ನೂರ ಮತ್ತು 58) ಡಾ. ರಂಜೀನಾ ನಾಯಕ, ಪ್ರಾಯವೇಟ್ ನರ್ಸಿಂಗ್ ಹೋಮ್, ರಾಣೆಬೆನ್ನೂರು.

### ಇ.ಎಸ್.ಐ. ದವಾಖಾನೆಗಳು

'1948 ರ ನೌಕರರ ರಾಜ್ಯ ವಿಮಾ ಯೋಜನೆಯ ಶಾಸನ ಹಾಗೂ ಸಂಬಂಧಪಟ್ಟ ಅಧಿನಿಯಮಗಳ ಪ್ರಕಾರ ರಾಜ್ಯದಲ್ಲಿ 1958 ರಲ್ಲಿ ನೌಕರರ ರಾಜ್ಯ ವಿಮಾ ಯೋಜನೆ ಜಾರಿಗೆ ಬಂತು. ಇತ್ತೀಚಿಗೆ ತಿದ್ದುಪಡಿಯಾದ ಶಾಸನ ಪ್ರಕಾರ ಹಂಗಾಮೇತರ ಕೆಲಸಗಾರರು ಹೋಟೆಲ್, ಸಿನಿಮಾ ಮಂದಿರ, ರಸ್ತೆ ಸಾರಿಗೆಗಳು ಇತ್ಯಾದಿ ಇತರ ಕ್ಷೇತ್ರದ ನೌಕರರು ಈ ಯೋಜನೆ ವ್ಯಾಪ್ತಿಗೆ ಸೇರಿದ್ದಾರೆ. ಸಾಮಾಜಿಕ ಭದ್ರತಾ ವ್ಯವಸ್ಥೆಯಾಗಿ ಜಾರಿಗೆ ಬಂದಿರುವ ನೌಕರರ ರಾಜ್ಯ ವಿಮಾ ಯೋಜನೆಯು ಕೇಂದ್ರ ಕಾರ್ಮಿಕರ ಸಚಿವಾಲಯದ ಆಡಳಿತ ನಿಯಂತ್ರಣಕ್ಕೊಳಪಟ್ಟಿದೆ. ಈ ಯೋಜನೆಯಡಿಯಲ್ಲಿ ಕಾಯಿಲೆ, ಗರ್ಭಧಾರಣೆ, ದೈಹಿಕ ಅಸಾಮರ್ಥ್ಯಗಳ ಸಂದರ್ಭದಲ್ಲಿ ನೌಕರರಿಗೆ ವೇತನ ನಷ್ಟವಾಗುವುದರ ವಿರುದ್ಧ ರಕ್ಷಣೆ ಒದಗಿಸಲು ಮತ್ತು ವಿಮೆಮಾಡಲ್ಪಟ್ಟ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ವೈದ್ಯಕೀಯ ರಕ್ಷಣೆ ನೀಡಲು ಅವಕಾಶವಿದೆ. ನೌಕರರ ರಾಜ್ಯ ವಿಮಾ ಯೋಜನೆಯಿಂದ ವೈದ್ಯಕೀಯ ಸೇವೆ, ಕಾಯಿಲೆ, ಪ್ರಸೂತಿ, ಅಸಾಮರ್ಥ್ಯ, ಅವಲಂಬನೆ ಹಾಗೂ ಅಂತ್ಯ ಸಂಸ್ಕಾರಗಳಿಗೆ ಸಂಬಂಧಿಸಿದಂತೆ ನಗದು ರೂಪದ ಪರಿಹಾರ ಮುಂತಾದ ಪ್ರಯೋಜನಗಳು ದೊರೆಯುತ್ತವೆ. ಧಾರವಾಡ ಜಿಲ್ಲೆಯಲ್ಲಿ 1992-93 ರಲ್ಲಿ ಒಂದು ಇ.ಎಸ್.ಐ. ಆಸ್ಪತ್ರೆ, 7 ಪೂರ್ಣಾವಧಿಯ ಇ.ಎಸ್.ಐ. ದವಾಖಾನೆಗಳು, 2 ಅಲ್ಪಾವಧಿಯ ಇ.ಎಸ್.ಐ. ದವಾಖಾನೆಗಳು ಹಾಗು ಒಂದು ಎಂಪ್ಲಾಯರ್ ಫೆಸಿಲಿಟಿ ಔಷಧಾಲಯಗಳು ಇವೆ.

### ಉಲ್ಲೇಖನೀಯ ಖಾಸಗಿ ವೈದ್ಯಕೀಯ ಸೇವೆ

ಕೆಲವು ಗಣ್ಯವೈದ್ಯರು ಅಥವಾ ನಾಡಿವೈದ್ಯರು ಜಿಲ್ಲೆಯಲ್ಲಿ ಉಲ್ಲೇಖನೀಯ ಸಾಧನೆ ಮಾಡಿದ್ದಾರೆ.

ವಿಶೇಷ ವೈದ್ಯಕೀಯ ಸೇವೆಗಳನ್ನು ಗ್ರಾಮೀಣ ಜನರ ಮನೆಬಾಗಿಲಿಗೆ ಒಯ್ಯುವ ಪರಿಶ್ರಮವನ್ನು ಕೆನರಾ ಚಾರಿಟೆಬಲ ಸೊಸೈಟಿ ಹಾಗೂ ಪ್ರಭು ಸೇವಾ ಸಂಘ ಹುಬ್ಬಳ್ಳಿ (ಡಾ. ಎಸ್.ಎಂ. ಪ್ರಭು ಅವರ ನೇತೃತ್ವದಲ್ಲಿ) ಇವು ನಡೆಸಿವೆ. ಈ ಸಂಸ್ಥೆಗಳು ಸ್ಥಳೀಯ ಐ.ಎಂ.ಎ. (ಇಂಡಿಯನ್ ಮೆಡಿಕಲ್ ಅಸೋಸಿಯೇಶನ್)ದ ತಜ್ಞ ವೈದ್ಯರ ಸಹಕಾರ, ನಗರಸಭೆ, ಸ್ಥಳೀಯ ಸೇವಾ ಸಂಸ್ಥೆಗಳು, ಸರ್ಕಾರ ಹಾಗೂ ಜಿಲ್ಲಾ ಪರಿಷತ್ ಇವುಗಳಿಂದ ಪಡೆದ ಆರ್ಥಿಕ ಸಹಾಯ ಹಾಗೂ ಸಹಕಾರದೊಂದಿಗೆ ಸಾಗಿಸಿವೆ. ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಕೇಂದ್ರಗಳಲ್ಲಿ ಹಾಗೂ ಧಾರವಾಡ ಜಿಲ್ಲೆಯ ವೈದ್ಯಕೀಯ ಸೇವೆ ದುರ್ಲಭವಿರುವ ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಿ, ವಿಶೇಷ ವೈದ್ಯಕೀಯ ಚಿಕಿತ್ಸೆಗಳಾದ ಗ್ಯಾಸ್ಟ್ರೊಸ್ಕೋಪ್, ಎಂಡೋಸ್ಕೋಪ್, ಅಲ್ಟ್ರಾಸೌಂಡ, ಮುಂತಾದ ಸಾಧನಗಳನ್ನು ವಾಹನಗಳ ಮೂಲಕ ಹಳ್ಳಿಗಳಿಗೆ ಸಾಗಿಸಿ, ಹಳ್ಳಿಗರಿಗೆ ದೊರೆಯಲಾರದ ಆಧುನಿಕ ಚಿಕಿತ್ಸೆ, ತಪಾಸಣೆಗಳನ್ನು ದೊರೆಯುವಂತೆ ಮಾಡಲಾಗುತ್ತಿದೆ. ಕಷ್ಟಸಾಧ್ಯವಾದ ರೋಗ ವಿಧಾನ ಹಾಗೂ ಚಿಕಿತ್ಸೆಯನ್ನು ಹಳ್ಳಿಯ ಹಿಂದುಳಿದ ಜನ ಉಚಿತವಾಗಿ ಪಡೆದುಕೊಳ್ಳುತ್ತಿದ್ದಾರೆ. ಪ್ರಪ್ರಥಮವಾಗಿ ಕ್ಯಾನರಾ ಚಾರಿಟಬಲ್ ಸೊಸೈಟಿಯ ಮೂಲಕ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು 1965 ರಿಂದ ನಡೆಸಲಾಗುತ್ತಿದ್ದು, 50,000 ಕ್ಕೂ ಹೆಚ್ಚು ಜನ ಇದರ ಲಾಭ ಪಡೆದಿರುವರು. ಮೂಲವ್ಯಾಧಿ ಹಾಗೂ ಹೈಡ್ರೋಸಿಲ್ ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಸಂಸ್ಥೆ ನಡೆಸಿಕೊಡುತ್ತಿರುವುದು. ಐ.ಎಂ.ಎ., ರೋಟರಿ, ಲಯನ್ಸ್ ಮುಂತಾದ ಸಂಘಗಳ ಸಹಕಾರದಿಂದ ಅತೀ ಸೂಕ್ಷ್ಮವಾದ ಡೈಗ್ನಾಸ್ಟಿಕ್ ಫೈಬರ ಆಪ್ಟಿಕ್ ಗ್ಯಾಸ್ಟ್ರೊಸ್ಕೋಪ್ ಸಾಧನಗಳನ್ನು ಹಳ್ಳಿಗಳಿಗೆ ತೆಗೆದುಕೊಂಡು ಹೋಗಿ ಚಿಕಿತ್ಸೆ ನೀಡುತ್ತಿದ್ದು 1,300 ಕ್ಕೂ ಹೆಚ್ಚು ಸ್ಕೋಪಿಗಳನ್ನು 1986 ರಿಂದ ಈಚೆ ನಡೆಸಿದ್ದಾರೆ.

ತಜ್ಞ ನೇತ್ರ ವೈದ್ಯರಾದ ಡಾ|| ಎಂ.ಎಂ. ಜೋಷಿಯವರು ಹುಬ್ಬಳ್ಳಿಯಲ್ಲಿ ತಾವು 1967 ರಲ್ಲಿ ಪ್ರಾರಂಭಿಸಿದ 60 ಹಾಸಿಗೆಗಳ ನೇತ್ರ ಚಿಕಿತ್ಸಾಲಯದ ಮುಖ್ಯ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವರಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿಯ ಬಡ ಹಾಗೂ ದುರ್ಬಲ ವರ್ಗದ ಜನರಿಗಾಗಿ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳನ್ನು ದೀರ್ಘಕಾಲದಿಂದ ನಡೆಸಿಕೊಂಡು ಬಂದಿದ್ದಾರೆ.

ಗದಗ ತಾಲೂಕಿನ ಭದ್ರಾಪುರದಲ್ಲಿ ಪಾರಂಪರಿಕ ವಿಧಾನದ ಅಸ್ಥಿ ಚಿಕಿತ್ಸಕರು ಮುರಿದ ಮೂಳೆಗಳಿಗೆ ಕಟ್ಟುಹಾಕುವುದು ಹಾಗೂ ನಾಟಿ ವೈದ್ಯ ಚಿಕಿತ್ಸೆನೀಡಿ ಗುಣಪಡಿಸುವಲ್ಲಿ ಸಿದ್ಧ ಹಸ್ತರೆನಿಸಿಕೊಂಡಿದ್ದಾರೆ.

ಹಲವಾರು 'ದಂತಯಜ್ಞ'ಗಳನ್ನು ರಾಜ್ಯದಲ್ಲಿ ಹಾಗೂ ಹೊರಗೆ ಯಶಸ್ವಿಯಾಗಿ ನಡೆಸಿ ಜನರಿಗೆ ಹಲ್ಲುಗಳ ಆರೋಗ್ಯದ ಮಹತ್ವ ಹಾಗೂ ಹಲ್ಲಿನ ಆರೋಗ್ಯ ಕಾಪಾಡುವಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಪ್ರಚಾರ ಮಾಡಿದ ಡಾ|| ಪಿ.ವಿ. ಜಾಯದೇಯವರ ಪರಿಶ್ರಮ ಶ್ಲಾಘನೀಯ. ಇವರು ಹುಬ್ಬಳ್ಳಿಯವರಾಗಿದ್ದು ಸಾವಿರಾರು ದಂತ ರೋಗಿಗಳಿಗೆ ಚಿಕಿತ್ಸೆ ನೀಡುವುದರ ಜೊತೆಗೆ ಉಚಿತ ದಂತ ತಪಾಸಣೆ, ಚಿಕಿತ್ಸೆಗಳ ಶಿಬಿರಗಳನ್ನು ಏರ್ಪಡಿಸುತ್ತಿದ್ದರು. ಸಂಘ ಸಂಸ್ಥೆಗಳ ನೆರವು ಪಡೆದು ಇಂಥ ಆರೋಗ್ಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಸರ್ಕಾರವು ಅವರ ಸೇವೆಯನ್ನು ಪುರಸ್ಕರಿಸಿದೆ.

ಗದಗ ತಾಲೂಕಿನಲ್ಲಿ ಸರ್ವೆ ಸಾಮಾನ್ಯವಾಗಿ ಪದೇ ಪದೇ ಹರಡುವ ಕಾಮಾಲೆ ರೋಗ ಜನರನ್ನು ಧೃತಿಗೆಡಿಸುತ್ತಿದ್ದು ರೋಗ ಪೀಡಿತರಿಗೆ ಉಚಿತವಾಗಿ ನಾಟಿ ವೈದ್ಯಜ್ಞಾನದಿಂದ ಚಿಕಿತ್ಸೆ ನೀಡುವಲ್ಲಿ ಲಕ್ಕುಂಡಿಯ ಒಂದು ಕುಟುಂಬದವರು ಮಾಡುತ್ತಿರುವ ಜನಸೇವೆ ಮೆಚ್ಚುವಂಥದ್ದು. ವಂಶಪಾರಂಪರ್ಯವಾಗಿ ಬಂದ ಗಿಡಮೂಲಿಕೆಗಳ ಜ್ಞಾನದಿಂದ ಪಡೆದ ಚಿಕಿತ್ಸಾ ವಿಧಾನದಿಂದ ಇವರು ಸಾವಿರಾರು ಕಾಮಾಲೆ ರೋಗಿಗಳಿಗೆ ಚಿಕಿತ್ಸೆ ನೀಡಿದ್ದಾರೆ. ಇವರ ಈ ಸೇವಾ ಕಾರ್ಯದಲ್ಲಿ ಸಂಘ ಸಂಸ್ಥೆಗಳೂ ಹಾಗೂ ಹಳ್ಳಿಯ ಮುಖ್ಯಸ್ಥರೂ ತಮ್ಮ ಸಹಾಯ ಹಸ್ತವನ್ನು ನೀಡುತ್ತಿದ್ದು ನಿರಂತರವಾಗಿ ಇವರ ಸೇವೆ ಜನರಿಗೆ ದೊರೆಯುತ್ತಿದೆ.

ಗದಗ ತಾಲೂಕಿನ ಸೊರಟೂರು ಗ್ರಾಮದ ಆಯುರ್ವೇದ ವೈದ್ಯರಾದ ಡಾ. ಬಿ.ಆರ್. ಇನಾಂದಾರರು ಅರ್ಧಾಂಗವಾಯು (ಪಾರ್ಶ್ವವಾಯು) ಮತ್ತು ಪೋಲಿಯೋ ಪೀಡಿತರಿಗೆ 1960 ರಿಂದ ಚಿಕಿತ್ಸೆ ನೀಡುತ್ತಿದ್ದು ಸುತ್ತು ಮುತ್ತಲಿನ ಹಳ್ಳಿಗಳು ಹಾಗೂ ಮಹಾರಾಷ್ಟ್ರ ಆಂಧ್ರ ಪ್ರದೇಶಗಳಿಂದಲೂ ಜನ ಸೊರಟೂರಿಗೆ ಬಂದು ಉಪಚಾರ ಪಡೆಯುತ್ತಿದ್ದಾರೆ. ನೂರಾರು ಜನ ಇವರಿಂದ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಇವರ ಸೇವೆಗೆ ಮೆಚ್ಚಿ ಸಹಾಯ ಹಸ್ತ ನೀಡಲು ಸ್ಥಳೀಯ ಸೇವಾ ಸಂಸ್ಥೆಗಳು ಮುಂದಾಗಿವೆ.

ಗಂಟಲಿನ ತೊಂದರೆಯಿಂದ ಧ್ವನಿ ಕಳೆದುಕೊಂಡು ನಿರಾಶೆಯಿಂದ ಬಂದ ಕರ್ನಾಟಕದ ಹೆಸರಾಂತ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಇವರಿಗೆ ಸೂಕ್ತ ಶಸ್ತ್ರ ಚಿಕಿತ್ಸೆ ನೀಡಿ ಅವರ ಧ್ವನಿ ಪುನಃ ಬರುವಂತೆ ಮಾಡಿದ ಕರ್ನಾಟಕದಲ್ಲಿಯೇ ಸರ್ಜನ್ ಅರ್ಹತೆ ಪಡೆದ ಮೊದಲಿಗರಲ್ಲಿ ಒಬ್ಬರಾದ ಹುಬ್ಬಳ್ಳಿಯ ಡಾ. ಜಿ.ವಿ. ಜೋಶಿಯವರು ಒಬ್ಬ ಬಹುಮುಖ ಪ್ರತಿಭೆಯುಳ್ಳ ವೈದ್ಯರು. ಸಹಾಯ ಯಾಚಿಸಿ ಬಂದ ಹಲವಾರು ಬಡ ರೋಗಿಗಳಿಗೆ ಉಚಿತ ಉಪಚಾರ ನೀಡಿದ ಕೀರ್ತಿ ಅವರದು.

## ಗ್ರಾಮೀಣ ಆರೋಗ್ಯ ಕಾರ್ಯಕ್ರಮ

ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸುವುದು, ವೈದ್ಯಕೀಯ ತಪಾಸಣಾ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸುವುದು ಹಾಗೂ ಸೇವೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು, ಪ್ರಸೂತಿ, ಶಿಶು ಆರೋಗ್ಯ ಕಾಪಾಡುವುದು, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಮುನ್ನೆಚ್ಚರಿಕೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು, ಕಡಿಮೆ ಸಂಪನ್ಮೂಲ ಮತ್ತು ವೈದ್ಯಕೀಯ ಸೇವೆಗಳ ಗುಣಮಟ್ಟದ ಕೊರತೆ ತುಂಬಿಕೊಡುವುದು ಹಾಗೂ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜನಪ್ರಿಯಗೊಳಿಸುವ ಮುಂತಾದ ಉದ್ದೇಶಗಳನ್ನು ಸಾಕಾರಗೊಳಿಸಲು ಸರ್ಕಾರವು ಭಾರತ ಸರ್ಕಾರದ ಮಾರ್ಗದರ್ಶನದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಹಾಗೂ ಸಹಾಯಕ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದು ಹಲವು ಪ್ರಾಥಮಿಕ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿ ಅವುಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳೆಂದು ಕರೆದಿದೆ.

**ಸಮುದಾಯ ಆರೋಗ್ಯ ಕೇಂದ್ರಗಳು**

ಸಮುದಾಯ ಆರೋಗ್ಯ ಕೇಂದ್ರಗಳನ್ನು ಸಾಮಾನ್ಯವಾಗಿ ತಾಲೂಕು ಕೇಂದ್ರಗಳಲ್ಲಿ ಇಲ್ಲವೆ ಇತರ ಸ್ಥಳಗಳಲ್ಲಿ ಪ್ರಾರಂಭಿಸಲಾಗುತ್ತಿದ್ದು, ಪ್ರತೀ ಇಂಥ ಕೇಂದ್ರವನ್ನು ಸುಮಾರು ಒಂದು ಲಕ್ಷ ಜನಸಂಖ್ಯೆ ಅಥವಾ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೊಂದರಂತೆ ಸ್ಥಾಪಿಸಲಾಗುತ್ತಿದೆ. ಸಾಮಾನ್ಯವಾಗಿ 30 ರಿಂದ 50 ಹಾಸಿಗೆಗಳ ಸೌಲಭ್ಯವನ್ನು ಇವು ಹೊಂದಿರುತ್ತವೆ. ಆಯಾ ಪ್ರದೇಶಕ್ಕೆ ಒಳಪಡುವಂತೆ ಇರುವ ಎಲ್ಲ ದವಾಖಾನೆ\ಆರೋಗ್ಯ ಸಂಸ್ಥೆಗಳಿಗೆ ಮಾರ್ಗದರ್ಶನದ (ರೆಫರಲ್)ವಾಗಿ ಇದು ಕಾರ್ಯನಿರ್ವಹಿಸುವುದು. ತಜ್ಞ ವೈದ್ಯರ ಸೇವೆಯನ್ನು ಸಹ ಇದು ಒಳಗೊಂಡಿರುತ್ತದೆ. ಜಿಲ್ಲೆಯಲ್ಲಿ ಬ್ಯಾಡಗಿ, ಹಿರೇಕೆರೂರ, ಶಿಗ್ಗಾಂವಿ, ನರಗುಂದ, ಮುಂಡರಗಿ, ಬಂಕಾಪುರ, ಹಾನಗಲ್‌ಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳು ಇವೆ.

**ಸಮುದಾಯ ಆರೋಗ್ಯ ಕೇಂದ್ರ, ಬ್ಯಾಡಗಿ :** ಸಮುದಾಯ ಆರೋಗ್ಯ ಕೇಂದ್ರ ಬ್ಯಾಡಗಿಯು ಮೊದಲು ನಗರಸಭೆಯ ದವಾಖಾನೆಯಾಗಿ 1933 ರಲ್ಲಿ ಸ್ಥಾಪನೆಗೊಂಡಿತು. 1982 ರಲ್ಲಿ ಸರ್ಕಾರ ಇವರ ಆಡಳಿತ ವಹಿಸಿಕೊಂಡು ಸಮುದಾಯ ಆರೋಗ್ಯ ಕೇಂದ್ರವಾಗಿ ಮಂಜೂರಾತಿ ನೀಡಿತು. 30 ಹಾಸಿಗೆಗಳ ಸೌಲಭ್ಯ ಪಡೆದಿದೆ.

ಈ ಆರೋಗ್ಯ ಕೇಂದ್ರದಲ್ಲಿ 1990-91 ಮತ್ತು 1991-92 ರಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ ಕ್ರಮವಾಗಿ 27,810 ಮತ್ತು 31,770; ಒಳರೋಗಿಗಳ ಸಂಖ್ಯೆ 358 ಮತ್ತು 703; ಪ್ರಸೂತಿ ಚಿಕಿತ್ಸೆ 122 ಮತ್ತು 69; ಚಿಕಿತ್ಸೆ ಪಡೆಯುತ್ತಿದ್ದ ಕುಷ್ಠ ರೋಗಿಗಳು 153 ಮತ್ತು 115; ಚಿಕಿತ್ಸೆ ಪಡೆಯುತ್ತಿರುವ ಕ್ಷಯರೋಗಿಗಳು 27 ಮತ್ತು 26; ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ನಡೆಸಲ್ಪಟ್ಟ ಟ್ಯೂಬೆಕ್ಟಮಿ ಶಸ್ತ್ರ ಚಿಕಿತ್ಸೆಗಳು 195 ಮತ್ತು 251; ಉದರದರ್ಶಕ ಚಿಕಿತ್ಸೆಗಳು 205 ಮತ್ತು 162; ವಂಕಿಧಾರಣೆಗಳು 72 ಮತ್ತು 58; ಹಾಗೂ ಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಕಾರ್ಯಕ್ರಮದಡಿ ನೀಡಿದ ರೋಗ ನಿರೋಧಕಗಳು ಡಿಪಿಟಿ 411 ಮತ್ತು 882 ಡಿಟಿ 375 ಮತ್ತು 521, ಟಿಟಿ 441 ಮತ್ತು 457 ಪೋಲಿಯೋ 411 ಮತ್ತು 883, ಆಗಿರುತ್ತದೆ.

**ಸಮುದಾಯ ಆರೋಗ್ಯ ಕೇಂದ್ರ, ಶಿಗ್ಗಾಂವಿ :** ಸಮುದಾಯ ಆರೋಗ್ಯಕೇಂದ್ರ ಶಿಗ್ಗಾಂವಿ 1940 ರಷ್ಟು ಪೂರ್ವದಲ್ಲಿಯೇ ಹೆರಿಗೆ ಆಸ್ಪತ್ರೆಯಾಗಿ ಪ್ರಾರಂಭಗೊಂಡು ಮುಂದೆ 1976 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತನೆಯಾಯಿತು. ನಂತರ 1991 ರಿಂದ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಲ್ಪಟ್ಟಿತು. 30 ಹಾಸಿಗೆಗಳ ಸೌಲಭ್ಯ ಹೊಂದಿದ ಈ ಆಸ್ಪತ್ರೆಯು ತಜ್ಞ ವೈದ್ಯರ ಸೇವೆಯನ್ನು ಒದಗಿಸುತ್ತದೆ. ಇದರ ಅಧೀನದಲ್ಲಿ 8 ಉಪ ಕೇಂದ್ರಗಳು ಇವೆ. 1991-92, ಹಾಗೂ 1993-94 ನೇ ಸಾಲಿನಲ್ಲಿ ಈ ಕೇಂದ್ರದಲ್ಲಿ ಕ್ರಮವಾಗಿ ಚಿಕಿತ್ಸೆ ಪಡೆದ ಹೊರ ರೋಗಿಗಳು 23,540 ಮತ್ತು 23,515; ಒಳರೋಗಿಗಳು 248 ಮತ್ತು 236; ಪ್ರಸೂತಿ ಚಿಕಿತ್ಸೆ 811 ಮತ್ತು 966; ನಡೆಸಲ್ಪಟ್ಟ ಶಸ್ತ್ರ ಚಿಕಿತ್ಸೆಗಳು 8 ಮತ್ತು 20; ಚಿಕಿತ್ಸೆ ಪಡೆಯುತ್ತಿರುವ ಕ್ಷಯ ರೋಗಿಗಳು 30 ಮತ್ತು 25; ಕುಷ್ಠ ರೋಗಿಗಳು 14 ಮತ್ತು 13; ಸಂತಾನಹರಣ ಶಸ್ತ್ರ ಚಿಕಿತ್ಸೆಗಳು 274 ಮತ್ತು 341; ವಂಕಿಧಾರಣೆಗಳು 168 ಮತ್ತು 240; ತಾಯಂದಿರ ಹಾಗೂ ಮಕ್ಕಳ ಆರೋಗ್ಯಕಾರ್ಯಕ್ರಮದಡಿಯಲ್ಲಿ ನೀಡಿದ ರೋಗ ನಿರೋಧಕಗಳು ಡಿಪಿಟಿ 861 ಹಾಗೂ 904; ಡಿಟಿ 1121; ಟಿಟಿ 921 ಹಾಗೂ 999; ಹಾಗೂ ಪೋಲಿಯೋ ನಿರೋಧಕ 861 ಮತ್ತು 904 ಆಗಿರುತ್ತದೆ.

**ಸಮುದಾಯ ಆರೋಗ್ಯ ಕೇಂದ್ರ, ಹಿರೇಕೆರೂರ :** ಸಮುದಾಯ ಆರೋಗ್ಯ ಕೇಂದ್ರ ಹಿರೇಕೆರೂರು 1905 ರಲ್ಲಿ ಪ್ರಾರಂಭಗೊಂಡು ಮುಂದೆ 1965 ರಲ್ಲಿ ಹೆರಿಗೆ ಆಸ್ಪತ್ರೆಯಾಗಿ ಹಾಗೂ 1989 ರಿಂದ ಈಗಿರುವಂತೆ ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತನೆಗೊಂಡಿತು. 24 ಹಾಸಿಗೆಗಳ ಸೌಲಭ್ಯ ಪಡೆದ ಈ ಆಸ್ಪತ್ರೆ ಒಬ್ಬ ವೈದ್ಯಾಧಿಕಾರಿ ಹಾಗೂ ಒಬ್ಬ ಮಹಿಳಾ ವೈದ್ಯರನ್ನು ಮತ್ತು ಇತರ ಸಿಬ್ಬಂದಿ ಹೊಂದಿದೆ. ಇದರ ಅಧೀನದಲ್ಲಿ ನಾಲ್ಕು ಉಪಕೇಂದ್ರಗಳು ಇವೆ. ನೇತ್ರ ಪರೀಕ್ಷೆ ಹಾಗೂ ಚಿಕಿತ್ಸೆಗೆ ಇಲ್ಲಿ ಲಭ್ಯವಿದೆ. ಈ ಕೇಂದ್ರದಲ್ಲಿ 1990-91, ಮತ್ತು 1991-92 ರಲ್ಲಿ ಕ್ರಮವಾಗಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ 24,314 ಮತ್ತು 20,489; ಒಳರೋಗಿಗಳು 421 ಮತ್ತು 394; ನಡೆಸಲ್ಪಟ್ಟ ಪ್ರಸೂತಿ ಚಿಕಿತ್ಸೆ 315 ಮತ್ತು 250; ಸಂತಾನ

ಹರಣ ಶಸ್ತ್ರ ಚಿಕಿತ್ಸೆ 156 ಮತ್ತು 166; ವಂಕಿಧಾರಣೆಗಳು 55 ಮತ್ತು 77; ಚಿಕಿತ್ಸೆ ಪಡೆಯುತ್ತಿರುವ ಕ್ಷಯರೋಗಿಗಳು 23 ಮತ್ತು 24; ಕುಷ್ಠ ರೋಗಿಗಳು 12 ಮತ್ತು 18; ಮಹಿಳಾ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ನೀಡಿದ ನಿರೋಧಕಗಳು ಬಿಸಿಜಿ 164 ಮತ್ತು 202; ಡಿಪಿಟಿ 114 ಮತ್ತು 174; ಮಿಸಲ್ಸ್ 59 ಮತ್ತು 112, ಟಿಟಿ 227 ಮತ್ತು 142; ಪೋಲಿಯೋ 114 ಮತ್ತು 104 ಆಗಿವೆ. ಕೇಂದ್ರವು ತುರ್ತು ಚಿಕಿತ್ಸಾ ವಿಭಾಗವನ್ನು ಸಹ ಹೊಂದಿದೆ.

**ಸಮುದಾಯ ಆರೋಗ್ಯ ಕೇಂದ್ರ, ನರಗುಂದ** : ಸಮುದಾಯ ಆರೋಗ್ಯ ಕೇಂದ್ರ ನರಗುಂದವು 1986 ರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿದ್ದು 1993 ರಲ್ಲಿ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಲ್ಪಟ್ಟಿತು. ಈ ಕೇಂದ್ರವು 24 ಹಾಸಿಗೆಗಳ ಸೌಲಭ್ಯವನ್ನು ಪಡೆದಿದೆ. ಕೇಂದ್ರದಲ್ಲಿ 1991-92 ಮತ್ತು 1992-93 ನೇ ಸಾಲಿನಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ ಕ್ರಮವಾಗಿ 8,087 ಮತ್ತು 7,988; ಸಂತಾನಹರಣ ಶಸ್ತ್ರ ಚಿಕಿತ್ಸೆಗಳು 165 ಮತ್ತು 290; ವಂಕಿ ಧಾರಣೆಗಳು 114 ಮತ್ತು 206; ಪ್ರಸೂತಿ ಚಿಕಿತ್ಸೆ 118 ಮತ್ತು 44; ಲಸಿಕಾ ಕಾರ್ಯಕ್ರಮದಡಿಯಲ್ಲಿ ನೀಡಿದ ನಿರೋಧಕಗಳು ಬಿಸಿಜಿ 870 ಮತ್ತು 895; ಪೋಲಿಯೋ 870 ಮತ್ತು 895; ಡಿಪಿಟಿ 870 ಮತ್ತು 895; ಮೀಸಲ್ಸ್ 870 ಮತ್ತು 895; ಟಿಟಿ 930 ಮತ್ತು 960; ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು 44 ಮತ್ತು 22; ಕ್ಷಯ ರೋಗಿಗಳು ಸೊನ್ನೆ ಮತ್ತು 15 ಆಗಿದೆ. ಇದಕ್ಕೆ ನಾಲ್ಕು ಉಪ ಕೇಂದ್ರಗಳು ಅಧೀನವಾಗಿವೆ.

## ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಗ್ರಾಮಾಂತರ ಪ್ರದೇಶದಲ್ಲಿನ ಜನರ ಆರೋಗ್ಯ ಕಾರ್ಯಕ್ರಮಗಳ ಕೇಂದ್ರಗಳಾಗಿವೆ. ಇವು ವೈದ್ಯಕೀಯ ಚಿಕಿತ್ಸೆ, ರೋಗಗಳನ್ನು ತಡೆಗಟ್ಟುವಿಕೆ, ಸಾರ್ವಜನಿಕ ಆರೋಗ್ಯ ಸುಧಾರಣೆ ಹಾಗೂ ಆರೋಗ್ಯ ಮುನ್ನೆಚ್ಚರಿಕೆ ಕಾರ್ಯಕ್ರಮ ಮುಂತಾದ ಮೂಲಭೂತ ಸೇವೆಗಳನ್ನು ಒದಗಿಸುತ್ತಿವೆ. ರಾಷ್ಟ್ರೀಯ ಹಾಗೂ ರಾಜ್ಯ ಆರೋಗ್ಯ ಕಾರ್ಯಕ್ರಮಗಳಾದ ಮಲೇರಿಯಾ ನಿರ್ಮೂಲನೆ, ಕ್ಷಯ, ಕುಷ್ಠರೋಗಗಳ ನಿವಾರಣೆ, ರೋಗ ನಿರೋಧಕ ಲಸಿಕೆಗಳನ್ನು ಹಾಕುವುದು, ಕುಟುಂಬ ಕಲ್ಯಾಣ ಇವೇ ಮೊದಲಾದ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನಿರ್ವಹಿಸುವುದು. ಈ ಹಿಂದೆ ಎರಡು ರೀತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದವು. ಒಂದು ಭಾರತ ಸರ್ಕಾರದ ಮಾದರಿ ಹಾಗೂ ಮೈಸೂರು ಮಾದರಿ; 1957 ರಿಂದ ಈಚೆ ಭಾರತ ಸರ್ಕಾರದ ಮಾದರಿ ಕೇಂದ್ರಗಳು ಸ್ಥಾಪನೆ ಗೊಂಡವು. ಪ್ರತೀ ಆರೋಗ್ಯ ಕೇಂದ್ರವು ಸುಮಾರು 30,000 ಜನರ ಆರೋಗ್ಯ ಮತ್ತು ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸುತ್ತದೆ. ಪ್ರತೀ ಕೇಂದ್ರಕ್ಕೂ ಸರ್ಕಾರ ಪ್ರತಿ ವರ್ಷ 30,000 ರೂಪಾಯಿಗಳ ಔಷಧಿ ಒದಗಿಸುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಬ್ಬ ವೈದ್ಯಾಧಿಕಾರಿ, ನಾಲ್ಕು ಜನ ದಾದಿಯರು, ಒಬ್ಬ ಆರೋಗ್ಯ ಸಂದರ್ಶಕ ಒಬ್ಬ ಔಷಧಿ ವಿತರಕ, ಒಬ್ಬ ಕಿರಿಯ ಆರೋಗ್ಯ ಪರೀಕ್ಷಕ ಮತ್ತು ಸೇವಕ ಸಿಬ್ಬಂದಿ ಇರುತ್ತದೆ. ಕ್ರಮೇಣ ಆರೋಗ್ಯ ಕಾರ್ಯಕ್ರಮ ಹೆಚ್ಚಿದಂತೆಲ್ಲ ಸಿಬ್ಬಂದಿ ವರ್ಗ ಹಾಗೂ ವೈದ್ಯರ ಸಂಖ್ಯೆ ಹೆಚ್ಚಿತು. ಈಗ ಪ್ರತಿ ಆರೋಗ್ಯ ಕೇಂದ್ರದಲ್ಲಿ ಕನಿಷ್ಟ ಪಕ್ಷ ಇಬ್ಬರು ವೈದ್ಯಾಧಿಕಾರಿಗಳಿರುತ್ತಾರೆ; ಅವರಲ್ಲಿ ಒಬ್ಬರು ಮಹಿಳಾ ವೈದ್ಯಾಧಿಕಾರಿಗಳಾಗಿರುತ್ತಾರೆ. ಹಾಗೂ ಇವರ ಸಹಾಯಕ್ಕೆ ಔಷಧಿ ವಿತರಕರು, ಶುಶ್ರೂಷಕಿಯರು, ದಾದಿಯರು, ಮಹಿಳಾ ಆರೋಗ್ಯ ಸಂದರ್ಶಕರು, ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ಪ್ರಯೋಗ ಶಾಲೆಯ ತಂತ್ರಜ್ಞರು, ಆರೋಗ್ಯ ಶಿಕ್ಷಕರು, ಮಹಿಳಾ ಹಾಗೂ ಪುರುಷ ವಿವಿಧೋದ್ದೇಶ ಆರೋಗ್ಯ ಕಾರ್ಯಕರ್ತರು ಇದ್ದಾರೆ. 1991-92 ರಲ್ಲಿ ಜಿಲ್ಲೆಯಲ್ಲಿನ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ 82 ಆಗಿದ್ದು ಅವುಗಳಲ್ಲಿ ಲಭ್ಯವಿರುವ ಹಾಸಿಗೆಗಳ ಸಂಖ್ಯೆ 584. ಅದರಂತೆ 1992-93 ಜಿಲ್ಲೆಯಲ್ಲಿನ ಇವುಗಳ ಸಂಖ್ಯೆ 85 ಹಾಗೂ 646 ಆಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಳಪಟ್ಟಂತೆ ಜಿಲ್ಲೆಯಲ್ಲಿ 600 ಉಪ ಕೇಂದ್ರಗಳು ಇವೆ.

ಭಾರತ ಸರ್ಕಾರದ ಮಾದರಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದೊರೆಯುವ ಪ್ರಮುಖ ಮೂಲ ಆರೋಗ್ಯ ಸೇವೆಗಳೆಂದರೆ 1) ಚಿಕಿತ್ಸಾ ಸೇವೆಗಳು, 2) ಮಲೇ ರಿಯಾ, ಕಾಲರಾ, ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳ ನಿಯಂತ್ರಣ,3) ಕುಟುಂಬ ಕಲ್ಯಾಣ, 4) ಪ್ರಸೂತಿ ಹಾಗು ಶಿಶು ಆರೋಗ್ಯ ಸೇವೆಗಳು, 5) ಆರೋಗ್ಯ ಶಿಕ್ಷಣ 6) ಶಾಲಾ ಆರೋಗ್ಯ ಸೇವೆಗಳು, 7) ಪರಿಸರ ನೈರ್ಮಲ್ಯ ಮತ್ತು 8) ಜನನ ಮರಣ ದಾಖಲೆ ಸಂಗ್ರಹ.

**ಕೋಷ್ಟಕ 15.4 : ಧಾರವಾಡ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೆಲವು ಸಾಮಾನ್ಯ ಮಾಹಿತಿಗಳ ಪಟ್ಟಿ**

| ಕ್ರಮ ಸಂಖ್ಯೆ | ಪ್ರಾಥಮಿಕ ಆರೋಗ್ಯ | ಸ್ಥಾಪಿತ ವರ್ಷ | ಹಾಸಿಗೆಗಳ ಸಂಖ್ಯೆ | ಉಪ ಕೇಂದ್ರಗಳು | ಹೊರ ರೋಗಿಗಳು | ಹೆರಿಗೆಗಳು | ಕುಟುಂಬ ಕಲ್ಯಾಣ | | ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ | | | | ಕ್ಷಯ ರೋಗಿಗಳು | ಕುಷ್ಠ ರೋಗಿಗಳು |
|---|---|---|---|---|---|---|---|---|---|---|---|---|---|---|
| | | | | | | | ಶಸ್ತ್ರ ಚಿಕಿತ್ಸೆಗಳು | ವಂಕಿ ಧಾರಣೆಗಳು | ಡಿಪಿಟಿ | ಡಿ ಮತ್ತು ಟಿ | ಟಿ.ಟಿ. ಗರ್ಭಿಣಿಯರಿಗೆ | ಪೋಲಿಯೋ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| **ಬ್ಯಾಡಗಿ ತಾ:** | | | | | | | | | | | | | | |
| 1 | ಶಂಕ್ರಿಪುರ | 1988-89 | 6 | 8 | | 538 | 241 | 191 | 725 | 617 | 909 | 734 | 5 | 12 |
| 2 | ಕಾಗಿನೆಲ್ಲಿ | 1964 | 6 | 9 | 4,610 | 558 | 348 | 245 | 1,021 | 1,050 | 1,166 | 1,021 | 9 | 30 |
| 3 | ಚಿಕ್ಕಬಾಸೂರ | 1980 | 12 | 9 | 23,739 | 549 | 283 | 173 | 748 | 785 | 962 | 748 | 1 | 14 |
| 4 | ಕದರಮಂಡಲಗಿ | 1992 | 6 | 4 | 2,650 | 279 | 131 | 84 | 368 | 412 | 439 | 366 | - | 5 |
| **ಧಾರವಾಡ ತಾ:** | | | | | | | | | | | | | | |
| 5 | ಅಳ್ನಾವರ | 1965-66 | 6 | 10 | | 731 | 260 | 247 | 1,101 | 917 | 1,266 | 1,101 | 7 | 34 |
| 6 | ಮುಗದ | 1991-92 | 6 | 7 | 1,325 | 584 | 230 | 175 | 639 | 710 | 980 | 639 | - | 5 |
| 7 | ಉಪ್ಪಿನ ಬೆಟಗೇರಿ | 1981-82 | 6 | 6 | | 586 | 235 | 177 | 791 | 790 | 965 | 791 | 9 | 21 |
| 8 | ಗರಗ | 1955 | 6 | 7 | 17,324 | 615 | 266 | 213 | 772 | 769 | 973 | 772 | 4 | 11 |
| 9 | ಅಮ್ಮಿನಭಾವಿ | 1982 | 6 | 7 | 9,265 | 564 | 243 | 176 | 737 | 1,102 | 914 | 737 | 8 | 4 |
| 10 | ಹೆಬ್ಬಳ್ಳಿ | 1992 | 6 | 7 | 8,780 | 498 | 229 | 149 | 745 | 1,066 | 934 | 745 | 4 | 13 |
| **ಗದಗ ತಾ:** | | | | | | | | | | | | | | |
| 11 | ಮುಳಗುಂದ | 1962 | 6 | 17 | 9,285 | 452 | 334 | 1,553 | 1,480 | 1,848 | 1,558 | 42 | 45 | |
| 12 | ಲಕ್ಕುಂಡಿ | 1957 | 6 | 9 | 14,337 | 1,249 | 322 | 241 | 986 | 1,115 | 1,150 | 986 | 7 | 21 |
| 13 | ಹೊಂಬಳ | 1989-90 | 6 | 7 | 2,049 | 573 | 216 | 157 | 850 | 703 | 752 | 658 | - | 10 |
| 14 | ಕುರ್ತಕೋಟಿ | 1988-89 | 6 | 8 | 13,287 | 534 | 277 | 189 | 858 | 930 | 1,066 | 877 | 3 | 13 |
| **ಹಾನಗಲ್ ತಾ:** | | | | | | | | | | | | | | |
| 15 | ಹಾನಗಲ್ | 1965-66 | 30 | 8 | | 706 | 162 | 153 | 513 | 544 | 649 | 513 | 38 | 7 |
| 16 | ತಿಳವಳ್ಳಿ | 1980 | 6 | 6 | 4,794 | 570 | 210 | 132 | 633 | 611 | 817 | 633 | 13 | 8 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
|---|---|---|---|---|---|---|---|---|---|---|---|---|---|---|
| 17 | ಕುಸನೂರ | 1989-90 | 6 | 6 | | 539 | 170 | 76 | 650 | 662 | 803 | 650 | - | 2 |
| 18 | ಆಡೂರು | 1987-88 | 6 | 7 | 11,037 | 678 | 239 | 168 | 650 | 688 | 836 | 713 | 10 | 4 |
| 19 | ಶೇಷಗಿರಿ | 1988-89 | 6 | 6 | 2,772 | 479 | 165 | 138 | 673 | 727 | 825 | 673 | - | 23 |
| 20 | ಬೆಳಗಾಲಪೇಟೆ | 1989-90 | 6 | 8 | 11,923 | 658 | 234 | 172 | 636 | 799 | 814 | 631 | - | 17 |
| 21 | ಬೊಮ್ಮನಹಳ್ಳಿ | 1992 | 6 | 6 | 16,324 | 481 | 177 | 131 | 570 | 506 | 750 | 570 | 1 | 17 |
| 22 | ಬೈಚವಳ್ಳಿ | 1993 | 6 | 8 | | 658 | 265 | 121 | 658 | 675 | 853 | 658 | 1 | 3 |
| ಹಾವೇರಿ ತಾ: | | | | | | | | | | | | | | |
| 23 | ಕಾಟೇನಹಳ್ಳಿ | 1964 | 6 | 7 | 5,694 | 528 | 263 | 211 | 768 | 671 | 827 | 769 | 2 | 20 |
| 24 | ಹಂದಿಗನೂರ | 1965-66 | 6 | 17 | | 1,010 | 507 | 351 | 1,684 | 1,677 | 2,051 | 1,684 | 4 | 54 |
| 25 | ಕಬ್ಬೂರು | 1970 | 6 | 7 | 5,665 | 631 | 279 | 193 | 690 | 753 | 812 | 719 | 5 | 25 |
| 26 | ದೇವಗಿರಿ | 1990 | 6 | 8 | 1418 | - | 238 | 173 | 654 | 579 | 797 | 654 | - | 24 |
| 27 | ಅಗಡಿ | 1991 | 6 | 6 | 1856 | - | 217 | 187 | 685 | 807 | 861 | 685 | - | 19 |
| ಹಿರೇಕೆರೂರು ತಾ: | | | | | | | | | | | | | | |
| 28 | ರಟ್ಟಿಹಳ್ಳಿ | 1985-86 | 6 | 10 | | 481 | 319 | 248 | 922 | 1,200 | 1,104 | 947 | 19 | 20 |
| 29 | ಕೋಡ | 1965 | 6 | 12 | 19,479 | 964 | 395 | 125 | 1,009 | 894 | 1,173 | 1,009 | 32 | 64 |
| 30 | ಚಿಕ್ಕೆರೂರ | 1984 | 6 | 10 | 11,516 | 849 | 390 | 250 | 1,031 | 1,030 | 1242 | 1,031 | 9 | 10 |
| 31 | ಹಂಸಭಾವಿ | 1989 | 6 | 8 | 5,805 | 488 | 248 | 166 | 637 | 687 | 792 | 637 | 4 | 24 |
| 32 | ಕುಡುಪಲಿ | 1992 | 6 | 3 | 1,876 | 614 | 121 | 77 | 311 | 310 | 376 | 319 | - | 4 |
| 33 | ಮಾಸೂರು | 1978 | 6 | 6 | 14,665 | 427 | 251 | 175 | 581 | 603 | 805 | 581 | 2 | 60 |
| 34 | ಕಡೂರ | 1991-92 | 6 | 3 | | 481 | 108 | 77 | 255 | 232 | 370 | 255 | 9 | 22 |
| ಹುಬ್ಬಳ್ಳಿ ತಾ: | | | | | | | | | | | | | | |
| 35 | ಬ್ಯಾಹಟ್ಟಿ | 1963 | 6 | 7 | 19,515 | 650 | 252 | 197 | 795 | 682 | 1,009 | 827 | 7 | 14 |
| 36 | ಇಂಗಳಹಳ್ಳಿ | 1985 | 6 | 9 | 7,965 | 412 | 201 | 163 | 643 | 663 | 757 | 645 | 15 | 12 |
| 37 | ಅರಳಿಕಟ್ಟಿ | 1988-89 | 6 | 8 | | 486 | 210 | 140 | 582 | 608 | 797 | 564 | - | 15 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
|---|---|---|---|---|---|---|---|---|---|---|---|---|---|---|
| 38 | ನೂಲ್ವಿ | 1992 | 6 | 10 | 5017 | 532 | 303 | 214 | 790 | 908 | 981 | 791 | 1 | 23 |
| ಕಲಘಟಗಿ ತಾ: | | | | | | | | | | | | | | |
| 39 | ಕಲಘಟಗಿ | 1965-66 | 30 | 10 | | 343 | 239 | 150 | 846 | 930 | 1,300 | 858 | 14 | 13 |
| 40 | ಮಿಶ್ರಿಕೋಟಿ | 1985-86 | 6 | 6 | | 280 | 173 | 150 | 606 | 684 | 798 | 642 | 1 | 9 |
| 41 | ಮುಕ್ಕಳ | 1988-89 | 6 | 7 | | 401 | 192 | 111 | 544 | 658 | 544 | 8 | 12 | |
| 42 | ಗಳಗಿಹುಲಕೊಪ್ಪ | 1992 | 6 | 5 | 2,638 | 186 | 173 | 166 | 724 | 658 | 832 | 724 | - | 19 |
| ಕುಂದಗೋಳ ತಾ: | | | | | | | | | | | | | | |
| 43 | ಕುಂದಗೋಳ | 1960 | 30 | 6 | 4,545 | 501 | 272 | 172 | 805 | 665 | 1,000 | 805 | 19 | 20 |
| 44 | ಗುಡಗೇರಿ | 1984-85 | 6 | 7 | _ | 560 | 269 | 182 | 745 | 879 | 875 | 745 | 8 | 19 |
| 45 | ಇಂಗಳಗಿ | 1988-89 | 6 | 6 | 5,900 | 643 | 195 | 145 | 509 | 650 | 793 | 509 | - | 10 |
| 46 | ಯಳವಾಲ | 1992 | 6 | 5 | 8,750 | 569 | 175 | _ | 783 | 957 | 805 | 783 | - | 6 |
| 47 | ಸಂಶಿ | 1989-90 | 6 | 6 | _ | 633 | 197 | 160 | 615 | 230 | 875 | 655 | - | 20 |
| ಮುಂಡರಗಿ ತಾ: | | | | | | | | | | | | | | |
| 48 | ಡಂಬಳ | 1954 | 6 | 11 | _ | 948 | 277 | 187 | 932 | 1,026 | 1,050 | 932 | 6 | 18 |
| 49 | ಬಾಗೇವಾಡಿ | 1988-89 | 6 | 8 | 292 | 828 | 216 | 176 | 687 | 905 | 872 | 715 | - | 33 |
| 50. | ಹಿರೇವಡ್ಡಟ್ಟಿ | 1986-87 | 6 | 9 | _ | 1,038 | 286 | 184 | 1,063 | 921 | 1,239 | 1,063 | _ | 20 |
| ನರಗುಂದ ತಾ: | | | | | | | | | | | | | | |
| 50 | ನರಗುಂದ | 1986 | 6 | 9 | 8,089 | 1127 | 293 | 193 | 772 | 745 | 850 | 772 | 11 | 11 |
| 51 | ಶಿರೋಳ | 1968 | 6 | 9 | 10,439 | 670 | 254 | 191 | 820 | 339 | 884 | 847 | 18 | 17 |
| ನವಲಗುಂದ ತಾ: | | | | | | | | | | | | | | |
| 52 | ಮೊರಬ | 1965-66 | 6 | 14 | | 1107 | 297 | 236 | 1,360 | 867 | 1,693 | 1360 | 7 | 18 |
| 53 | ಅಣ್ಣಿಗೇರಿ | 1968 | 6 | 8 | 17,019 | 991 | 365 | 290 | 1,033 | 1,340 | 1,506 | 1,033 | 10 | 19 |
| 54 | ಶಲವಡಿ | 1988 | 6 | 6 | 4,564 | 648 | 228 | 157 | 657 | 622 | 731 | 657 | - | 8 |
| 55 | ಅಳಗವಾಡಿ | 1988-89 | 6 | 7 | 9,067 | 327 | 301 | 227 | 787 | 752 | 1,065 | 787 | - | 14 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
|---|---|---|---|---|---|---|---|---|---|---|---|---|---|---|
| ರಾಣೆಬೆನ್ನೂರು ತಾ: | | | | | | | | | | | | | | |
| 56 | ಹೊನ್ನತ್ತಿ | 1963 | 6 | 10 | 14,608 | 762 | 286 | 204 | 796 | 913 | 976 | 837 | 6 | 19 |
| 57 | ಮಡ್ಲೇರಿ | 1985-86 | 6 | 8 | | 784 | 280 | 199 | 735 | 749 | 954 | 735 | 7 | 26 |
| 58 | ಕುಪ್ಪೇಲೂರು | 1954 | 6 | 7 | | 529 | 234 | 124 | 678 | 842 | 798 | 682 | 6 | 9 |
| 59 | ತುಮ್ಮಿನಕಟ್ಟಿ | 1988-89 | 6 | 4 | | - | 135 | 95 | 407 | 362 | 447 | 407 | 7 | 8 |
| 60 | ಹಲಗೇರಿ | 1990 | 6 | 4 | 5,720 | 631 | 203 | 187 | 705 | 778 | 930 | 705 | - | 9 |
| 61 | ಮಾಕನೂರ | 1989-90 | 6 | 9 | 9,827 | 735 | 303 | 141 | 382 | 311 | 1,154 | 762 | 5 | 22 |
| 62 | ದೇವರಗುಡ್ಡ | 1991 | 6 | 8 | 1,685 | 625 | 263 | 186 | 688 | 737 | 898 | 688 | 2 | 15 |
| ರೋಣ ತಾ: | | | | | | | | | | | | | | |
| 64 | ಹೊಳೆಆಲೂರ | 1965-66 | 6 | 9 | 12,295 | 853 | 281 | 212 | 969 | 303 | 1,111 | 956 | 11 | 18 |
| 65 | ಶಾಂತಗೇರಿ | 1988-89 | 6 | 7 | | 762 | 155 | 94 | 936 | 508 | 825 | 736 | - | 11 |
| 66 | ನಿಡಗುಂದಿ | 1981-82 | 6 | 11 | | 1,199 | 285 | 207 | 1,078 | 1,280 | 1,274 | 1,115 | 7 | 46 |
| 67 | ಬೆಳವಣಕಿ | 1954 | 6 | 10 | 2,924 | 864 | 275 | 228 | 1,058 | 1,045 | 1,202 | 1,058 | - | 18 |
| 68 | ನರೇಗಲ್ | 1988 | 6 | 7 | 16,665 | 564 | 119 | 85 | 426 | 433 | 495 | 426 | 4 | 13 |
| 69 | ಸೂಡಿ | 1984-85 | 6 | 6 | | 788 | 166 | 142 | 602 | 720 | 754 | 685 | - | 13 |
| 70 | ಅಬ್ಬಿಗೇರಿ | 1990-91 | 6 | 6 | | 722 | 241 | 128 | 715 | 570 | 826 | 715 | - | 24 |
| ಸವಣೂರು ತಾ: | | | | | | | | | | | | | | |
| 71 | ಹತ್ತಿಮತ್ತೂರ | 1974 | 6 | 9 | 10,105 | 1,690 | 266 | 187 | 730 | 849 | 960 | 730 | 16 | 24 |
| 72 | ತವರಮೆಳ್ಳಹಳ್ಳಿ | 1986-87 | 6 | 8 | 5,618 | 797 | 174 | 175 | 814 | 887 | 504 | 814 | 4 | 22 |
| 73 | ಯಲವಿಗಿ | 1988-89 | 6 | 10 | | 871 | 281 | 176 | 829 | 1,321 | 961 | 829 | 1 | 24 |
| 74 | ಕಾರಡಗಿ | 1992-93 | 6 | 4 | | - | - | - | - | - | 505 | - | - | 15 |
| ಶಿಗ್ಗಾಂವಿ ತಾ: | | | | | | | | | | | | | | |
| 75 | ಶಿಗ್ಗಾಂವಿ | 1976 | 30 | 8 | 23,540 | 741 | 341 | 240 | 904 | 1,254 | 1,150 | 904 | 25 | 13 |
| 76 | ತಡಸ | 1988 | 6 | 6 | 25,743 | 654 | 270 | 160 | 983 | 875 | 905 | 963 | 11 | 9 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
|---|---|---|---|---|---|---|---|---|---|---|---|---|---|---|
| 77 | ಹುಲಗೂರ | 1988-89 | 6 | 8 | | 720 | 243 | 134 | 730 | 266 | 945 | 730 | 5 | 10 |
| 78 | ಬಂಕಾಪುರ | 1965-66 | 30 | 4 | | 556 | 215 | 170 | 805 | 974 | 1034 | 805 | 9 | 7 |
| 79 | ಕೋಣನಕೇರಿ | 1989-90 | 6 | 7 | | 566 | 109 | 118 | 391 | 402 | 318 | 391 | - | 8 |
| 80 | ಚಂದಾಪುರ | 1992-93 | 6 | - | - | - | - | - | - | - | - | - | - | -2 |
| ಶಿರಹಟ್ಟಿ ತಾ: | | | | | | | | | | | | | | |
| 81 | ಶಿರಹಟ್ಟಿ | 1965 | 30 | 11 | 20,953 | 1088 | 405 | 228 | 1361 | 1228 | 1370 | 1361 | 24 | 42 |
| 82 | ಶಿಗ್ಲಿ | 1985-86 | 6 | 5 | 7,652 | 584 | 192 | 103 | 493 | 515 | 651 | 507 | 2 | 20 |
| 83 | ಸೂರಣಗಿ | 1984-85 | 6 | 7 | 18,952 | 867 | 268 | 134 | 597 | 606 | 780 | 603 | 21 | 33 |
| 84 | ಬೆಳ್ಳಟ್ಟಿ | 1988-89 | 6 | 6 | 18,422 | 849 | 175 | 73 | 567 | 354 | 770 | 567 | 12 | 31 |
| 85 | ಹೆಬ್ಬಾಳ | 1989-90 | 6 | 7 | | 632 | 160 | 102 | 564 | 706 | 826 | 561 | - | 14 |

* 1991-92ನೇ ಸಾಲಿನಲ್ಲಿದ್ದಂತೆ, ಡಿಫ್ತಿರಿಯಾ, ಪರ್ಟುಸಿಸ್ ಮತ್ತು ಟಿಟ್ಯಾನಸ್ ಲಸಿಕೆ

ಆಧಾರ : ಆಯಾ ಕೇಂದ್ರಗಳಿಂದ ಪಡೆದ ಮಾಹಿತಿ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಆರೋಗ್ಯ ಘಟಕಗಳ ಕಾರ್ಯಕ್ರಮವನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ವಿಶೇಷವಾಗಿ ರಾಷ್ಟ್ರೀಯ ಕಾರ್ಯಕ್ರಮಗಳ ಪರಿಣಾಮಕಾರಿ ನಿರ್ವಹಣೆಯಲ್ಲಿ ಸಮನ್ವಯಗೊಳಿಸುತ್ತವೆ. ಧಾರವಾಡ ಜಿಲ್ಲೆಯಲ್ಲಿ 23 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಭಾರತ ಸರ್ಕಾರದ ಮಾದರಿ (ಜಿ.ಐ.ಒ.ಪಿ.)ಯಲ್ಲಿ 1965-66 ಸ್ಥಾಪನೆಗೊಂಡಿದ್ದು ಉಳಿದವುಗಳು ಕನಿಷ್ಠ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಮಂಜೂರು ಪಡೆದವುಗಳಾಗಿವೆ. ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕ್ರಮವಾಗಿ 1981-82 ರಲ್ಲಿ 1, 1984-85 ರಲ್ಲಿ 2, 1985-86 ರಲ್ಲಿ 6, 1986-87 ರಲ್ಲಿ 3, 1987-88 ರಲ್ಲಿ 3, 1988-89 ರಲ್ಲಿ 17, 1989-90 ರಲ್ಲಿ 17, 1990-91 ರಲ್ಲಿ 4, 1991-92 ರಲ್ಲಿ 3, 1992-93 ರಲ್ಲಿ 3, 1993-94 ರಲ್ಲಿ 3 ಆಗಿವೆ. ಇವುಗಳಲ್ಲಿರುವ ಒಟ್ಟು ಹಾಸಿಗೆಗಳ ಸಂಖ್ಯೆ 660 ಆಗಿರುತ್ತದೆ.

1993-94 ರಲ್ಲಿ ಸರ್ಕಾರವು ಹುಯಿಲಗೋಳ, ಅತ್ತಿಗೇರಿ ಹಾಗೂ ಅರಳೇಶ್ವರಗಳಲ್ಲಿ ಹೊಸ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದೆ. ಜಿಲ್ಲೆಯಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೆಲವು ಸಾಮಾನ್ಯ ಮಾಹಿತಿಯನ್ನು ಕೋಷ್ಟಕ 15.4 ರಲ್ಲಿ ಕೊಟ್ಟಿದೆ.

## ಪ್ರಾಥಮಿಕ ಆರೋಗ್ಯ ಘಟಕಗಳು

ಜಿಲ್ಲೆಯಲ್ಲಿ ಈ ಹಿಂದೆ ಇದ್ದ ಗ್ರಾಮಾಂತರ ಔಷಧಾಲಯಗಳಾದ ಸಂಯೋಜಿತ ಆಸ್ಪತ್ರೆಗಳು ಹಾಗೂ ದವಾಖಾನೆಗಳು, ಸ್ಥಳೀಯ ನಿಧಿ ಔಷಧಾಲಯಗಳು, ತಾಲೂಕು ಬೋರ್ಡ್ ಔಷಧಾಲಯಗಳು, ಮುನ್ಸಿಪಲ್ ಔಷಧಾಲಯಗಳು, ಆಯುರ್ವೇದ, ಹೋಮಿಯೋಪಥಿ ಔಷಧಾಲಯಗಳು ಹಾಗೂ ಸರ್ಕಾರಿ ಚಿಕಿತ್ಸಾಲಯಗಳನ್ನು ಸರ್ಕಾರವು 1978 ರಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಎಂದು ಕರೆದಿದೆ. ಈ ಪ್ರಾಥಮಿಕ ಆರೋಗ್ಯ ಘಟಕಗಳು ಆರೋಗ್ಯ ಕೇಂದ್ರಗಳಂತೆ ವೈದ್ಯಕೀಯ ಚಿಕಿತ್ಸೆ ಸಾರ್ವಜನಿಕ ಆರೋಗ್ಯ ಸುಧಾರಣೆ ಕಾರ್ಯ ಜವಾಬ್ದಾರಿ ವಹಿಸುತ್ತವೆ. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ಸಾರ್ವಜನಿಕ ಆರೋಗ್ಯದ ಮುನ್ನೆಚ್ಚರಿಕೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತವೆ. ಈ ಘಟಕಗಳು ಸಾಮಾನ್ಯವಾಗಿ 15 ರಿಂದ 20 ಸಾವಿರ ಜನಸಂಖ್ಯೆಗೆ ಒಂದರಂತೆ ಇದ್ದು ವೈದ್ಯಕೀಯ ಸೇವೆ ಒದಗಿಸುತ್ತವೆ. ಪ್ರಾಥಮಿಕ ಆರೋಗ್ಯ ಘಟಕಗಳು ತಮ್ಮ ಪ್ರದೇಶದ ಆರೋಗ್ಯ ಕಾರ್ಯಕ್ರಮಗಳ ವರದಿಯನ್ನು ಸಂಬಂಧಪಟ್ಟ ಆರೋಗ್ಯ ಕೇಂದ್ರಗಳಿಗೆ ಕಳಿಸಿಕೊಡುತ್ತವೆ. ಪ್ರತೀ ಘಟಕಕ್ಕೆ ಒಬ್ಬ ವೈದ್ಯಾಧಿಕಾರಿ ಇದ್ದು ಅವರ ನೆರವಿಗೆ ಔಷಧ ವಿತರಕರು, ಶುಶ್ರೂಷಕಿಯರು, ದಾದಿಯರು ಹಾಗೂ ಸೇವಕ ವರ್ಗದವರು ಇರುತ್ತಾರೆ. ಇಲ್ಲಿ ಹೆರಿಗೆ ವಿಭಾಗವೂ ಇರುತ್ತದೆ. 1992-93 ರಲ್ಲಿ 34 ಆರೋಗ್ಯ ಘಟಕಗಳು ಇದ್ದು ಅವುಗಳಲ್ಲಿ ಒಟ್ಟು ಲಭ್ಯವಿರುವ ಹಾಸಿಗೆಗಳ ಸಂಖ್ಯೆ 55 ಆಗಿದೆ. 1991-92 ರಲ್ಲಿ ಇವುಗಳ ಸಂಖ್ಯೆ 35 ಆಗಿತ್ತು. ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ 33 ಪ್ರಾಥಮಿಕ ಆರೋಗ್ಯ ಘಟಕಗಳು ಇದ್ದು, ಅವುಗಳು ಯಾವುವೆಂದರೆ ಹುಬ್ಬಳ್ಳಿ ತಾಲೂಕಿನ ಕೋಳಿವಾಡ; ಕಲಘಟಗಿ ತಾಲೂಕಿನ ಸಂಗಮೇಶ್ವರ; ಹಾವೇರಿ ತಾಲೂಕಿನ ಹಾವನೂರು, ಗುತ್ತಲ, ದೇವಿಹೊಸೂರ ಮತ್ತು ಹೊಸರಿತ್ತಿ; ರಾಣೆಬೆನ್ನೂರು ತಾಲೂಕಿನ ಕಜ್ಜರಿ, ಕರೂರ; ಐರಣಿ, ಇಟಗಿ ಹಾಗೂ ಸುಣಕಲ್ ಬಿದರಿ; ಹಿರೇಕೆರೂರು ತಾಲೂಕಿನ ತಡಕನಹಳ್ಳಿ, ಹಳ್ಳೂರ, ಹೊಸವೀರಾಪುರ ಹಾಗೂ ಮೇದೂರ; ಗದಗ ತಾಲೂಕಿನ ಹುಲಕೋಟಿ, ಕದಡಿ ಮತ್ತು ಕಣವಿ; ನರಗುಂದ ತಾಲೂಕಿನ ಚಿಕ್ಕನರಗುಂದ; ರೋಣ ತಾಲೂಕಿನ ಸವಡಿ, ಗಜೇಂದ್ರಗಡ ಮತ್ತು ಮುಶಿಗೇರಿ; ಸವಣೂರು ತಾಲೂಕಿನ ಕಡಕೋಳ ಮತ್ತು ಕುಸುನೂರು; ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ; ಶಿಗ್ಗಾಂವಿ ತಾಲೂಕಿನ ಧುಂಡಶಿ ಮತ್ತು ಹಿರೇಬೆಂಡಿಗೇರಿ; ಕುಂದಗೋಳ ತಾಲೂಕಿನ ಬರದ್ವಾಡ ಮತ್ತು ಹಾನಗಲ್ ತಾಲೂಕಿನ ಬಮ್ಮನಹಳ್ಳಿ, ನರೇಗಲ್, ಶಿರಗೋಡ, ಕಲಕೇರಿ ಮತ್ತು ಅಕ್ಕಿ ಆಲೂರ ಆಗಿರುತ್ತವೆ.

## ಕುಟುಂಬ ಕಲ್ಯಾಣ

ಕ್ರಿ.ಶ. 2000 ವರ್ಷಕ್ಕೆ 'ಎಲ್ಲರಿಗೂ ಆರೋಗ್ಯ' ಎಂಬ ಘೋಷಣೆಯ ಅಡಿಯಲ್ಲಿ ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮವು ಸಾರ್ವಜನಿಕ ಆರೋಗ್ಯದ ಒಂದು ಅವಿಭಾಜ್ಯ ಅಂಗವಾಗಿ ಕಾರ್ಯರೂಪುಗೊಂಡು, ಎರಡು ಮಕ್ಕಳ ಮಿತಿ ಅನುಸರಿಸುವ ಮೂಲಕ ಕ್ರಿ.ಶ. 2001 ರ ಹೊತ್ತಿಗೆ ನಿವ್ವಳ ಸಂತಾನೋತ್ಪತ್ತಿಯನ್ನು ಒಂದಕ್ಕೆ ಇಳಿಸುವ ಗುರಿ ಹೊಂದಿದೆ. ಪ್ರಸ್ತುತ ಇರುವ ಜನನ ಪ್ರಮಾಣವನ್ನು 27.9 ರಿಂದ 21 ಕ್ಕೆ ಹಾಗೂ ಶಿಶು ಮರಣ ಪ್ರಮಾಣವನ್ನು 70 ರಿಂದ 60 ಕ್ಕೆ ಇಳಿಸುವ ಮತ್ತು ಅರ್ಹದಂಪತಿ ರಕ್ಷಣಾ ದರವನ್ನು 47.6 ರಿಂದ 60 ಕ್ಕೆ ಹೆಚ್ಚಿಸುವ ಧ್ಯೇಯವನ್ನು ಹೊಂದಿರುತ್ತದೆ.

ಪ್ರಥಮವಾಗಿ ಭಾರತದ ಕುಟುಂಬ ಯೋಜನಾ ಸಂಘ ಬೊಂಬಾಯಿಯಲ್ಲಿ 1949 ರಲ್ಲಿ ಸ್ಥಾಪಿತವಾಯಿತು. ಕುಟುಂಬ ಕಲ್ಯಾಣ ಕಾರ್ಯಕ್ರಮವು ಅಧಿಕೃತವಾಗಿ ಭಾರತದಲ್ಲಿ 1952 ರಲ್ಲಿ ರಚನೆಗೊಂಡು ಒಂದು ರಾಷ್ಟ್ರೀಯ ಮಹತ್ವದ ನೀತಿಯಾಗಿ ದೇಶವು ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಸಾಧಿಸುವ ಒಂದು ಉಪಯುಕ್ತ ಯೋಜನೆಯಾಗಿದೆ. ಇಡೀ ಜನ ಸಮುದಾಯಕ್ಕೆ ಸಾರ್ವತ್ರಿಕವಾಗಿ ಅನ್ವಯವಾಗುವಂಥ ಈ ಬೃಹತ್ ಪ್ರಮಾಣದ ಕುಟುಂಬ ಕಲ್ಯಾಣ ಕಾರ್ಯಕ್ರಮವು ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯರೂಪಕ್ಕೆ ಬಂದಿತು. ಜನನವನ್ನು ತಡೆಗಟ್ಟುವ ಉದ್ದೇಶದಿಂದಷ್ಟೇ ಅಲ್ಲದೆ ಅವರ ಜೀವನ ಮಟ್ಟವನ್ನು ಸುಧಾರಿಸುವ ಮಹತ್ವದ ಗುರಿಯನ್ನು ಈ ಯೋಜನೆ ಹೊಂದಿದೆ. ಈ ಕಾರ್ಯಕ್ರಮವು ಕುಟುಂಬ ಕಲ್ಯಾಣ ಮತ್ತು ತಾಯಿ ಮಕ್ಕಳ ಆರೋಗ್ಯ ಸೇವೆಗಳ ಮೂಲಕ ಆರೋಗ್ಯವಂತ ಸಮುದಾಯದ ತಳಹದಿಯ ಮೇಲೆ ಉತ್ತಮ ಜೀವನ, ಚಿಕ್ಕ ಕುಟುಂಬದ ಪ್ರಾಮುಖ್ಯತೆಗಳನ್ನು ಜನರಲ್ಲಿ ಬಿಂಬಿಸುವಂತೆ ತಿಳುವಳಿಕೆ ನೀಡುವುದು ಹಾಗೂ ಸ್ವಯಂಪ್ರೇರಣೆಯಿಂದ ಕುಟುಂಬ ಯೋಜನೆಯನ್ನು ಅಂಗೀಕರಿಸುವಂತೆ ಮಾಡುವುದು. ಆಸ್ಪತ್ರೆಗಳಿಗೆ ಜನರು ಬಂದು ಸೇವೆ ಪಡೆದುಕೊಳ್ಳುವಂತೆ ಹಾಗೂ ಗರ್ಭನಿರೋಧಕಗಳ ಬಗೆಗಿನ ತಿಳುವಳಿಕೆ ಮತ್ತು ಸೇವೆಯನ್ನು ನವದಂಪತಿಗಳಿಗೆ ಆರಂಭದಲ್ಲಿ ಈ ಸಂಸ್ಥೆ ಒದಗಿಸುತ್ತಿತ್ತು. ಆದರೆ ಮೂರನೇಯ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 1963 ರಿಂದ ಈ ಕಾರ್ಯಕ್ರಮವನ್ನು ವಿಸ್ತರಣಾ ತಳಹದಿಯ ಮೇಲೆ ಸೇವೆಯನ್ನು ಮನೆಯ ಬಾಗಿಲಿಗೆ ತೆಗೆದುಕೊಂಡು ಹೋಗಲಾಯಿತು. 1966 ರಿಂದ ಪೂರ್ಣ ಸುಸಜ್ಜಿತವಾದ ಕುಟುಂಬ ಕಲ್ಯಾಣ ಇಲಾಖೆಯಾಗಿ ರೂಪಗೊಂಡು ಕಾರ್ಯೋನ್ಮುಖವಾಯಿತು.

ಕುಟುಂಬ ಕಲ್ಯಾಣ ಸೇವೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಘಟಕಗಳು ನಗರ ಕುಟುಂಬ ಕಲ್ಯಾಣ ಕೇಂದ್ರಗಳು ಮತ್ತು ಬಾಣಂತನ ಸೇವಾ ಕೇಂದ್ರಗಳು ನಿರ್ವಹಿಸುವುವು. ತಾಯಿ ಮಕ್ಕಳ ಆರೋಗ್ಯವು ಕುಟುಂಬ ಕಲ್ಯಾಣ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸುವುದು. ಉತ್ತಮ ಸೇವೆ ಒದಗಿಸುವುದರೊಂದಿಗೆ ತಾಯಿ ಮಕ್ಕಳಿಗೆ ಬರಬಹುದಾದ ಕಾಯಿಲೆಗಳನ್ನು ತಡೆಗಟ್ಟಲು ನಿರೋಧಕ ಚುಚ್ಚುಮದ್ದುಗಳನ್ನು ರಕ್ತಹೀನತೆ ಮತ್ತು ಅನ್ನಾಂಗಗಳ ಕೊರತೆಯಿಂದ ನರಳುವ ತಾಯಂದಿರಿಗೆ ಮತ್ತು ಮಕ್ಕಳಿಗೆ ಔಷಧಿಮಾತ್ರೆಗಳನ್ನು ಸಕಾಲಕ್ಕೆ ಒದಗಿಸಿ ತಾಯಿ ಮಕ್ಕಳನ್ನು ಸಾವಿನಿಂದ ಉಳಿಸಿ ಅವರ ಆರೋಗ್ಯವನ್ನು ಉತ್ತಮಪಡಿಸಲಾಗುತ್ತಿದೆ. ಜನಸಾಮಾನ್ಯರು ಸಕ್ರಿಯವಾಗಿ ಈ ಯೋಜನೆಯಲ್ಲಿ ಪಾಲ್ಗೊಂಡು ಆ ಮೂಲಕ ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟುವ ಕಾರ್ಯಕ್ರಮದಲ್ಲಿ ಸಹಕಾರ, ಬೆಂಬಲ ನೀಡಲು ಪ್ರೋತ್ಸಾಹಿಸಿ ಬಹುಮಾನಗಳನ್ನು ನೀಡಲಾಗುವುದು.

ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಮೊದಲು ಕುಟುಂಬ ಯೋಜನಾ ಕಾರ್ಯಕ್ರಮ ಎಂದು ಕರೆಯಲಾಗುತ್ತಿತ್ತು. ತದನಂತರದಲ್ಲಿ ಅದರ ಮಹತ್ವವನ್ನು ಅರಿತು, ಆರೋಗ್ಯ ಇಲಾಖೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಂದು ಕರೆಯಲಾಯಿತು. ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಯೋಜನಾ ಅಧಿಕಾರಿಗಳೆಂದು ನಾಮಕರಣ ಮಾಡಲಾಯಿತು. ಕುಟುಂಬ ಯೋಜನೆ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕುಟುಂಬ ಯೋಜನಾ ವಿಭಾಗವನ್ನು 1964 ರಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳ ಕಛೇರಿಯಲ್ಲಿ ತೆರೆದು ಮುಂದೆ 1978 ರಲ್ಲಿ ಕುಟುಂಬ ಯೋಜನೆ ಕಾರ್ಯಕ್ರಮವನ್ನು ಕುಟುಂಬ ಕಲ್ಯಾಣ ಎಂದು ಬದಲಿಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯು ಧಾರವಾಡದಲ್ಲಿ 1978 ರಿಂದ ಕಾರ್ಯಾರಂಭ ಮಾಡಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಜಿಲ್ಲೆಯ ಸಂಪೂರ್ಣ ಉಸ್ತುವಾರಿ ಹೊಂದಿದ್ದು ಮೇಲ್ವಿಚಾರಣೆ, ಮಾರ್ಗದರ್ಶನದ ಜೊತೆಗೆ ಜಿಲ್ಲೆಯ ವಿವಿಧ ಆರೋಗ್ಯ ಹಾಗೂ ವೈದ್ಯಕೀಯ ಸಂಸ್ಥೆಗಳ ಮೂಲಕ ರಾಷ್ಟ್ರೀಯ ಹಾಗೂ ರಾಜ್ಯದ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುವರು. ಇವರ ನೆರವಿಗೆ ಜಿಲ್ಲಾ ಕುಷ್ಠರೋಗ ಅಧಿಕಾರಿಗಳು, ಜಿಲ್ಲಾ ಮಲೇರಿಯಾ ಅಧಿಕಾರಿಗಳು, ಜಿಲ್ಲಾ ಕ್ಷಯ ರೋಗ ಅಧಿಕಾರಿಗಳು, ಜಿಲ್ಲಾ ಪ್ರಯೋಗ ಶಾಲೆಯಲ್ಲಿನ ಅಧಿಕಾರಿಗಳು ವೈದ್ಯಾಧಿಕಾರಿಗಳು (ಕುಟುಂಬ ಕಲ್ಯಾಣ, ಪ್ರಸೂತಿ ಹಾಗೂ ಆರೋಗ್ಯ ಸೇವೆಗಳು), ಪ್ರಾದೇಶಿಕ ಸಹಾಯಕ ರಾಸಾಯನಿಕ ವಿಶ್ಲೇಷಕರು, ಜಿಲ್ಲಾ ಲಸಿಕಾಧಿಕಾರಿಗಳು, ಎಲ್.ಸಿ.ಡಿ.ಆರ್. ಅಧಿಕಾರಿಗಳು, ಜಿಲ್ಲಾ ಶುಶ್ರೂಷಾ ಮೇಲ್ವಿಚಾರಕರು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು, ಉಪ ಜಿಲ್ಲಾ ಶಿಕ್ಷಣಾಧಿಕಾರಿಗಳು ಮತ್ತು ಇನ್ನಿತರ ಸಿಬ್ಬಂದಿ ವರ್ಗವಿದೆ. ಜಿಲ್ಲೆಯಲ್ಲಿ 1991 ರಲ್ಲಿ ಚಿಕಿತ್ಸೆ ಪಡೆದ ಹೊರ ರೋಗಿಗಳ ಸಂಖ್ಯೆ 9,06,130 ಒಳರೋಗಿಗಳ ಸಂಖ್ಯೆ 17,691 ಹಾಗೂ

ಒಳರೋಗಿಗಳ ಸಾವಿನ ಸಂಖ್ಯೆ 178 ಇದ್ದು, ಇದು 1992 ರಲ್ಲಿ ಕ್ರಮವಾಗಿ 8,38,077, 17,759 ಹಾಗೂ 295 ಆಗಿರುತ್ತದೆ. ವಿಭಾಗ ಮಟ್ಟದಲ್ಲಿ ಜಂಟಿ ನಿರ್ದೇಶಕರು ಬೆಳಗಾವಿ ವಿಭಾಗ ಬೆಳಗಾವಿ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1993-94 ರಲ್ಲಿ ನಡೆಸಿದ ಸಂತಾನ ಹರಣಶಸ್ತ್ರ ಚಿಕಿತ್ಸೆಗಳು ವ್ಯಾಸಕ್ಟಮಿ 18, ಟ್ಯೂಬೆಕ್ಟಮಿ ಹಾಗೂ ಉದರದರ್ಶಕ ಶಸ್ತ್ರ ಚಿಕಿತ್ಸೆಗಳು 29,426 ಅಂತರದ ಹೆರಿಗೆ ವಿಧಾನಗಳಾದ, ವಂಕಿಧಾರಣೆಗಳ ಸಂಖ್ಯೆ 19,464 ನಿರೋಧ ವಿತರಣೆ 26,322 ಹಾಗೂ ನುಂಗುವ ಮಾತ್ರೆಗಳ ವಿತರಣೆ 9,010 ಆಗಿರುತ್ತವೆ. ಇದೇ ಅವಧಿಯಲ್ಲಿ ರೋಗ ಪ್ರತಿಬಂಧಕ ಚುಚ್ಚುಮದ್ದು ಕಾರ್ಯಕ್ರಮದಡಿಯಲ್ಲಿಯ ಸಾಧನೆ ಡಿಪಿಟಿ 85,423, ಪೋಲಿಯೋ 85,981, ಬಿಸಿಜಿ 95,251, ಮಿಸಲ್ಸ್ 82,521, ಟಿಟಿ ಗರ್ಭಿಣಿಯರಿಗೆ 1,02,731, ಅಂಧತ್ವ ನಿವಾರಣೆಗಾಗಿ ನಡೆಸಲ್ಪಟ್ಟ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗಳು 5,589, ಚಳಿಜ್ವರ ನಿವಾರಣೆಗಾಗಿ ಪಡೆದ ರಕ್ತಲೇಪನ 5,26,857 ಆಗಿದೆ.

**ಕೋಷ್ಟಕ 15.5 : ಧಾರವಾಡ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1965-66 ರಿಂದ 1979-80 ರವರೆಗಿನ ಕೆಲವು ವರ್ಷಗಳಲ್ಲಿಯ ಸಾಧನೆ.**

| ವರ್ಷ | ಸಂತಾನಹರಣ ಶಸ್ತ್ರ ಚಿಕಿತ್ಸೆ | | | ವಂಕಿಧಾರಣೆ | |
|---|---|---|---|---|---|
| | ಗುರಿ | ಸಾಧನೆ ವ್ಯಾಸಕ್ಟಮಿ | ಟ್ಯೂಬೆಕ್ಟಮಿ | ಗುರಿ | ಸಾಧನೆ |
| 1965-66 | 3,900 | - | 753 | 29,250 | 2113 |
| 1970-71 | 13,425 | 3,157 | 1,384 | 3,520 | 570 |
| 1975-76 | 13,950 | 1,545 | 6,258 | 2,750 | 809 |
| 1979-80 | 27,170 | 690 | 11,079 | 5,350 | 3,816 |

ಆಧಾರ : ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಧಾರವಾಡ.

**ಕೋಷ್ಟಕ 15.6 : ಧಾರವಾಡ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಕಳೆದ ಕೆಲವು ವರ್ಷಗಳ ಪ್ರಗತಿ.**

| ವರ್ಷಗಳು | ಸಂತಾನ ಹರಣ ಶಸ್ತ್ರ ಚಿಕಿತ್ಸೆ | | | | ವಂಕಿಧಾರಣೆ | ಓರಲ್ ಪಿಲ್ಸ್ | ನಿರೋಧ |
|---|---|---|---|---|---|---|---|
| | ವ್ಯಾಸೆಕ್ಟಮಿ | ಟ್ಯೂಬೆಕ್ಟಮಿ | ಉದರದರ್ಶಕ | ಒಟ್ಟು | | | |
| 1982 | 115 | 13,184* | | 13,299 | 3,355 | 3,271 | 6,344 |
| 1986 | 951 | 27,230* | | 28,181 | 13,327 | 5,744 | 29,538 |
| 1990 | 145 | 22,791* | | 22,936 | 10,880 | 4,454 | 12,776 |
| 1991 | 49 | 22,742* | | 2,22,791 | 11,124 | 5,009 | 16,006 |
| 1992-93 | 39 | 20,810 | 4,430 | 25,278 | 13,858 | 5,501 | 26,708 |
| 1993-94 | 18 | 23,667 | 5,956 | 29,641 | 18,399 | 9,046 | 22,018 |

ಮೂಲ - ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,

* ಟ್ಯೂಬೆಕ್ಟಮಿ ಉದರದರ್ಶಕ ಸೇರಿದಂತೆ.

## ಕೋಷ್ಟಕ 15.7: ಧಾರವಾಡ ಜಿಲ್ಲೆಯ 1993-94 ರಲ್ಲಿಯ ತಾಲೂಕುವಾರು ಕುಟುಂಬ ಕಲ್ಯಾಣ ಕಾರ್ಯಕ್ರಮದ ಪ್ರಗತಿ.

| ತಾಲೂಕಿನ ಹೆಸರು | ಸಂತಾನಹರಣ ಶಸ್ತ್ರಕ್ರಿಯೆ | ವಂಕಿಧಾರಣೆ | ನಿರೋಧ | (ಓರಲ್ ಪಿಲ್ಸ್) ನುಂಗುವ ಮಾತ್ರೆ |
|---|---|---|---|---|
| ಬ್ಯಾಡಗಿ | 1,003 | 693 | 911 | 326 |
| ಧಾರವಾಡ | 3,982 | 2,089 | 2,669 | 839 |
| ಗದಗ | 2,323 | 1,398 | 1,255 | 553 |
| ಹಾನಗಲ್ | 1,622 | 1,091 | 1,925 | 665 |
| ಹಾವೇರಿ | 1,913 | 1,415 | 1,826 | 717 |
| ಹಿರೇಕೆರೂರು | 1,832 | 1,118 | 1,380 | 449 |
| ಹುಬ್ಬಳ್ಳಿ | 4,975 | 2,461 | 6,091 | 1,393 |
| ಕಲಘಟಗಿ | 777 | 577 | 1,103 | 360 |
| ಕುಂದಗೋಳ | 1,108 | 801 | 1,081 | 380 |
| ಮುಂಡರಗಿ | 779 | 547 | 459 | 228 |
| ನರಗುಂದ | 767 | 590 | 572 | 292 |
| ನವಲಗುಂದ | 1,291 | 910 | 728 | 417 |
| ರಾಣೆಬೆನ್ನೂರ | 2,109 | 1,287 | 1,705 | 619 |
| ರೋಣ | 1,599 | 1,148 | 1,516 | 603 |
| ಸವಣೂರು | 826 | 780 | 989 | 363 |
| ಶಿಗ್ಗಾಂವಿ | 1,177 | 822 | 1,175 | 374 |
| ಶಿರಹಟ್ಟಿ | 1,448 | 737 | 1,323 | 468 |

ಆಧಾರ: ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಧಾರವಾಡ.

## ಕೋಷ್ಟಕ 15.8 : ಸಮೂಹ ಮಾಧ್ಯಮ ಕಾರ್ಯಕ್ರಮದಡಿಯಲ್ಲಿ ಏಪ್ರಿಲ್-87 ರಿಂದ ಮಾರ್ಚ-1992 ರವರೆಗೆ ಪ್ರತಿವರ್ಷ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಸಾಧನೆ

| ಯೋಜಿತ ಕಾರ್ಯಕ್ರಮ : | ಭೌತಿಕ ಗುರಿಯ ಘಟಕ | ವರ್ಷ | ಭೌತಿಕ ಗುರಿ | ಭೌತಿಕ ಸಾಧನೆ | ಭೌತಿಕ ಪ್ರತಿಶತ | ಆರ್ಥಿಕ ಗುರಿ | ಆರ್ಥಿಕ ಸಾಧನೆ | ಆರ್ಥಿಕ ಪ್ರತಿಶತ |
|---|---|---|---|---|---|---|---|---|
| 2 | 3 | 4 | 5 | 6 | 7 | 8 | 9 | 10 |
| ಸಮೂಹ ಮಾಧ್ಯಮ ಶಿಕ್ಷಣ | | | | | | | | |
| | 1) ಚಲನಚಿತ್ರ ಪ್ರದರ್ಶನ | 91-92 | 240 | 209 | 87 | - | - | - |
| | 2) ಫೀಲ್ಮಸ್ಟ್ರಿಪ್ಸ್ ಶೋ | ” | 1542 | 1811 | 69.8 | - | - | - |
| | 3) ವಸ್ತು ಪ್ರದರ್ಶನ | ” | 400 | 2907 | 726 | | | |
| | 4) ಶಿಕ್ಷಕರಿಗೆ ಕು.ಕ. ತರಬೇತಿ | ” | 20 | 20 | 100 | 6000 | 6000 | 100 |

| 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|
| | 5) ದಾಯಿಗಳಿಗೆ ಕು.ಕ. ತರಬೇತಿ | " | 10 | 10 | 100 | 5,000 | 5,000 | 100 |
| | 6) ಸಂಘಸಂಸ್ಥೆಗಳಿಗೆ ಕು.ಕ. ತರಬೇತಿ | " | 8 | 8 | 100 | 8,000 | 8,000 | 100 |
| | 7) ಬಹುಮಾಧ್ಯಮ ಪ್ರಚಾರ ಆಂದೋಲನ | " | - | 8 | - | - | - | - |
| | 8) ಪಿ.ಯು.ಸಿ. ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದಲ್ಲಿ ಚರ್ಚಾಸ್ಪರ್ಧೆ | " | 17 | 17 | 100 | 6,800 | 6,800 | 100 |
| | 9) ಮಹಿಳಾ ಆರೋಗ್ಯ ಸಂಘಸ್ಥಾಪನೆ ತರಬೇತಿ ಮತ್ತು ಸಭೆ | " | 290 | 267 | 92 | 47,950 | 46,481 | |
| | 10) ಎ.ವಿ. ಉಪಕರಣಗಳ ರಿಪೇರಿ | " | - | - | - | 750 | 750 | 100 |
| | 11) ವಿಶ್ವಜನಸಂಖ್ಯಾ ದಿನಾಚರಣೆ | " | - | - | - | 500 | 500 | 100 |
| | | ಒಟ್ಟು | | | | 75,000 | 73,731 | 38.3 |

ಆಧಾರ: ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಧಾರವಾಡ.

## ಕುಟುಂಬ ಕಲ್ಯಾಣ ಸಮಿತಿಗಳು

ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಉಪ ವಿಭಾಗ ಹಾಗೂ ತಾಲೂಕು ಮಟ್ಟದಲ್ಲಿ ಕುಟುಂಬ ಕಲ್ಯಾಣ ಸಮಿತಿಗಳು ಇವೆ. ಇವುಗಳಿಗೆ ಕ್ರಮವಾಗಿ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲದಾರರು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗಳು ಪ್ರತೀ ತಿಂಗಳು ತಮ್ಮ ಕ್ಷೇತ್ರ ಮಟ್ಟದಲ್ಲಿ ಸಭೆ ಸೇರಿ, ಆಯಾ ತಿಂಗಳಿನ ಕುಟುಂಬ ಕಲ್ಯಾಣ ಕಾರ್ಯಕ್ರಮದ ಪ್ರಗತಿಯನ್ನು ಪರಿಶೀಲಿಸಿ ತಮ್ಮ ಮೇಲಿನ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸುತ್ತವೆ. ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಯ ವೇಳೆ ಮೃತರಾದವರಿಗೆ ಪರಿಹಾರವನ್ನು ಪರಿಶೀಲಿಸಿ ನೀಡಲು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದಿದೆ. ಶಸ್ತ್ರಚಿಕಿತ್ಸೆ ಸಮಯದಲ್ಲಿ ಸತ್ತವರ ವಾರಸುದಾರರಿಗೆ ನೀಡುವ ಪರಿಹಾರ ಹಣದ ಗರಿಷ್ಠ ಮೊತ್ತವು 10,000 ರೂ. ಆಗಿದೆ. 1985 ರ ಮೊದಲು ಈ ಮೊತ್ತವು 5,000ರೂ. ಇದ್ದಿತು. 1989-90, 1990-91ಮತ್ತು 1991-92ರಲ್ಲಿ 10,000ರೂ. ಪರಿಹಾರ ಪಡೆದ ಪ್ರಕರಣಗಳು ಕ್ರಮವಾಗಿ 2, 6 ಮತ್ತು 4 ಆಗಿವೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿ ಕುಟುಂಬ ಕಲ್ಯಾಣ ಬ್ಯೂರೋ ಇದ್ದು, ಅದಕ್ಕೆ ಕುಟುಂಬ ಕಲ್ಯಾಣಾಧಿಕಾರಿಗಳು ಮುಖ್ಯಸ್ಥರಾಗಿರುವರು. ಈ ಬ್ಯೂರೋದಲ್ಲಿ ಶೈಕ್ಷಣಿಕ ವಿಭಾಗ, ನಿಸ್ಸಂತಾನ ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಅಂಕಿ ಅಂಶಗಳ ವಿಭಾಗ ಇದೆ. ಸಂತಾನಹರಣ ಚಿಕಿತ್ಸಾ ವಿಭಾಗದಲ್ಲಿ ಒಬ್ಬ ಸರ್ಜನರು ಒಬ್ಬ ಶುಶ್ರೂಷಕಿ ಹಾಗೂ ಒಬ್ಬ ಸಹಾಯಕರಿರುವರು, ಇವರು ಶಸ್ತ್ರತಜ್ಞರಿಗೆ ಸಹಾಯ ನೀಡುವರು ಹಾಗೂ ಸಣ್ಣ ಪುಟ್ಟ ಶಸ್ತ್ರ ಚಿಕಿತ್ಸಾ ಶಿಬಿರಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸುವರು. ಶೈಕ್ಷಣಿಕ ವಿಭಾಗದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಕ್ಷೇತ್ರ ಆರೋಗ್ಯ ಶಿಕ್ಷಕರಿದ್ದು ಅವರು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಶೈಕ್ಷಣಿಕ ಶಿಬಿರಗಳನ್ನು ತರಬೇತಿ, ಜಾಹೀರಾತು ಮೊದಲಾದ ಕಾರ್ಯಕ್ರಮಗಳನ್ನು ನೋಡಿಕೊಳ್ಳುವರು.

ಧಾರವಾಡ ಜಿಲ್ಲೆಯಲ್ಲಿ ಒಟ್ಟು 10 ಅರ್ಬನ್ ಫ್ಯಾಮಿಲಿ ವೇಲಫೇರ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಅವು ಈ ಕೆಳಗಿನಂತಿವೆ : 1) ನಗರ ಕುಟುಂಬ ಕಲ್ಯಾಣ ಕೇಂದ್ರ, ಧಾರವಾಡ (ಭಾಕುಕಕೇ), 2) ನಗರ ಕುಟುಂಬ ಹೆರಿಗೆ ಆಸ್ಪತ್ರೆ, ಧಾರವಾಡ, 3) ಆರೋಗ್ಯ ಹಾಗೂ ಕು.ಕ. ತರಬೇತಿ ಕೇಂದ್ರ, ಹುಬ್ಬಳ್ಳಿ, 4) ನಗರ ಹೆರಿಗೆ ಆಸ್ಪತ್ರೆ, ಹಳೇಹುಬ್ಬಳ್ಳಿ, 5) ನಗರ ಕುಟುಂಬ ಕಲ್ಯಾಣ ಕೇಂದ್ರ, ಗಣೇಶ ಪೇಟೆ, ಹುಬ್ಬಳ್ಳಿ, 6) ನಗರ ಕುಟುಂಬ ಕಲ್ಯಾಣ ಕೇಂದ್ರ, ತೊರವಿಗಲ್ಲಿ, ಹುಬ್ಬಳ್ಳಿ, 7) ನಗರ ಕುಟುಂಬ ಕಲ್ಯಾಣ

ಕೇಂದ್ರ, ಗಜೇಂದ್ರಗಡ, ರೋಣ ತಾಲೂಕ, 8) ನಗರ ಕುಟುಂಬ ಕಲ್ಯಾಣ ಕೇಂದ್ರ, ನರಗುಂದ, 9) ನಗರ ಕುಟುಂಬ ಕಲ್ಯಾಣ ಕೇಂದ್ರ, ರಾಣೆಬೆನ್ನೂರ ಮತ್ತು 10) ನಗರ ಕುಟುಂಬ ಕಲ್ಯಾಣ ಕೇಂದ್ರ, ಲಕ್ಷ್ಮೇಶ್ವರ.

**ಎಂ.ಟಿ.ಪಿ.ಗೆ ಅವಕಾಶ ನೀಡಿರುವ ಆಸ್ಪತ್ರೆಗಳು :** 1) ಜಿಲ್ಲಾ ಆಸ್ಪತ್ರೆ, ಧಾರವಾಡ, 2) ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ, 3) ಸಾರ್ವಜನಿಕ ಆಸ್ಪತ್ರೆ, ಹಾವೇರಿ, 4) ಸಾರ್ವಜನಿಕ ಆಸ್ಪತ್ರೆ, ಗದಗ, 5) ಸಿ ಎಚ್‌ಸಿ ಶಿಗ್ಗಾಂವಿ ಮತ್ತು 6) ಪಿ ಎಚ್‌ಯು ಕಲಘಟಗಿ ಇವೆಲ್ಲವೂ ಸರಕಾರಿ ಆಸ್ಪತ್ರೆಗಳು.

**ಶಾಲಾ ಆರೋಗ್ಯ ಕಾರ್ಯಕ್ರಮ :** ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿವಿಧೋದ್ದೇಶ ಆರೋಗ್ಯ ಕಾರ್ಯಕರ್ತರನ್ನು ನೇಮಕ ಮಾಡುವುದು (1978 ರಲ್ಲಿ) ಜಾರಿಗೆ ಬಂದ ಮೇಲೆ, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳು, ಶಾಲಾ ವಿದ್ಯಾರ್ಥಿಗಳನ್ನು ವೈದ್ಯಕೀಯ ಪರೀಕ್ಷೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿತು. ಈ ಕಾರ್ಯಕ್ರಮದನ್ವಯ ಎಲ್ಲಾ ಶಾಲಾ ಮಕ್ಕಳನ್ನು ಪರೀಕ್ಷಿಸಿ ರೋಗಿಗಳಿಗೆ ಔಷಧಿ ಕೊಡುವುದರ ಜೊತೆಗೆ ಮಕ್ಕಳಿಗೆ ಡಿ ಮತ್ತು ಟಿ ಹಾಗೂ ಟಿಟಿ ರೋಗ ನಿರೋಧಕ ಲಸಿಕೆಗಳನ್ನು ಹಾಕುವ ಕಾರ್ಯಕ್ರಮವಿದೆ. 1989-90, 1990-91 ಮತ್ತು 1991-92 ವರ್ಷಗಳಲ್ಲಿ ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಕ್ರಮವಾಗಿ 31,852, 56,451 ಮತ್ತು 97,078 ಮಕ್ಕಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು, 1,828, 19,172 ಮತ್ತು 13,740 ವಿದ್ಯಾರ್ಥಿಗಳು ಅನಾರೋಗ್ಯ ಹಾಗೂ ದೈಹಿಕ ಕುಂದು ಕೊರತೆ ಹೊಂದಿದ್ದು, ಅದೇ ವರ್ಷಗಳ ಅವಧಿಯಲ್ಲಿ 1,828, 19,172 ಮತ್ತು 18,740 ಮಕ್ಕಳಿಗೆ ಉಪಚಾರ ನೀಡಲಾಯಿತು.

**ಸಮಗ್ರ ಬಾಲವಿಕಾಸ ಯೋಜನೆ ಕಾರ್ಯಕ್ರಮ :** ದೇಶದಲ್ಲಿ ಸಮಗ್ರ ಬಾಲವಿಕಾಸ ಯೋಜನೆಯನ್ನು 1975 ರಲ್ಲಿ ಪ್ರಾರಂಭಿಸಲಾಯಿತು. ಇದೊಂದು ಬಹುಮುಖ ಕಾರ್ಯಕ್ರಮವಾಗಿದೆ. ಈ ಯೋಜನೆಯ ಸೌಲಭ್ಯವನ್ನು ಪಡೆಯತಕ್ಕವರೆಂದರೆ, ಗರ್ಭಿಣಿಯರು, ಮಕ್ಕಳಿಗೆ ಹಾಲುಣಿಸುವ ತಾಯಂದಿರು, 15 ರಿಂದ 44 ವಯಸ್ಸಿನ ಸ್ತ್ರೀಯರು ಹಾಗೂ 6 ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳು. ಈ ಕಾರ್ಯಕ್ರಮದನ್ವಯ ಲಾಭ ಪಡೆಯುವವರಿಗೆ ಪೌಷ್ಟಿಕಾಂಶದ ಕೊರತೆಯನ್ನು ನೀಗಲು ಮತ್ತು ಆರೋಗ್ಯವನ್ನು ಉತ್ತಮಪಡಿಸಲು ಹಾಗೂ ಆಯುರ್‌ವೃದ್ಧಿಗೆ ಆಹಾರದ ಜೊತೆಗೆ ಅನ್ನಾಂಗಗಳನ್ನು ಹಾಗೂ ಪೌಷ್ಟಿಕಾಂಶವನ್ನು ಅಂಗನವಾಡಿ ಕೇಂದ್ರಗಳ ಮೂಲಕ ಒದಗಿಸಲಾಗುವುದು. ವೈದ್ಯಾಧಿಕಾರಿಗಳು ಹಾಗೂ ದಾದಿಯರು ಅಂಗನವಾಡಿಗಳಿಗೆ ಭೇಟಿಕೊಟ್ಟು, ಮಕ್ಕಳನ್ನು ಹಾಗೂ ತಾಯಂದಿರನ್ನು ಪರೀಕ್ಷಿಸುವರು. ಅವರಲ್ಲಿ ಇರುವ ಆರೋಗ್ಯ ವಿವರ ಚೀಟಿಗಳಲ್ಲಿ ಆರೋಗ್ಯ ವಿವರಗಳನ್ನು ಗುರುತಿಸಿ, ಸಲಹೆ ನೀಡುವರು. ಒಂದು ವೇಳೆ ಅನ್ನಾಂಗ ಪೌಷ್ಟಿಕಾಂಶ ಕೊರತೆ ಇದ್ದಲ್ಲಿ ನಿವಾರಣಾ ವ್ಯವಸ್ಥೆ ಮಾಡುವರು. ಗುಣಪಡಿಸಬಹುದಾದ ರೋಗಗಳಿದ್ದಲ್ಲಿ ಅಲ್ಲಿಯೇ ಅವರಿಗೆ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಚಿಕಿತ್ಸೆ ಅಗತ್ಯಕಂಡುಬಂದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲವೆ ಜಿಲ್ಲಾ ಆಸ್ಪತ್ರೆಗೆ ಹೋಗುವಂತೆ ಸಲಹೆ ನೀಡುವರು. 0-6 ವರ್ಷದ ಮಕ್ಕಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ, ತಾಯಂದಿರಿಗೆ, ಎಳೆ ಮಕ್ಕಳ ರೋಗಗಳ ವಿರುದ್ಧ ಡಿಪಿಟಿ, ಬಿಸಿಜಿ ಮೊದಲಾದ ರೋಗ ನಿರೋಧಕಗಳನ್ನು ನೀಡುವರು.

ಧಾರವಾಡ ಜಿಲ್ಲೆಯಲ್ಲಿ ಸಮಗ್ರ ಬಾಲವಿಕಾಸ ಯೋಜನೆಯು ಪ್ರಥಮವಾಗಿ ಧಾರವಾಡ ಗ್ರಾಮೀಣ ಪ್ರದೇಶದಲ್ಲಿ 1976-77 ರಲ್ಲಿ ಜಾರಿಗೆ ಬಂದಿತು. ತದನಂತರದಲ್ಲಿ ರಾಣೆಬೆನ್ನೂರ (1981-82), ಹಾನಗಲ್ (1982-83), ಹಿರೇಕೆರೂರ (1982-83), ಶಿರಹಟ್ಟಿ (1982-83), ಗದಗ (1983-84), ಮುಂಡರಗಿ (1983-84), ರೋಣ (1985-86), ಹುಬ್ಬಳ್ಳಿ (1986-87), ಹುಬ್ಬಳ್ಳಿ ಧಾರವಾಡ ನಗರ ಪ್ರದೇಶ (1991-92) ಸವಣೂರು ಗ್ರಾಮಾಂತರ ಮತ್ತು ನಗರ ಪ್ರದೇಶ (1991-92) ಮತ್ತು ಕಲಘಟಗಿ ಗ್ರಾಮೀಣ (1992-93) ತಾಲೂಕುಗಳಲ್ಲಿ ಯೋಜನೆ ಪ್ರಾರಂಭಗೊಂಡಿತು. 1990-91 ಹಾಗೂ 1991-92 ನೇ ಸಾಲಿನಲ್ಲಿ ಯೋಜನೆಯ ರೀತ್ಯಾ ನೀಡಲಾದ ರೋಗ ನಿರೋಧಕಗಳು ಕ್ರಮವಾಗಿ 47,584/18,487, ಬಿಸಿಜಿ; 39,472/43,777, ಡಿಪಿಟಿ; 39,943/44,095, ಪೋಲಿಯೋ ನಿರೋಧಕ; 38,829/42,532, ಧಡಾರ ಲಸಿಕೆ; (ಮೀಸಲ್ಸ್) ಹಾಗೂ ತಾಯಂದಿರಿಗೆ 45,339/53,537 ಟಿಟಿ ನೀಡಲಾಗಿದೆ. (ವಿವರಗಳಿಗೆ 16 ನೇ ಅಧ್ಯಾಯ ನೋಡಿರಿ).

**ತಾಯಿ ಹಾಗೂ ಮಕ್ಕಳ ಆರೋಗ್ಯ ಕಾರ್ಯಕ್ರಮ :** ಈ ಕಾರ್ಯಕ್ರಮ(ಎಂ.ಸಿ.ಎಚ್.)ದಡಿಯಲ್ಲಿ ಪೌಷ್ಟಿಕ ಆಹಾರ ಕಾರ್ಯಕ್ರಮ, ರೋಗನಿರೋಧ ಲಸಿಕೆಗಳ ಕಾರ್ಯಕ್ರಮ, ರಕ್ತಹೀನತೆಯನ್ನು ತಡೆಗಟ್ಟಲು ಕಬ್ಬಿಣದ ಅಂಶ ಹಾಗೂ ಇತರ ಅನ್ನಾಂಗ,

ಮಾತ್ರೆಗಳ ವಿತರಣೆ ಮೊದಲಾದವು ಇವೆ. ಕುಟುಂಬ ಕಲ್ಯಾಣ ಯೋಜನೆ ಯಶಸ್ವಿ ಆಗಬೇಕಾದರೆ ತಾಯಿಮಕ್ಕಳ ಆರೋಗ್ಯ ಅಭಿವೃದ್ಧಿಯು ಅತ್ಯವಶ್ಯಕವಾಗಿದೆ. ಮಕ್ಕಳ ಹಾಗೂ ಗರ್ಭಿಣಿ ಸ್ತ್ರೀಯರ ಅಕಾಲ ಮರಣದ ಸಂಖ್ಯೆ ಕಡಿಮೆ ಆದಷ್ಟು ಜನರಲ್ಲಿ ನಂಬಿಕೆ ಮೂಡಿ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಅಧಿಕ ಸಂಖ್ಯೆ ಜನ ಪಾಲ್ಗೊಳ್ಳುವರು. ಆದ್ದರಿಂದಲೇ ಮಕ್ಕಳ ಮತ್ತು ತಾಯಂದಿರ ಆರೋಗ್ಯಕ್ಕೆ ಹೆಚ್ಚಿನ ಗಮನ ಕೊಡುವುದು ಕುಟುಂಬ ಕಲ್ಯಾಣ ಕಾರ್ಯಕ್ರಮದ ಮುಖ್ಯ ಯೋಜನೆಗಳಲ್ಲೊಂದು. ತಾಯಿ-ಮಕ್ಕಳ ಆರೋಗ್ಯ ಕಾರ್ಯಕ್ರಮದ ಅಂಗವಾಗಿ ಇತ್ತೀಚೆಗೆ ರಾಜ್ಯದ ಎಲ್ಲ ಜಿಲ್ಲೆಗಳಿಗೂ ರೋಗನಿರೋಧಕ ಲಸಿಕೆಗಳನ್ನು ಕೊಡುವ ಕಾರ್ಯಕ್ರಮವನ್ನು ಸೂಕ್ತವಾಗಿ ನಿಭಾಯಿಸಲು ಜಿಲ್ಲಾ ಮಟ್ಟದಲ್ಲಿ ರೋಗ ನಿರೋಧಕ ಅಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿ ನಿಯಮಿಸಲಾಗಿದೆ. ಗಂಟಲುಬೇನೆ, ನಾಯಿ ಕೆಮ್ಮು, ಧನುರ್ವಾಯು, ಪೋಲಿಯೋ, ಕ್ಷಯ, ದಡಾರ, ವಿಷಮಶೀತ ಜ್ವರ ಮೊದಲಾದ ಮಾರಕ ರೋಗಗಳಿಂದ ಮಕ್ಕಳನ್ನು ಸಂರಕ್ಷಿಸಲು ಈ ರೋಗಗಳಿಗೆ ರೋಗನಿರೋಧಕ ಲಸಿಕೆಗಳನ್ನು ಕೊಡಲಾಗುತ್ತಿದೆ. ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಘಟಕಗಳಲ್ಲಿ ಮಕ್ಕಳ ಮತ್ತು ಗರ್ಭಿಣಿ ಸ್ತ್ರೀಯರ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ತಾಯಿಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ 1985-86 ರಿಂದ 1993-94 ರವರೆಗೆ ಜಿಲ್ಲೆಯಲ್ಲಿ ಸಾಧಿಸಲಾಗಿರುವ ಅಂಕಿ ಅಂಶಗಳ ಪ್ರಗತಿಯನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ. (ಕೋಷ್ಟಕ 15.9). 1987-88 ರಿಂದ 1991-92 ರವರೆಗೆ ಮಾರಕ ರೋಗ ತಗುಲಿ ಮರಣ ಹೊಂದಿದ ವಿವರವನ್ನು ಕೋಷ್ಟಕ 15.10ದಲ್ಲಿ ಕೊಡಲಾಗಿದೆ.

**ಮೌಖಿಕ ಪುನರ್ಜಲೀಕರಣ ಯೋಜನೆ :** ಮೌಖಿಕ ಪುನರ್ಜಲೀಕರಣ ಯೋಜನೆಯು (ಓ.ಆರ್.ಎಸ್.) ಸಾರ್ವತ್ರಿಕ ಲಸಿಕೆ ನೀಡುವ ಕಾರ್ಯಕ್ರಮವು ಜಾರಿಯಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬಂದಿದೆ. ಮಕ್ಕಳಿಗೆ ಅತಿಯಾದ ಭೇದಿ ಆದಾಗ ನೀರಿನ ಅಂಶ ದೇಹದಲ್ಲಿ ಕ್ಷಯವಾಗಿ ಅದರಿಂದಲೇ ಮರಣ ಸಂಭವಿಸುತ್ತದೆ. ಇದರ ನಿವಾರಣೆಗಾಗಿ ಪುನರ್ಜಲೀಕರಣ ಚಿಕಿತ್ಸೆ ಅವಶ್ಯ. ಈ ಕಾರ್ಯಕ್ರಮದಂತೆ ಅಧಿಕಾರಿಗಳಿಂದ ಹಿಡಿದು ಆರೋಗ್ಯ ಸಹಾಯಕರ ವರೆಗೆ ಈ ಚಿಕಿತ್ಸೆಗೆ ತರಬೇತಿ ಕೊಡುವುದರ ಜೊತೆ ಮೌಖಿಕ ಪುನರ್ಜಲೀಕರಣದ ಲವಣದ ಪೊಟ್ಟಣಗಳನ್ನು ಒದಗಿಸಲಾಗುತ್ತದೆ. ಈ ಬಗ್ಗೆ ಜನಸಾಮಾನ್ಯರಿಗೆ ತಿಳುವಳಿಕೆ ನೀಡುವ ಹಾಗೂ ಅದನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮ ಇದಾಗಿದೆ.

**ಔಷಧ ನಿಯಂತ್ರಣ**

ಗ್ರಾಹಕರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ರಾಜ್ಯದಲ್ಲಿಯ ಔಷಧಿಗಳ ತಯಾರಿಕೆ ಹಂಚಿಕೆ, ಮಾರಾಟ ಮತ್ತು ಗುಣಮಟ್ಟಗಳ ಮೇಲೆ ನಿಯಂತ್ರಣ ತರುವ 1940 ರ ಔಷಧ ಮತ್ತು ಕಾಂತಿವರ್ಧಕಗಳ ಅಧಿನಿಯಮದಾನ್ವಯೆ ಜನರಿಗೆ ಉತ್ತಮ್ಮ ಗುಣಮಟ್ಟದ ಔಷಧಿಗಳು ದೊರೆಯುವಂತೆ ಮಾಡಲು ಜಿಲ್ಲೆಯಲ್ಲಿ ಔಷಧ ಪರಿವೀಕ್ಷಕರ ಕಛೇರಿಯು ಧಾರವಾಡದಲ್ಲಿ ಇದ್ದು ಬೆಳಗಾವಿಯಲ್ಲಿರುವ ಸಹಾಯಕ ಔಷಧ ನಿಯಂತ್ರಕರು, ಬೆಳಗಾವಿ ವಿಭಾಗ, ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಔಷಧಿ ಪರಿವೀಕ್ಷಕರು ಜಿಲ್ಲೆಯ ಎಲ್ಲ ಔಷಧಿ ಹಾಗೂ ಕಾಂತಿವರ್ಧಕ ತಯಾರಿಕಾ ಘಟಕ ಹಾಗೂ ಮಾರಾಟ ಆವರಣಗಳ ತನಿಖೆ ನಡೆಸುವುದು, ಆರೋಗ್ಯ ರಕ್ಷಣೆಯ ಜವಾಬ್ದಾರಿ, ಔಷಧಿಗಳು ನಿಯಂತ್ರಿತ ಬೆಲೆಯಲ್ಲಿ ದೊರಕುವಂತೆ ಮಾಡುವುದು, ಔಷಧಿ ನಿಯಂತ್ರಣ ಮುಂತಾದ ಕಾರ್ಯಗಳ ಜವಾಬ್ದಾರಿಯನ್ನು ಹೊಂದಿರುವರು.

ಪರಿವೀಕ್ಷಕರು ಔಷಧಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಇತರ ನಿಯಮಗಳಾದ 1) ಔಷಧಿಗಳ (ಬೆಲೆ ನಿಯಂತ್ರಣ) ಆದೇಶ 1987, 2) ಔಷಧ ಮತ್ತು ಮಂತ್ರಮಾಟ (ಆಕ್ಷೇಪಣೀಯ) ಜಾಹಿರಾತು) ಅಧಿನಿಯಮ 1954, 3) ಫಾರ್ಮಸಿ ಅಧಿನಿಯಮ 1948 ಮತ್ತು ಶಿಕ್ಷಣ ನಿಯಮಾವಳಿ, 4) ಆಮದು ವ್ಯಾಪಾರ ವಿನಿಮಯ ರೀತ್ಯ ಔಷಧ ತಯಾರಿಕಾ ಉದ್ಯಮಗಳಿಗೆ ಅವಶ್ಯಕ ಯೋಗ್ಯತಾ ಪತ್ರ ನೀಡುವಿಕೆ, 5) ವಿಷ ವಸ್ತುಗಳ ಅಧಿನಿಯಮ 1919 ಹಾಗೂ ಕರ್ನಾಟಕ ವಿಷ ವಸ್ತುಗಳ ಅಧಿನಿಯಮ 1966,ಮತ್ತು 6) ಮಾದಕ ಔಷಧಿಗಳ ಹಾಗೂ ಮಾನಸಿಕ ಭ್ರಮಾಜನಕ ವಸ್ತುಗಳ ಅಧಿನಿಯಮ 1985 ಆಗಿರುತ್ತವೆ.

ಇಲಾಖಾ ಪರಿವೀಕ್ಷಕ ಸಿಬ್ಬಂದಿಯವರು ನಕಲಿ ಔಷಧ ತಯಾರು ಮಾಡುವವರನ್ನು ಕಾನೂನಿನ ರೀತ್ಯ ಶಿಕ್ಷೆಗೊಳಪಡಿಸುವರು. ಔಷಧಿಗಳನ್ನು ಪರೀಕ್ಷಿಸಲು ಇಲಾಖೆಯು ಬೆಂಗಳೂರಿನಲ್ಲಿ ಒಂದು ಪ್ರಯೋಗ ಶಾಲೆ ಹೊಂದಿದೆ. ಧಾರವಾಡ ಜಿಲ್ಲೆಯಲ್ಲಿ 1992-93

## ಕೋಷ್ಟಕ 15.9 : ಧಾರವಾಡ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ರೋಗ ನಿರೋಧಕ ಲಸಿಕೆ ಪ್ರಯೋಗದ ಸಾಧನೆಯ ವಿವರ.

| ಕ್ರಮ ಸಂಖ್ಯೆ | ವರ್ಷ | ಗುರಿ ಡಿ.ಪಿ.ಟಿ ಪೋಲಿಯೋ ಬಿಸಿಜಿ ಮೀಸಲ್ಸ್ | ಡಿಪಿಟಿ | | ಪೋಲಿಯೋ | | ಬಿಸಿಜಿ | | ಮೀಸಲ್ಸ್ | | ಟಿ.ಟಿ. ಗರ್ಭಿಣಿಯರಿಗೆ | | | ಟಿ.ಟಿ.10 ವರ್ಷ | | | ಟಿ.ಟಿ. 16 ವರ್ಷ | | | ಡಿ ಮತ್ತು ಟಿ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಸಾಧನೆ | ಪ್ರತಿಶತ | ಸಾಧನೆ | ಪ್ರತಿಶತ | ಸಾಧನೆ | ಪ್ರತಿಶತ | ಸಾಧನೆ | ಪ್ರತಿಶತ | ಗುರಿ | ಸಾಧನೆ | ಪ್ರತಿಶತ | ಗುರಿ | ಸಾಧನೆ | ಪ್ರತಿಶತ | ಗುರಿ | ಸಾಧನೆ | ಪ್ರತಿಶತ | ಗುರಿ | ಸಾಧನೆ | ಪ್ರತಿಶತ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 |
| 1 | 1985-86 | 71,400 | 47,093 | 65.9 | 47,466 | 66.4 | 55,503 | 77.7 | - | - | 64,790 | 65,238 | 100.7 | 23,560 | 17,562 | 74.5 | 11,780 | 7,608 | 64.5 | 43,500 | 48,957 | 107.7 |
| 2 | 1989-90 | 76,200 | 65,866 | 86.4 | 66,254 | 86.9 | 83,107 | 109.0 | 54,831 | 71.9 | 98,400 | 8,6257 | 87.6 | 72,420 | 57,252 | 79.0 | 69,000 | 38,244 | 55.4 | 74,860 | 74,536 | 99.4 |
| 3 | 1991-92 | 89,700 | 80,248 | 89.4 | 80,693 | 89.9 | 88,943 | 99.1 | 75,414 | 84.0 | 97,500 | 98,907 | 101.4 | 62,000 | 67,231 | 108.4 | 62,000 | 55,221 | 89.0 | 68,900 | 77,821 | 112.9 |
| 4 | 1992-93 | 92,400 | 77,090 | 83.4 | 78,834 | 85.3 | 89,048 | 96.4 | 72,859 | 78.9 | 99,400 | 99,218 | 99.8 | 65,000 | 69,226 | 107.1 | 65,000 | 59,699 | 91.8 | 71,000 | 75,653 | 1065 |
| 5 | 1993-94 | 97,700 | 85,423 | 87.4 | 85,981 | 88.0 | 95,251 | 87.5 | 82,521 | 84.5 | 1,08,800 | 10,2731 | 94.94 | 78,358 | | 85.6 | 87,300 | 67,137 | 76.9 | 94,700 | 85,246 | 90.0 |

ಆಧಾರ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ - ಧಾರವಾಡ.

ಕೋಷ್ಟಕ 15.10 : ಆರು ಮಾರಕ ರೋಗ ತಗುಲಿದ ಹಾಗೂ ಮರಣ ಹೊಂದಿದ ವರದಿ 1987-88 ರಿಂದ 1991-92 ರವರೆಗೆ

| ಕ್ರ ನಂ | ವರ್ಷ | ಡಿಫ್ತೀರಿಯಾ | | ಪರ್ಟುಸಿಸ್ | | ಟಿಟ್ಯಾನಿನಿಯೊ ನೇಟರಮ್ | | ಟಿಟ್ಯಾನಸ್ | | ಪೋಲಿಯೋ ಮಲೈಟೀಸ | | ಕ್ಷಯ | | ಮೀಸಲ್ಸ್ | | ವಿಷಮಶೀತ ಜ್ವರ | |
|---|---|---|---|---|---|---|---|---|---|---|---|---|---|---|---|---|---|
| | | ತಗುಲಿದ್ದು | ಮರಣ | ತಗುಲಿದ್ದು | ಮರಣ | ತಗುಲಿದ್ದು | ಮರಣ | ತಗುಲಿದ್ದು | ಮರಣ | ತಗುಲಿದ್ದು | ಮರಣ | ತಗುಲಿದ್ದು | ಮರಣ | ತಗುಲಿದ್ದು | ಮರಣ | ತಗುಲಿದ್ದು | ಮರಣ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 16 | 16 | 17 | 18 |
| 1 | 1987-88 | 1 | - | 3 | 1 | 7 | - | - | - | 10 | - | 183 | 1 | 1027 | 6 | 109 | - |
| 2 | 1988-89 | 7 | - | 22 | - | 1 | 1 | 13 | 2 | 14 | 1 | 176 | 1 | 1544 | 5 | 24 | - |
| 3 | 1989-90 | 12 | - | 5 | - | 2 | 2 | 16 | 2 | 18 | 1 | 54 | 1 | 620 | 5 | 21 | 1 |
| 4 | 1990-91 | 3 | - | 5 | - | 2 | - | 3 | 2 | 36 | - | 63 | - | 664 | 3 | - | - |
| 5 | 1991-92 | 4 | 2 | 4 | - | 2 | 1 | 3 | - | 16 | - | 80 | - | 1096 | 6 | - | - |

ಆಧಾರ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ-ಧಾರವಾಡ.

ರಲ್ಲಿ 721 ಲೈಸೆನ್ಸ್ ಪಡೆದ ಔಷಧಿ ಅಂಗಡಿಗಳು ಇದ್ದವು; ಹಾಗೂ 481 ಅರ್ಹತೆ ಪಡೆದ ಔಷಧಿ ವ್ಯಾಪಾರಿಗಳು ಇದ್ದರು. ಜಿಲ್ಲೆಯಿಂದ 139 ಮಾದರಿಗಳನ್ನು ಬೆಂಗಳೂರಿನ ಔಷಧಿ ನಿಯಂತ್ರಣ ಪ್ರಯೋಗಶಾಲೆಗೆ ಪರೀಕ್ಷೆಗಾಗಿ ಕಳುಹಿಸಿ ಕೊಡಲಾಗಿತ್ತು. ಜಿಲ್ಲೆಯಲ್ಲಿ 24 ಔಷಧಿ ತಯಾರಿಕಾ ಘಟಕಗಳು ಹಾಗೂ ಎರಡು ಕಾಂತಿವರ್ಧಕಗಳ ಘಟಕಗಳು (31.12.1992) ಇದ್ದವು. ನಾಲ್ಕು ಫಾರ್ಮಸಿ ಕಾಲೇಜುಗಳು ಜಿಲ್ಲೆಯಲ್ಲಿ ಇದ್ದು, 180 ಜನರಿಗೆ ಡಿಪ್ಲೊಮಾ ಪ್ರವೇಶಾವಕಾಶವಿದೆ.

**ಭಾರತೀಯ ವೈದ್ಯಕೀಯ ಸಂಘ**

ಭಾರತೀಯ ವೈದ್ಯಕೀಯ ಸಂಘದ ಅನೇಕ ಶಾಖೆಗಳು ಕರ್ನಾಟಕದಲ್ಲಿ ಇದ್ದು, ಧಾರವಾಡ ಜಿಲ್ಲೆಯಲ್ಲಿ 12 ಶಾಖೆಗಳನ್ನು ಈ ಸಂಘ ಹೊಂದಿದೆ. ಸಂಘವು ಆರೋಗ್ಯ ಕಾರ್ಯಕ್ರಮ, ಕುಟುಂಬ ಕಲ್ಯಾಣ ಕಾರ್ಯಕ್ರಮ, ತಾಯಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ ಹಾಗೂ ಇನ್ನಿತರ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ತನ್ನ ಸದಸ್ಯರು ಅವರವರ ಕಾರ್ಯಕ್ಷೇತ್ರಗಳಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಪ್ರಚೋದಿಸುವುದಲ್ಲದೆ ತನ್ನ ಸದಸ್ಯರಿಂದ ಆರೋಗ್ಯ ತಪಾಸಣಾ ಶಿಬಿರಗಳನ್ನು, ಸಂತಾನಹರಣ ಚಿಕಿತ್ಸೆ, ನೇತ್ರ ಪರೀಕ್ಷೆ, ರೋಗ ನಿರೋಧಕ ಚುಚ್ಚು ಮದ್ದು ಹಾಕುವ ಕಾರ್ಯಕ್ರಮ, ಕುಷ್ಠ, ಕ್ಯಾನ್ಸರ, ಕ್ಷಯ ಮುಂತಾದ ರೋಗಗಳ ತಪಾಸಣೆ ಹಾಗೂ ಚಿಕಿತ್ಸೆ ಕೈಗೊಳ್ಳುವಂತೆ ಪ್ರೇರೇಪಿಸುವುದು, ಇವನ್ನೆಲ್ಲ ನಡೆಸುತ್ತಿದೆ. ಜನ ಸಾಮಾನ್ಯರ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಸಂಘವು ಭಾಷಣಗಳನ್ನು, ಚರ್ಚಾಸ್ಪರ್ಧೆಗಳನ್ನು ಹಾಗೂ ತರಬೇತಿ ಶಿಬಿರಗಳನ್ನು, ವಿಚಾರ ಗೋಷ್ಠಗಳನ್ನು ಏರ್ಪಡಿಸುವುದು, ತನ್ನ ಸದಸ್ಯರಿಗೆ ತಮ್ಮ ವೃತ್ತಿಯಲ್ಲಿ ವಿಶೇಷ ವಿಷಯ ಪರಿಣತಿ ತರಬೇತಿಯನ್ನು ಸಹ ಸಂಘವು ಕಾಲಕಾಲಕ್ಕೆ ಒದಗಿಸುತ್ತದೆ.

ಧಾರವಾಡ ಜಿಲ್ಲೆಯಲ್ಲಿರುವ ಶಾಖೆಗಳನ್ನು ಈ ಕೆಳಗೆ ಕೊಟ್ಟಿದ್ದು, ಆಯಾ ಶಾಖೆಗಳ ಹೆಸರುಗಳ ಮುಂದೆ ನೊಂದಣಿ ಹೊಂದಿದ ಸದಸ್ಯರ ಸಂಖ್ಯೆಯನ್ನು ಆವರಣದಲ್ಲಿ ಕೊಡಲಾಗಿದೆ. ಧಾರವಾಡ (144), ಹುಬ್ಬಳ್ಳಿ (298), ಕೆ ಎಂ ಸಿ ಹುಬ್ಬಳ್ಳಿ (89), ರೋಣ (13), ಹಾನಗಲ (21), ನರಗುಂದ (11), ಗದಗ (70), ರಾಣೆಬೆನ್ನೂರು (33), ಹಾವೇರಿ (24), ಲಕ್ಷ್ಮೇಶ್ವರ (16) ಹಾಗೂ ಸವಣೂರು (7).